
ಸಂಪುಟ 24 ಸಂಚಿಕೆ 24
ಜೂನ್ 16, 2002 ಬೆಲೆ ರೂ. 3.00

# ಐಕ್ಯರಂಗ

ದುಡಿವ ಜನರ ಪ್ರಾಣಮಿತ್ರ


http:// www.geocities.com/aikyaranga



## ಪೆಟ್ರೋಲ್-ಡೀಸೆಲ್ ಬೆಲೆ ಏರಿಕೆ ಅನಗತ್ಯ ಹೊರೆ

## ತಿಲಕನಗರ ಗಲಭೆ : ಹಿಂದಿರುವ ಸತ್ಯವೇನು?





## ಕೃಷಿ ಅಜ್ಜಿಗೆ ನಮನ

## ಸುರ್ಜಿತ್ ಸಂದರ್ಶನ



# ಕಾಮ್ರೇಡ್ ಇಎಂಎಸ್ ನಿಧನ

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



## ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 98

**ಕಳೆದ ಸಂಚಿಕೆಯಲ್ಲಿ ಜ್ಯೋತಿಬಸುರವರ ದ.ಆಫ್ರಿಕಾ ಪ್ರವಾಸ, ಜನತಾದಳದ ವಿಭಜನೆ, ಉತ್ತರ ಪ್ರದೇಶದಲ್ಲಿ ಕಲ್ಯಾಣ ಸಿಂಗ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಮತ್ತು ಪತನ, ರಾಷ್ಟ್ರಪತಿ ಆಳ್ವಿಕೆ ಮತ್ತು ಕೇಂದ್ರದ ಗುಜ್ರಾಲ್ ಸರ್ಕಾರ ನಿರ್ಗಮನ ಈ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಕಾಂಗ್ರೆಸ್‌ನ ಬೇಜವಾಬ್ದಾರಿಯಿಂದ 12ನೇ ಲೋಕಸಭಾ ಚುನಾವಣೆ, ಮತ್ತೆ ವಾಜಪೇಯಿ ಅಧಿಕಾರಕ್ಕೆ, 22 ಪಕ್ಷಗಳ ನೀತಿಬಾಹಿರ ಒಕ್ಕೂಟ ಅಸ್ತಿತ್ವಕ್ಕೆ, ಕಾಮ್ರೇಡ್ ಇಎಂಎಸ್ ನಿಧನ, ಭಾರತದ ವಿದೇಶಾಂಗ ನೀತಿಗೆ ಪೆಟ್ಟು, ಅಣುಸ್ಫೋಟ, ವಾಜಪೇಯಿ ಭೇಟಿ ಈ ಬಗ್ಗೆ ಓದಿರಿ...**

ಚುನಾವಣೆ ನಡೆಯಬೇಕೆಂದು ನಾವು ಆಗ್ರಹಿಸಿದೆವು. ನಿರ್ಧರಿಸುವ ಅವಕಾಶವನ್ನು ಜನತೆಗೆ ನೀಡಬೇಕಿತ್ತು. ಬಿಜೆಪಿಗಾಗಲೀ ಕಾಂಗ್ರೆಸ್‌ಗಾಗಲೀ ಬಹುಮತ ಇರಲಿಲ್ಲ. ಈ ನಡುವೆ ಬಿಜೆಪಿ ಪಕ್ಷಾಂತರಕ್ಕೆ ಬಹಿರಂಗ ಆಹ್ವಾನ ನೀಡಿತು. ವಾಸ್ತವವಾಗಿ 40 ಕಾಂಗ್ರೆಸ್ ಎಂ.ಪಿಗಳು ಬಿಜೆಪಿಗೆ ಒಲವು ತೋರಿಸಿದರು. ಆದರೆ ಹಾಗೇ ಮಾಡಿದರೆ ಅವರು ಪಕ್ಷಾಂತರ ನಿಷೇಧ ಕಾನೂನಿಗೆ ಒಳಪಡುತ್ತಿದ್ದರು. ಹೀಗಾಗಿ ಸರಕಾರ ರಚಿಸಲು ಬಿಜೆಪಿ ಕೂಡ ವಿಫಲವಾಯಿತು. ಸಂಯುಕ್ತರಂಗ ದೃಢವಾಗಿತ್ತು, ಒಗ್ಗಟ್ಟಿನಂತಿತ್ತು. ಇದೊಂದು ದೊಡ್ಡ ರಾಜಕೀಯ ಸಾಧನೆಯಾಗಿದೆ.

ಡಿಸೆಂಬರ್ ನಾಲ್ಕರಂದು ದೊಡ್ಡ ರಾಜಕೀಯ ಸಾಧನೆಯಾಗಿದೆ. ಮಧ್ಯಂತರ ಚುನಾವಣೆ ನಡೆಯಬೇಕಾಯಿತು. ಕಾಂಗ್ರೆಸ್‌ನ ಬೇಜವಾಬ್ದಾರಿತನ ದೇಶದ ಮೇಲೆ 12ನೇ ಸಾರ್ವತ್ರಿಕ ಚುನಾವಣೆಯನ್ನು ಹೇರಿತು.

### ಮತ್ತೆ ವಾಜಪೇಯಿ

ಫೆಬ್ರವರಿ 16, 22,28ರಂದು ಮತದಾನ ನಡೆಯಿತು. ಸಂಯುಕ್ತರಂಗ, ಕಾಂಗ್ರೆಸ್ ಮತ್ತು ಬಿಜೆಪಿ ಪ್ರಮುಖ ಸ್ಪರ್ದಿಗಳಾಗಿದ್ದವು. ಚುನಾವಣೆಗೆ ಮುನ್ನ ಬಂಗಾಳದಲ್ಲಿ ಕಾಂಗ್ರೆಸ್ ಪಕ್ಷ ಒಡೆಯಿತು. ಯುವ ಕಾಂಗ್ರೆಸ್ ನಾಯಕಿ ಮಮತಾ ಬ್ಯಾನರ್ಜಿ ತನ್ನ ಪಕ್ಷದಿಂದ ದೂರ ಸಿಡಿದು ಹೋಗಿ ಬಿಜೆಪಿ ಜತೆ ಸೇರಿ ಚುನಾವಣೆಗಳಲ್ಲಿ ಸ್ಪರ್ಧಿಸಿದರು. ರಾಜ್ಯದ 42 ಸ್ಥಾನಗಳ ಪೈಕಿ ಎಡರಂಗ 33ರಲ್ಲಿ ಗೆದ್ದಿತು. ಸಿಪಿಐ(ಎಂ) ಒಂದೇ 24ರಲ್ಲಿ ಜಯಿಸಿತು. ಆರ್‌ಎಸ್‌ಪಿ ನಾಲ್ಕು, ಫಾರ್ವರ್ಡ್ ಬ್ಲಾಕ್ ಎರಡು ಮತ್ತು ಸಿಪಿಐ ಮೂರು ಸ್ಥಾನಗಳನ್ನು ಗೆದ್ದಿತು. ಡಂಡಂ ಮತ್ತು ಬಾರಾಸಾತ್ ಕ್ಷೇತ್ರಗಳಲ್ಲಿ ನಾವು ಸೋತೆವು. ಆದರೆ ಕಳೆದ ಬಾರಿ ಸೋತಿದ್ದ ಜಂಗೀಪುರ ಮತ್ತು ತಮಲುಕ್ ಕ್ಷೇತ್ರಗಳಲ್ಲಿ ಗೆದ್ದೆವು. ಎರಡು ಕ್ಷೇತ್ರಗಳ ಪರಾಜಯ ಆಶ್ಚರ್ಯದ ವಿಷಯವಲ್ಲ.


ತೃಣಮೂಲ - ಬಿಜೆಪಿ ಕೂಟ ನಮಗೆ ದೊಡ್ಡ ಪ್ರತಿಪಕ್ಷ ಸವಾಲಾಗಿತ್ತು. ಕಾಂಗ್ರೆಸ್ ಕೇವಲ ಒಂದು ಸ್ಥಾನಗಳಿಸಿತು. ತೃಣಮೂಲ 7ರಲ್ಲಿ ಗೆದ್ದಿತು. ವಿಧಾನಸಭೆ ಚುನಾವಣೆಯಲ್ಲಿ ಕೂಡ ಖಾತೆ ತೆರೆಯಲು ವಿಫಲವಾಗುತ್ತಿದ್ದ ಬಿಜೆಪಿ ಈ ಬಾರಿ ಡಂಡಂ ಲೋಕಸಭೆ ಕ್ಷೇತ್ರದಲ್ಲಿ ಜಯಿಸಿತು. ಈ ಕೂಟ ಶೇ.34.62 ಮತ ಪಡೆಯಿತು. ಕಾಂಗ್ರೆಸ್‌ಗೆ ಸಿಕ್ಕಿದ್ದು ಶೇ.16.45, ಎಡರಂಗ ಶೇ. 46.83 ಮತ ಪಡೆಯಿತು. ಹಿಂದಿನ ಸಲಕ್ಕೆ ಹೋಲಿಸಿದರೆ ಇದು ಕಡಿಮೆಯೇ.

ತ್ರಿಪುರಾ ವಿಧಾನಸಭೆ ಚುವಾವಣೆಯಲ್ಲಿ ನಾವು ಯಶಸ್ವಿಯಾದೆವು. ಕೇಂದ್ರ ಸಮಿತಿ ಸದಸ್ಯ ಮಾಣಿಕ್ ಸರ್ಕಾರ್ ಹೊಸ ಮುಖ್ಯಮಂತ್ರಿಯಾದರು. ಅಗರ್ತಲದಲ್ಲಿ ನಡೆದ ವಿಜಯೋತ್ಸವ ರ್‍ಯಾಲಿಯಲ್ಲಿ ನಾನು ಭಾಗವಹಿಸಿದೆ.

ಆಡಳಿತದಲ್ಲಿರುವ ಪಕ್ಷದ ವಿರುದ್ಧದ ಭಾವನೆ ಈ ಬಾರಿ ದೊಡ್ಡ ಪಾತ್ರ ವಹಿಸಿತು. ದೆಹಲಿ ಮತ್ತು ಪಂಜಾಬ್ ಅಲ್ಲದೇ ಇತರ ಕಡೆಗಳಲ್ಲೂ ಬಿಜೆಪಿ ಮತ್ತಿತರ ಮಿತ್ರಪಕ್ಷಗಳು ಜನರ ಆಕ್ರೋಶವನ್ನು ಎದುರಿಸಿದವು. ಏನಿದ್ದರೂ ಈ ಪ್ರಕ್ರಿಯೆ ಪಶ್ಚಿಮ ಬಂಗಾಳ, ತ್ರಿಪುರಾ ಮತ್ತು ಕೇರಳದಲ್ಲಿ ಪರಿಣಾಮ ಬೀರಲಿಲ್ಲ. ಆದರೂ ನಗರ ಪ್ರದೇಶಗಳು ಮತ್ತು ಮಧ್ಯಮ ವರ್ಗದ ಜನರ ನಡುವೆ ನಮ್ಮ ಬೆಂಬಲ ಕುಸಿದಿರುವುದನ್ನು ನಾವು ಗಮನಿಸಬೇಕು. ಅದು ಈಗ ತುಂಬಾ ಮುಖ್ಯ.

ಮಾರ್ಚ್ ಮೊದಲ ವಾರ 12ನೇ ಲೋಕಸಭೆ ಚುನಾವಣೆಯ ಫಲಿತಾಂಶ ಹೊರಬಿತ್ತು. 181 ಸ್ಥಾನಗಳಿಸಿದ ಬಿಜೆಪಿ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಕಾಂಗ್ರೆಸ್ 141 ಸ್ಥಾನ ಗಳಿಸಿತು. ಬಿಜೆಪಿ ಒಟ್ಟು 264 ಸದಸ್ಯರ ಬೆಂಬಲ ಕ್ರೂಡೀಕರಿಸಲು ಶಕ್ತವಾಗಿ ರಾಷ್ಟ್ರಪತಿಗೆ ಪಟ್ಟಿಯನ್ನು ಸಲ್ಲಿಸಿತು. ಅಷ್ಟಾದರೂ ಅದು ಸರಕಾರ ರಚಿಸುವ ಸ್ಥಿತಿಯಲ್ಲಿರಲಿಲ್ಲ. ಹೀಗಾಗಿ ಕಾಂಗ್ರೆಸ್‌ನ್ನು ಆಹ್ವಾನಿಸಬೇಕೆಂದು ನಾವು ಹೇಳಿದೆವು. ಕಾಂಗ್ರೆಸ್‌ಗೆ ಕೂಡ ಬೆಂಬಲ ಕ್ರೂಡೀಕರಿಸಲು ಆಗಲಿಲ್ಲ. ಹೀಗಾಗಿ ಅದು ಸರಕಾರ ರಚಿಸುವ ಹಕ್ಕನ್ನು ಮಂಡಿಸಲಿಲ್ಲ. ಏತನ್ಮದ್ಯೆ ಸೀತಾರಾಮ ಕೇಸರಿಯವರಿಂದ ಸೋನಿಯಾಗಾಂಧಿ ಎಐಸಿಸಿ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡರು. ಅದು ಕಾಂಗ್ರೆಸ್‌ನ ಆಂತರಿಕ ವಿಷಯ; ಮುಖಂಡರ ಬದಲಾವಣೆ ವಿಚಾರದಲ್ಲಿ ನಾನೇನೂ ಹೇಳುವುದಿಲ್ಲ ಎಂದಿನಂತೆ ನೀತಿಯೇ ನಿರ್ಧಾರದ ಅಂಶ. ಕೇವಲ ನಾಯಕತ್ವ ಬದಲಾವಣೆಯಿಂದ ಏನೂ ವ್ಯತ್ಯಾಸವಾಗುವುದಿಲ್ಲ.

ತೆಲುಗುದೇಶಂ ಮತ್ತು ನ್ಯಾಷನಲ್ ಕಾನ್ಫರೆನ್ಸ್ ಬಿಜೆಪಿಯ ರಕ್ಷಣೆಗೆ ಬಂದವು. ಈ ಎರಡೂ ಪಕ್ಷಗಳು ರಂಗದ ವೇದಿಕೆಯಿಂದ ಚುನಾವಣೆಯಲ್ಲಿ ಹೋರಾಡಿದ್ದವು. ಕೋಮುವಾದದ ವಿರುದ್ಧ ಹೋರಾಟ ನಡೆಸುವ ಅತೀ ಅಗತ್ಯದ ಸನ್ನಿವೇಶದಲ್ಲಿ ಅವು ವಿಶ್ವಾಸದ್ರೋಹ ಬಗೆದವು. ವಿಶ್ವಾಸಗೊತ್ತುವಳಿಯ ಮತದಾನದಿಂದ ದೂರ ಉಳಿಯುವುದಾಗಿ ದೇಶಂ ಹೇಳಿತು. ಬಹುಮತ ಗುಂಪಿನ ನಾಯಕರಾಗಿ ರಾಷ್ಟ್ರಪತಿಯವರು ವಾಜಪೇಯಿಯವರನ್ನು ಆಹ್ವಾನಿಸಿದರು. 22 ಪಕ್ಷಗಳ ಸಮಯಸಾಧಕ ಮೈತ್ರಿಕೂಟ ಅಧಿಕಾರಕ್ಕೆ ಬಂತು.


ಇಎಂಎಸ್

ಇದು ರಾಜಕೀಯದಲ್ಲಿ ಯಾವುದೇ ಸಾಮಾನ್ಯ ಅಂಶಗಳಿಲ್ಲದ ಏಕತೆಯಾಗಿತ್ತು. ಈ ಸಮ್ಮಿಶ್ರ ಕೂಟ ತಥಾಕಥಿತ ರಾಷ್ಟ್ರೀಯ ಕಾರ್ಯಸೂಚಿಯನ್ನು (National agenda) ರೂಪಿಸಿತು. ಇದು ಸಂಘ ಪರಿವಾರ ನಿರ್ದೇಶಿತ ವಂಚನೆಯ ಜಾಲವಾಗಿತ್ತು.

ವಿಶ್ವಾಸ ಗೊತ್ತುವಳಿ ಮೇಲೆ ಮತದಾನ ನಡೆದ ಸಂದರ್ಭದಲ್ಲಿ ತನ್ನ ನಿಲುವನ್ನು ದೇಶ ಬದಲಿಸಿ ಸಮ್ಮಿಶ್ರಕೂಟದ ಜಯಕ್ಕೆ ದಾರಿ ಮಾಡಿಕೊಟ್ಟಿತು. ಏನೇ ಆದರೂ ಕಾಂಗ್ರೆಸ್ ಅಧಿಕಾರಕ್ಕೆ ಬರಬಾರದು ಎನ್ನುವುದು ತನ್ನ ಧೋರಣೆ ಎಂದಿತು. ಈ ಬೆಂಬಲಕ್ಕೆ ಪ್ರತಿಯಾಗಿ ದೇಶಂ ಅಭ್ಯರ್ಥಿ ಬಾಲಯೋಗಿ ಲೋಕಸಭೆ ಸ್ಪೀಕರ್ ಆಗಲು ಬಿಜೆಪಿ ಒಪ್ಪಿತು. ದೇಶಂನ ಎಲ್ಲ 11 ಸದಸ್ಯರು ಸರಕಾರಕ್ಕೆ ಬೆಂಬಲವಾಗಿ ಮತ ನೀಡಿದರು. ಗೊತ್ತುವಳಿ ಪರವಾಗಿ 274 ವಿರುದ್ಧವಾಗಿ 261 ಮತಗಳು ಬಿದ್ದವು. ಬಿಜೆಪಿಗೆ ಕೇವಲ ಶೇಕಡ 37 ಮತ ಪಡೆದಿತ್ತು. ಅದೇ ವೇಳೆ ಶೇಕಡ 63 ಮತದಾರರು ಕೂಟದ ವಿರುದ್ಧವಾಗಿದ್ದರು ಎಂಬುದು ಗಮನಾರ್ಹ. ಜಾತ್ಯಾತೀತ ಮತಗಳಲ್ಲಿ ವಿಭಜನೆಗೊಂಡಿದ್ದು ಸ್ಪಷ್ಟವಾಗಿತ್ತು. ಇದು ಅಪಾಯಕಾರಿ ಪ್ರವೃತ್ತಿಯಾಗಿತ್ತು. ಸರಕಾರ ಬಹಳ ಕಾಲ ಬಾಳದಿರಬಹುದು. ಆದರೆ ಅದು ದೇಶಕ್ಕೆ ಭಾರೀ ಅನಾಹುತ ಮಾಡಲಿರುವುದು ನಿಶ್ಚಿತ. ಈ ಸರಕಾರದ ಚಟುವಟಿಕೆಗಳನ್ನು ಗಮನಿಸಿದರೆ ಈ ವಿಶ್ಲೇಷಣೆ ಎಷ್ಟೊಂದು ಸರಿಯೆಂಬುದು ಗೊತ್ತಾಗುತ್ತದೆ.

### ಇ.ಎಂ.ಎಸ್ ನಿಧನ

1998 ಮಾರ್ಚ್ 19ರಂದು ಬಿಜೆಪಿ ಸರಕಾರ ಅಧಿಕಾರ ಸ್ವೀಕರಿಸಿದ ದಿನವೇ ಕಾಮ್ರೇಡ್ ಇ.ಎಂ.ಎಸ್ ನಂಬೂದರಿಪಾಡ್ ತಿರುವನಂತಪುರದಲ್ಲಿ ನಿಧನರಾದರು. ಅವರು ಬರೆಯುತ್ತಿರುವಾಗಲೇ ಹೃದಯಾಘಾತಕ್ಕೆ ಒಳಗಾದರು. ಅವರ ಕೊನೆಯ ಲೇಖನ ಗಣಶಕ್ತಿಯಲ್ಲಿ ಪ್ರಕಟವಾಯಿತು.

ಕೋಮುವಾದಿ ಶಕ್ತಿಗಳು ಬಲಗೊಳ್ಳುತ್ತಿರುವ ವೇಳೆ ಇಎಂಎಸ್ ನಿಧನರಾದದ್ದು ಸರಿಪಡಿಸಲಾಗದ ನಷ್ಟ. ತೀವ್ರ ಅನಾರೋಗ್ಯದ ಕೊನೆಯ ಹಂತಗಳಲ್ಲಿ ಮಾತ್ರ ಪಾಲಿಟ್‌ಬ್ಯೂರೋ ಮತ್ತು ಕೇಂದ್ರ ಸಮಿತಿ ಸಭೆಗಳಲ್ಲಿ ಪಾಲ್ಗೊಳ್ಳಲು ಅವರಿಗೆ ಆಗುತ್ತಿರಲಿಲ್ಲ. ಆದರೆ ಮುಖ್ಯ ವಿಷಯಗಳಲ್ಲಿ ನಾವು ಅವರ ಸಲಹೆಯನ್ನು ಪಡೆಯುತ್ತಿದ್ದೆವು. ಇಎಂಎಸ್ ತತ್ವಶಾಸ್ತ್ರ ಮಾತ್ರವೇ ಅಲ್ಲದೆ ಶಾಸಕಾಂಗ ರಾಜಕೀಯದಲ್ಲಿ ನುರಿತವರೂ ಆಗಿದ್ದರು. 1957ರಲ್ಲಿ ಇಎಂಎಸ್ ದೇಶದ ಮೊದಲ ಕಮ್ಯುನಿಸ್ಟ್ ಮತ್ತು ಕಾಂಗ್ರೆಸೇತರ ಮುಖ್ಯಮಂತ್ರಿಯಾದರು. 1967ರಲ್ಲಿ ಕೇರಳದ ಏಳು ಪಕ್ಷ ಕೂಟದ ಮುಖ್ಯಮಂತ್ರಿಯಾದರು. 1977ರಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಯಾದರು. ಕಾ.ಇಎಂ.ಎಸ್ ಪ್ರತಿ ಅರ್ಥದಲ್ಲೂ ನೈಜ ಕಮ್ಯುನಿಸ್ಟ್ ಆಗಿದ್ದರು.

50 ವರ್ಷಕ್ಕೂ ಹೆಚ್ಚು ಕಾಲದಿಂದ ನಾನು ಅವರನ್ನು ಬಲ್ಲೆ. ನಾವಿಬ್ಬರೂ ಒಳಗೊಂಡಂಥ ಎಲ್ಲ ಕತೆಗಳನ್ನೂ ಘಟನೆಗಳನ್ನು ಇಲ್ಲಿ ವಿವರಿಸುವುದು ಅಸಾಧ್ಯ. ಒಬ್ಬರಾದ ಮೇಲೆ ಒಬ್ಬರು ಎನ್ನುವಂತೆ ಅನೇಕ ಸಂಗಾತಿಗಳನ್ನು ನಾವು ಕಳೆದುಕೊಂಡೆವು. ಪ್ರಮೋದ್ ದಾಸಗುಪ್ತ, ಸುಂದರಯ್ಯ, ರಣದಿವೆ, ಬಸವಪುನ್ನಯ್ಯ, ಸರೋಜ್ ಮುಖರ್ಜಿ ಇವರೆಲ್ಲರ ಕೊಡುಗೆಯನ್ನು ಮರೆಯುವುದು ಸಾಧ್ಯವೇ ಇಲ್ಲ.

### ಪೊಖರನ್ ಸ್ಫೋಟಗಳು

ಬಿಜೆಪಿ ಸರಕಾರ ಕೇಂದ್ರದಲ್ಲಿ ಇರುವುದು ಅಪಾಯಕಾರಿ ಎಂಬುದು ಒಂದೊಂದು ದಿನ ಕಳೆಯುತ್ತಲೂ ಸ್ಪಷ್ಟವಾಗತೊಡಗಿತ್ತು. ಆರ್ಥಿಕ ನೀತಿಯನ್ನು ಶೀಘ್ರ ಗತಿಯಲ್ಲಿ ಹಾಗೂ ಅತ್ಯುತ್ಸಾಹದಿಂದ ಅನುಸರಿಸಲಾಗುತ್ತಿತ್ತು. ಭಾರತದ ದೀರ್ಘಕಾಲದ ವಿದೇಶಾಂಗ ನೀತಿಗೆ ಹೊಸ ತಿರುವು ಕೊಡಲಾಗುತ್ತಿತ್ತು. ಕೆಲವು ದಿನ ಕಾಲ ಚೀನಾದ ಮೇಲೆ ಕೆಂಡ ಕಾರಿದ ಸರಕಾರ, ಇದ್ದಕ್ಕಿದ್ದಂತೆ ಮೇ 11ರಂದು ರಾಜಸ್ಥಾನದ ಪೊಖರನ್‌ನಲ್ಲಿ ನಾಲ್ಕು ಪರಮಾಣು ಬಾಂಬ್‌ಗಳನ್ನು ಸ್ಫೋಟಿಸಿತು. ಮೇ 18ರಂದು ಇನ್ನೊಂದು ಸುತ್ತಿನ ಸ್ಫೋಟ ಪ್ರತಿಕಾರವಾಗಿ ಪಾಕಿಸ್ತಾನವೂ ಸ್ಫೋಟ ನಡೆಸಿತು. ನಮ್ಮ ಪರಮಾಣು ನೀತಿಯನ್ನು ದಿನ ಬೆಳಗಾಗುವುದರೊಳಗೆ ತಲೆಕೆಳಗು ಮಾಡಲಾಗಿತ್ತು. ಇತರ ದೇಶಗಳ ಜತೆಗಿನ ಸಂಬಂಧದಲ್ಲಿ ಇದು ನಮ್ಮ ಹಿನ್ನಡೆಯಾಗಿತ್ತು. ಅಲಿಪ್ತ ಚಳವಳಿಯಲ್ಲಿ ನಮ್ಮ ಪ್ರತಿಷ್ಠೆ ಕುಂದಿತು. ಬೇಸರದ ವಿಷಯವೆಂದರೆ ಸ್ಫೋಟದ ಬಗ್ಗೆ ಮಾಹಿತಿ ನೀಡಿ ಪ್ರಧಾನಿ ವಾಜಪೇಯಿ ಅಮೇರಿಕ ಅಧ್ಯಕ್ಷರಿಗೆ ಪತ್ರ ಬರೆದರು. ಈ ಪತ್ರದ ಬಗ್ಗೆ ಅವರು ದೇಶವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ. ಅಮೇರಿಕವನ್ನು ತೃಪ್ತಿಪಡಿಸಲು ಈ ಕ್ರಮ ಎಂಬುದು ಸ್ಪಷ್ಟವಾಗಿತ್ತು . ಆ ಪತ್ರದಲ್ಲಿ ಚೀನಾ ವಿರೋಧಿ ಭಾವನೆಗಳು ಇದ್ದವು. ಬಿಜೆಪಿ ಸರಕಾರಕ್ಕೆ ಜನರ ಈರ್ಷ್ಯದ ಗುರಿ ಇರಲಿಲ್ಲ.

### ವಾಜಪೇಯಿ ಭೇಟಿ

ಮೇ 19ರಂದು ನಾನು ದೆಹಲಿಯಲ್ಲಿ ವಾಜಪೇಯಿಯವರನ್ನು ಭೇಟಿ ಮಾಡಿದೆ. ಅದರಲ್ಲಿ ರಾಜಕೀಯ ಉದ್ದೇಶವಿರಲಿಲ್ಲ. ಬಂಗಾಳದ ಆರ್ಥಿಕ ಸಮಸ್ಯೆಯನ್ನು ಮತ್ತು ಒಟ್ಟಾರೆಯಾಗಿ ಆರ್ಥಿಕ ನೀತಿ ಬಗ್ಗೆ ನಾವು ಚರ್ಚಿಸಿದೆವು. ನನ್ನ ಜತೆ ರಾಜ್ಯದ ಹಣಕಾಸು ಸಚಿವ ಅಸೀಮ್ ದಾಸಗುಪ್ತ ಇದ್ದರು. ಕೇಂದ್ರ ಹಣಕಾಸು ಸಚಿವ ಯಶವಂತ್ ಸಿನ್ಹ ಮತ್ತು ಅಂದಿನ ಯೋಜನೆ ಆಯೋಗದ ಉಪಾಧ್ಯಕ್ಷ ಜಸ್ವಂತ್ ಸಿಂಗ್ ಸಭೆಯಲ್ಲಿದ್ದರು. ಎರಡನೇ ಬಾರಿಗೆ ಅಧಿಕಾರಕ್ಕೆ ಬಂದ ಮೇಲೆ ಪ್ರಧಾನಿ ಜತೆಗಿನ ನನ್ನ ಮೊದಲ ಭೇಟಿಯಿದು. ನಮ್ಮ ಭೇಟಿಯ ಬಗ್ಗೆ ಭಾರಿ ಕುತೂಹಲ ಉಂಟಾಗಿತ್ತು. ಆದರೆ ರಾಷ್ಟ್ರೀಯ ವಿಚಾರಗಳ ಬಗ್ಗೆ ನಮ್ಮ ಪಕ್ಷದ ನಿಲುವನ್ನು ಮೊದಲೇ ಸ್ಪಷ್ಟಪಡಿಸಲಾಗಿತ್ತು.

(ಮುಂದುವರಿಯುವುದು)

# ತಿಲಕನಗರದಲ್ಲಿ ನಡೆದದ್ದೇನು?

**"ನಾನಿನ್ನು ಈ ಊರಿನಲ್ಲಿರಲಾರೆ, ಇಲ್ಲಿ ಬದುಕುವುದು ದುಸ್ತರವೆಂದು ನನಗೆ ಅನಿಸುತ್ತಿದೆ" ಬೆಂಗಳೂರಿನ ತಿಲಕ ನಗರದ ಗಲಭೆಯ ನಂತರ ಹಲ್ಲೆಗೊಳಗಾದ ಅಲ್ಪಸಂಖ್ಯಾತ ಕುಟುಂಬದ ಸದಸ್ಯರೊಬ್ಬರ ನೊಂದ ನುಡಿಗಳಿವು. ದೇವಸ್ಥಾನವೊಂದರ ಉತ್ಸವದ ಮೆರವಣಿಗೆಯ ಹೆಸರಿನಲ್ಲಿ ನಡೆದ ಗಲಭೆಯ ಹಿಂದೆ ನೂರು ಕಥೆಗಳಿವೆ. ಮೇಲ್ನೋಟಕ್ಕೆ ಅಲ್ಲಿ ವಾಸಿಸುತ್ತಿರುವ ಕೂಲಿ ಕೆಲಸ ಮಾಡುವ, ಮೂಲತಃ ತಮಿಳು ಭಾಷಿಕರಾದ ಜನ, ಅವರು ಪೂಜಿಸುವ ಮಾರಿಯಮ್ಮನ ದೇವಸ್ಥಾನದ ಉತ್ಸವದ ಮೆರವಣಿಗೆ ಮಸೀದಿಯ ಮುಂದೆ ಹೋದಾಗ ನಡೆದ ಗಲಭೆ ಎಂದು ಚಿತ್ರಿಸಲಾಗಿದ್ದರೂ ಅಲ್ಲಿ ನಿಜಾಂಶ ತಿಳಿಯಲೆಂದೇ ಹೋದರೆ ಬಿಚ್ಚಿಕೊಳ್ಳುವ ಕಥೆಗಳೇ ಬೇರೆ.**

ಬೆಂಗಳೂರಿನ ತಿಲಕ್‌ನಗರದ ಗುಪ್ತಲೇಔಟ್‌ನ ಮುಖ್ಯರಸ್ತೆಯ ಕೊನೆಯಲ್ಲಿರುವ ಕಾಳಿಕಮ್ಮ/ಮಾರಿಯಮ್ಮನ ದೇವಾಲಯ.ಮೊದಲು ತಮಿಳಿಗರ ವಶದಲ್ಲಿತ್ತು. ಈಗ ಅದು ಕನ್ನಡಿಗರ ವಶವಾಗುತ್ತಿದೆ. ಅದು ಒಳಗೊಳಗೇ ಅಸಮಾಧಾನದ ಹೊಗೆ ಎಬ್ಬಿಸುತ್ತಿದ್ದು - ಹತ್ತರಕೂಡ ಹನ್ನೊಂದೆಂಬಂತೆ ಈ ಘಟನೆಯ ಜೊತೆಗೆ ಅದು ಸೇರಿತ್ತೆಂದು ಒಂದು ಸ್ವರ ಕೇಳಿಬರುತ್ತಿದೆ(ಕನ್ನಡಿಗರ ಹೆಸರಿನಲ್ಲಿ ಕೋಮುವಾದಿಗಳು ಒಳ ಪ್ರವೇಶಿಸಿ ನಂತರ ತಮಿಳಿಗರನ್ನು ಅಲ್ಪಸಂಖ್ಯಾತರ ವಿರುದ್ಧ ಬಳಸಲಾಗಿದೆ) ಆದರೆ ಗಲಭೆಗೆ ತುತ್ತಾದ ಮನೆಗಳು ಗುಜರಾತಿನ ಪ್ರತಿಕೃತಿಗಳಾಗಿ ನಿಂತಿವೆ. ಒಂದು ಸಾಲಿನಲ್ಲಿರುವ ಎಲ್ಲಾ ಅಲ್ಪಸಂಖ್ಯಾತ ಕೋಮಿನ ಮನೆಗಳೂ, ವಾಹನಗಳೂ ಧಾಳಿಗೆ ತುತ್ತಾಗಿವೆ. ಆದರೆ ಈ ಮನೆಗಳ ಮದ್ಯೆಯೇ ಇರುವ ಬಹುಸಂಖ್ಯಾತ ವಿಭಾಗಕ್ಕೆ ಸೇರಿದ ಮನೆಗೆ ಯಾವುದೇ ಹಾನಿ ಆಗಿಲ್ಲ.

ಗುಜರಾತಿನಲ್ಲಿ ಆದಿವಾಸಿಗಳನ್ನು ಬಳಸಿಕೊಂಡು ಮುಸ್ಲಿಮರ ಮೇಲೆ ಅವರಿಗೆ ದ್ವೇಷವಿತ್ತೆಂದು ಬಿಂಬಿಸಹೊರಟಂತೆ ಇಲ್ಲಿಯೂ ಕೂಲಿ ಮಾಡಿ ದಿನಕಳೆಯುತ್ತಿರುವ ತಮಿಳಿಗರನ್ನು ಬಳಸಿಕೊಂಡು 'ಕೋಮುವಾದ' ತನ್ನ ಬೇರಿಗೆ ನೆಲೆ ಕಾಣಹೊರಟಿದೆ.

ಅಲ್ಲಿನ ಕೆಲವು ನಿವಾಸಿಗಳ ಪ್ರಕಾರ ಕಳೆದ ಹಲವು ದಿನಗಳಿಂದ ಸಭೆಗಳು ನಡೆದಿವೆ. ಕೂಲಿ ಮಾಡುವ ಜನರನ್ನು ಗಲಭೆಗೆ ಪ್ರೇರೇಪಿಸಲು ಸಾಕಷ್ಟುಹಣವನ್ನೂ ಹಂಚಲಾಗಿದೆ. ಮತ್ತು ಈ ಉತ್ಸವವನ್ನೇ ಅದಕ್ಕೆ ಬಳಸಿಕೊಳ್ಳುವ ಹುನ್ನಾರ ವ್ಯವಸ್ಥಿತವಾಗಿ ನಡೆದಿದೆ. ಉತ್ಸವದ ಕೆಲವು ದಿನಗಳ ಮೊದಲು ಕೇಂದ್ರ ಸಚಿವ ಅನಂತಕುಮಾರ್ ದೇವಸ್ಥಾನಕ್ಕೆ ಭೇಟಿ ನೀಡಿದ್ದು ದೇವಸ್ಥಾನದ ಅಭಿವೃದ್ಧಿಗೆಂದು ಸಂಸತ್ ಸದಸ್ಯರ ನಿಧಿಯಿಂದ ಐವತ್ತು ಸಾವಿರ ರೂ. ನೀಡಲಾಗಿದೆ ಎಂದು ತಿಳಿದುಬಂದಿದೆ.

ಗಲಭೆ ನಡೆಯುವ ಒಂದು ದಿನ ಮುಂಚಿಯೇ ಪರಿಸ್ಥಿತಿ ಬಿಗಡಾಯಿಸಬಹುದಾದ ಸೂಚನೆ ಸಿಕ್ಕ ನಿವಾಸಿಗಳು ಪೋಲೀಸರಿಗೆ ಸುಳಿವು ನೀಡಿದ್ದರು. ಆದರೆ ಗಲಭೆ ಪ್ರಾರಂಭವಾದ ನಂತರ, ಕಮಿಷನರ್ ಸ್ಥಳಕ್ಕೆ ಬಂದ ಮೇಲೆ ಪೋಲೀಸರು ಕ್ರಮ ಜರುಗಿಸಿದ್ದು. ಮೆರವಣಿಗೆ ಮಸೀದಿಯ ಮುಂದೆ ಹಿಂದೆಂದೂ ಹೋಗಿರಲಿಲ್ಲವೆಂಬುದು ಕೆಲವರ ಹೇಳಿಕೆ. ಬೀದಿ ಬದಿ ವ್ಯಾಪಾರಿಯೊಬ್ಬರು ಹೇಳುವಂತೆ ಮಸೀದಿಯ ಮುಂಭಾಗದಲ್ಲಿ ಮೆರವಣಿಗೆಗೆ ಹೋಗಲು ಅವಕಾಶ ಕೊಡುವುದಿಲ್ಲವೆಂಭ ಭರವಸೆಯನ್ನು ಪೋಲೀಸರು ನೀಡಿದ್ದದಾರೂ. ಅದನ್ನು ಈಡೇರಿಸಲು ಅವರು ಗಂಭೀರ ಪ್ರಯತ್ನ ನಡೆಸಲಿಲ್ಲ.

ಜೊತೆಗೆ ಮೆರವಣಿಗೆಯಲ್ಲಿದ್ದ ಕಿಡಿಗೇಡಿಗಳು ಪ್ರಚೋದನಕಾರಿ ಅಲ್ಪಸಂಖ್ಯಾತ ವಿರೋಧಿ ಘೋಷಣೆಗಳನ್ನು ಕೂಗುತ್ತಿದ್ದಾರೆಂದು ಪ್ರತ್ಯಕ್ಷದರ್ಶಿಗಳು ಹೇಳುತ್ತಾರೆ. 'ಹಿಂದುಗಳು ಮುಂದೆ-ಮುಸ್ಲಿಮರು ಹಿಂದೆ' ಎಂಬುದು ಹಲವಾರು ಘೋಷಣೆಗಳಲ್ಲಿ ಒಂದು. ಇದು ಆರ್.ಎಸ್.ಎಸ್. ತನ್ನ ಪ್ರತಿನಿಧಿ ಸಮಾವೇಶದಲ್ಲಿ ಅಂಗೀಕರಿಸಿದ ಗೊತ್ತುವಳಿಯ ಪ್ರಕಾರವೇ ಇದೆ.

ಮೆರವಣಿಗೆ ಮುಂದೆ ಸಾಗುತ್ತಿದ್ದ ಹಾಗೆ ಕಲ್ಲು ಎಸೆತ, ಮುಂತಾಗಿ ಪ್ರಾರಂಭವಾದದ್ದನ್ನು ಕಂಡ ಜನ ಪೋಲೀಸರಿಗೆ ಸುದ್ದಿ ಮುಟ್ಟಿಸಿದರೂ ಸುದ್ದಿ ಮುಟ್ಟಿಸಿದವರನ್ನೇ ಪೋಲಿಸರ ಲಾಠಿ ಸುಮ್ಮನಾಗಿಸಿತೆಂದು ಹೇಳುತ್ತಾರೆ. ಈ ಗಲಭೆಯಲ್ಲಿ ದೇವಸ್ಥಾನದ ಪಕ್ಕದಲ್ಲೇ ಇರುವ ಮುಸ್ಲಿಮರಿಗೆ ಸೇರಿದ 'ದರ್ಬಾರ್ ರೆಸ್ಟೋರೆಂಟ್' ಪುಡಿಪುಡಿಯಾಗಿದ್ದು ಒಂದು ವಾರದಿಂದ ಬಾಗಿಲೇ ತೆರೆದಿಲ್ಲ.

ಮಾರನೆಯ ದಿನ ಗುಪ್ತಲೇಔಟ್‌ನ ನಿವಾಸಿಗಳ ವಾಹನಗಳು ಬೆಂಕಿಗೆ ಆಹುತಿಯಾಗಿವೆ. ಆ ಸಂದರ್ಭದಲ್ಲಿ ಕೂಡ ಸ್ಥಳೀಯ ಪೋಲೀಸರ ವರ್ತನೆ ಸ್ವಲ್ಪ ಜವಾಬ್ದಾರಿಯುತವಾಗಿದ್ದರೆ ಅನಾಹುತ, ನಷ್ಟಗಳನ್ನು ತಪ್ಪಿಸಬಹುದಿತ್ತು. ಆದರೆ ವಾಹನಗಳಿಗೆ ಬೆಂಕಿ ಹಾಕುತ್ತಿದ್ದಾರೆಂದು ದೂರು ಕೊಡಲು ಹೋದರೆ "ಜಾಸ್ತಿ ಗಲಾಟೆ ಮಾಡಿದರೆ ಯಾವ್ದಾದ್ರೂ ಕೇಸ್ ಹಾಕಿ ಒಳಗೆ ಹಾಕಿಬಿಡ್ತೀನಿ' ಎಂಬ ಬೆದರಿಕೆಯನ್ನು ಪೋಲೀಸ್ ಅಧಿಕಾರಿಯಿಂದ ಕೇಳಬೇಕಾಗಿ ಬಂತೆಂದು ನಿವಾಸಿಯೊಬ್ಬರು ಹೇಳತ್ತಾರೆ. ಇವಲ್ಲವುಗಳ ಸಾರ ಸಂಗ್ರಹ - ಕರ್ನಾಟಕವನ್ನು ತಮ್ಮ ನೆಲೆಯಾಗಿಸಿಕೊಳ್ಳಲು ಕೋಮುವಾದಿಗಳು ಬಹಳ ವರ್ಷಗಳಿಂದ ಪ್ರಯತ್ನ ನಡೆಸುತ್ತಿದ್ದಾರೆ. ಈದ್ಗಾ ಮೈದಾನ, ಕೋಮು ಸಾಮರಸ್ಯದ ನೆಲೆಯಾಗಿದ್ದ ಬಾಬಾಬುಡನ್‌ಗಿರಿ ವಿವಾದಗಳು ಈ ಪ್ರಯತ್ನದ ಭಾಗಗಳಾಗಿಯೇ ನಡೆಯುತ್ತಿವೆ. ಕೊಡಗಿನಲ್ಲಿ ನಿರಂತರವಾಗಿ ನಡೆಸುತ್ತಿರುವ ಗಲಭೆ, ಕಿರಿಕಿರಿಗಳೂ ಕೂಡ ಆ ನಿಟ್ಟಿನ ಪ್ರಯತ್ನವೇ.



ಲೂಟಿಯಾದ ಅಂಗಡಿ

**ಅಪಾಯಕಾರಿ ಬೆಳವಣಿಗೆ**

ಇತ್ತೀಚೆಗಷ್ಟೆ ಬೆಂಗಳೂರಿನ ಜಗಜ್ಜೀವನರಾಮನಗರ ಪ್ರದೇಶದಲ್ಲಿ ಕೋಮುಗಲಭೆ ನಡೆದಿದ್ದು ಪೋಲೀಸರ ಮತ್ತು ಸಾರ್ವಜನಿಕರ ಸಕಾಲಿಕ ಮಧ್ಯಪ್ರವೇಶದಿಂದ ಬೆಂಗಳೂರಿನ ಇತರೆಡೆಗೆ ಹಬ್ಬಿರಲಿಲ್ಲ. ಆದರೆ ಬೆಂಗಳೂರಿನ ಇನ್ನೊಂದು ಮಗ್ಗುಲಾದ ತಿಲಕನಗರದಲ್ಲಿ ಮುಸ್ಲಿಂರ ಸಮುದಾಯ್ಕಕೆ ಸೇರಿದವರ ಆಸ್ತಿಪಾಸ್ತಿಯನ್ನು ಹಾನಿ ಮಾಡಲಾಗಿದೆ. ಇವೆರಡೂ ಪ್ರದೇಶಗಳಲ್ಲಿ ಎರಡು ಸಾಮಾನ್ಯ ಅಂಶಗಳಿವೆ.

1. ಹಿಂದೂ-ಮುಸ್ಲಿಂ ಬಂಧುಗಳು ಅಕ್ಕಪಕ್ಕದಲ್ಲೇ ವಾಸಿಸುತ್ತಿದ್ದಾರೆ.
2. ಇತ್ತೀಚಿನ ದಿನಗಳಲ್ಲಿ ಆರ್.ಎಸ್.ಎಸ್.ನ ಚಟುವಟಿಕೆಗಳು ಹೆಚ್ಚಾಗಿದೆ ಎಂದು ಆ ಪ್ರದೇಶದ ಜನ ಹೇಳುತ್ತಿದ್ದಾರೆ.

ಇತ್ತೀಚಿಗೆ ಬೆಂಗಳೂರಲ್ಲಿ ರಾಷ್ಟ್ರೀಯ ಸ್ವಯಂ ಸೇವಕಸಂಘ(ಆರ್‌ಎಸ್‌ಎಸ್) ಸಂಘಟಿಸಿದ ಸಮಾವೇಶದಲ್ಲಿ 'ಅಲ್ಪಸಂಖ್ಯಾತರು ಬಹು ಸಂಖ್ಯಾತರನ್ನು ಅನುಸರಿಸಿಕೊಂಡು ಹೋಗಬೇಕು' ಎಂದು ಅದರ ಮುಖ್ಯಸ್ಥರು ನೀಡಿದ 'ಫರ್ಮಾನು' ಕರ್ನಾಟಕ ರಾಜ್ಯದಲ್ಲಿ ಮತ್ತು ಭಾರತ ದೇಶದಲ್ಲಿ ಬರಲಿರುವ ಅಪಾಯಕಾರಿ ಬೆಳವಣಿಗೆಯ ಮುನ್ಸೂಚನೆಗಳು. ಎಲ್ಲಾ ಜಾತ್ಯಾತೀತ ಶಕ್ತಿಗಳು ಒಂದಾಗಿ ಇದನ್ನು ವಿರೋಧಿಸಬೇಕು.

ಕರ್ನಾಟಕದ ಜನತೆ ಈ ಘಟನೆಗಳನ್ನು ಹಗುರವಾಗಿ ಪರಿಗಣಿಸಲಾಗದು. ಸಹನೆ, ಶಾಂತಿ, ಸಾಮರಸ್ಯದ ಬದುಕನ್ನು ಹಾಳು ಮಾಡುವ ಕೋಮುವಾದಿಗಳಿಗೆ ರಾಜಕೀಯವಾಗಿ ನೆಲೆಯೂರಲು ಅವಕಾಶ ನೀಡಿಲ್ಲ. ಆದರೆ ತಮ್ಮ ಹಿಂದುತ್ವ ಅಜೆಂಡಾಕ್ಕೆ ಭದ್ರ ನೆಲೆ ಒದಗಿಸಲು ಈ ಮೇಲಿನ ರೀತಿಯಲ್ಲಿ ಜನರ ಧಾರ್ಮಿಕ, ಸಾಂಸ್ಕೃತಿಕ ಭಾವನೆಗಳನ್ನು ಕೆರಳಿಸಲಾಗುತ್ತಿದೆ. ಅಂತೆಯೇ ಕರ್ನಾಟಕ ಸರ್ಕಾರ ಕೂಡ ಗಲಭೆ ನಡೆದ ಮೇಲೆ ಕರ್ಫ್ಯೂ ವಿಧಿಸಿ ಪರಿಸ್ಥಿತಿ ಹತೋಟಿಗೆ ತರುತ್ತೇವೆ ಎಂಬ ಭ್ರಮೆಯಿಂದ ಹೊರಬಂದು, ಜನರ ಮಧ್ಯೆ ಕೆಲಸ ಮಾಡುವ, ಜನರ ಕರೆಗಳಿಗೆ ಸ್ಪಂದಿಸುವ, ಕೋಮುಸಾಮರಸ್ಯಕ್ಕಾಗಿ ಚಟುವಟಿಕೆ ರೂಪಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕು. ನಗರದ, ರಾಜ್ಯದ ಜನ ತಿಲಕನಗರದ ಘಟನೆಯನ್ನು ಎಚ್ಚರಿಕೆಯ ಗಂಟೆಯಾಗಿ ಭಾವಿಸದಿದ್ದಲ್ಲಿ ಪರಿಣಾಮ ಬೇರೆಯೇ ಆದೀತು.

ಈ ನಿಟ್ಟಿನಲ್ಲಿ ಎನ್‌ಪಿಎಂಓ (ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ) ನೀಡಿದ ಹಲವಾರು ಕಾರ್ಯಕ್ರಮಗಳು ಪರಿಣಾಮಕಾರಿ ಫಲಿತಾಂಶ ನೀಡಬಲ್ಲವು. ಸಹಬೋಜನದಂತಹ ಕಾರ್ಯಕ್ರಮಗಳು ಎರಡು ಕೋಮಿನ ಮಧ್ಯೆ ಪರಸ್ಪರ ಇರುವ ಹಲವು ತಪ್ಪು ಅಭಿಪ್ರಾಯಗಳನ್ನು ಸರಿಪಡಿಸಲು ಅವಕಾಶ ನೀಡುತ್ತದೆ. ಅಲ್ಪಸಂಖ್ಯಾತ ಜನ ಸಮುದಾಯದ ಬಂಧುಗಳೂ ಕೂಡ ಮುಖ್ಯವಾಹಿನಿಯ ಜೊತೆ ಸೇರುವ ಸಾಮರಸ್ಯ ಸಂದೇಶಕ್ಕೆ ಕೈಜೋಡಿಸಲು ಸಿದ್ದರಾಗಬೇಕು. ತಮ್ಮದೇ ಪ್ರಪಂಚದಲ್ಲಿ ಇರುವುದರಿಂದ `in isolationr' ಯಾವುದೇ ಸಮಸ್ಯೆ ಪರಿಹಾರವಾಗದೆಂಬುದು ಎಲ್ಲರಿಗೂ ಅರ್ಥವಾಗಬೇಕು. ಈಗಲೂ ಕಾಲಮಿಂಚಿಲ್ಲ. ಯಾವುದೇ ಧರ್ಮದ ಬಹುಸಂಖ್ಯಾತ ಜನ ಕೋಮುವಾದಿಗಳಲ್ಲ. ಆದರೆ ಅವರೆಲ್ಲ ಒಟ್ಟಿಗೆ ಬರಬೇಕು. ಚಳುವಳಿ ಮುಂದಾಗಬೇಕು. ಆ ಮೂಲಕ ಕೋಮುವಾದಿಗಳನ್ನು ಹಿಮ್ಮೆಟ್ಟಿಸಬೇಕು.

**- ಕೆ.ಎಸ್.ವಿಮಲಾ**



ಗಾಯಾಳುಗಳು

## ವಿಧಾನ ಪರಿಷತ್ ಚುನಾವಣೆ


ನಮ್ಮ ರಾಜ್ಯದಲ್ಲಿ ಜೂನ್ 23ರಂದು ನಡೆಯುವ ಕೌನ್ಸಿಲ್ ಚುನಾವಣೆಯಲ್ಲಿ ಜನವಿರೋಧಿ ನೀತಿಯನ್ನು ಅನುಸರಿಸುತ್ತಿರುವ ಕಾಂಗ್ರೆಸ್ ಪಕ್ಷವನ್ನು ಹಾಗೂ ಕೋಮುವಾದಿ ಬಿಜೆಪಿಯನ್ನು ಸೋಲಿಸಲು ಈ ಕೆಳಕಂಡ ಅಭ್ಯರ್ಥಿಗಳನ್ನು ಬೆಂಬಲಿಸಬೇಕೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಸಿಪಿಐ(ಎಂ) ರಾಜ್ಯಸಮಿತಿ ಮನವಿ ಮಾಡಿದೆ.

ಪುಟ್ಟಣ್ಣ - ಬೆಂಗಳೂರು ಶಿಕ್ಷಕರ ಕ್ಷೇತ್ರ

ಆರ್. ರಾಜಣ್ಣ - ಕರ್ನಾಟಕ ಆಗ್ನೇಯ ಪದವೀಧರರ ಕ್ಷೇತ್ರ

ಎಸ್.ಕೆ.ಕಾಂತಾ - ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರ

ಗ್ರಾಮೀಣ ಬಡಮಕ್ಕಳು, ಮಹಿಳೆಯರು ಮತ್ತು ನಗರದ ಕೊಳಗೇರಿಯುವರಿಗೆ ಅತ್ಯಂತ ಪ್ರಯೋಜನಕಾರಿಯಾದ ಶಿಶುಸಮಗ್ರ ಅಭಿವೃದ್ಧಿ ಯೋಜನೆ'ಯನ್ನು ಕೇಂದ್ರ ಸರ್ಕಾರ ಕೈಬಿಡಲು ಹೊರಟಿದೆ. ವಿಶ್ವಬ್ಯಾಂಕ್‌ನ ಶರತ್ತುಗಳ ಒತ್ತಡಕ್ಕೆ ಇನ್ನೊಂದು ಬಲಿ ಈ ಯೋಜನೆ. ಈ ಯೋಜನೆ ಪೂರ್ಣ ರದ್ದಾದಲ್ಲಿ ಆಗುವ ಹಾನಿ ಎಂತಹದ್ದು? ಅಂಗನವಾಡಿ ನೌಕರರು ತಾವು ಅನುಭವಿಸಿದ ಸಂಕಟವನ್ನು ನಿರ್ಭಯವಾಗಿ ತೋಡಿಕೊಂಡಿದ್ದು ಅಂಗನವಾಡಿ ನೌಕರರ "ವಿಧಾನ ಸೌಧ ಚಲೋ" ಕಾರ್ಯಕ್ರಮದಲ್ಲಿ.




# ಶಿಶು ಸಮಗ್ರ ಅಭಿವೃದ್ಧಿ ಯೋಜನೆಗೆ ಕುತ್ತು

ನಾನು 20 ವರ್ಷದಿಂದ ಸೇವೆ ಸಲ್ಲಿಸಿದ್ದೇನೆ, ಇಂದು ನನ್ನನ್ನು ಕೆಲಸದಿಂದ ತೆಗೆದಿದ್ದಾರೆ. ನನ್ನ ಮಕ್ಕಳು ಉಪವಾಸ ಬಿದ್ದಿದ್ದಾರೆ. ಕುಟುಂಬದ ಬೇರೆಯವರಿಗೂ ಕೆಲಸವಿಲ್ಲ. ನನಗೆ ಮತ್ತೆ ಕೆಲಸ ಸಿಗಲಿಲ್ಲವೆಂದರೆ ವಿಷ ತೆಗೆದುಕೊಂಡು ಪ್ರಾಣ ಕಳೆದುಕೊಳ್ಳುವುದೊಂದೇ ದಾರಿಯೆಂದು ಕೊರಟಗೆರೆಯಿಂದ ಬಂದಿದ್ದ ಅಂಗನವಾಡಿ ಕಾರ್ಯಕರ್ತೆ ತನ್ನ ಗೋಳನ್ನು ಜನರ ಮುಂದೆ ತೋಡಿ ಕೊಂಡು ಅಳುತ್ತಿದ್ದ ದೃಶ್ಯ ಇಡೀ ಅಂಗನವಾಡಿ ನೌಕರರು ಅಭದ್ರ ಸ್ಥಿತಿಯ ಕೆಲಸವನ್ನು ನೆನಸಿ ದುಃಖದಲ್ಲಿ ಮುಳುಗಿದ್ದುದು ಸ್ವಾಭಾವಿಕವೇ.

"ಜನವರಿ 4 ರಂದು ನಾನು ಕೆಲಸ ಮುಗಿಸಿ ಮನೆಭೇಟಿಗೆಂದು ಹೋಗಿದ್ದೆ. ಆಗ ಹೋಗುವಾಗ ಒಬ್ಬ ಹಠಾತ್ತನೇ ಬಂದು ಚಾಕು ತೆಗೆದುಕೊಂಡು 'ನೀನು ಬೇರೆ ಯಾರನ್ನಾದರೂ ಮದುವೆಯಾದರೆ ನಿನ್ನನ್ನು ಸಾಯಿಸಿಬಿಡುತ್ತೇನೆ' ಎಂದು ಹೇಳಿ ನನ್ನನ್ನು ಕೆಳಗೆ ಬೀಳಿಸಿ ತಿವಿಯಲು ಬಂದ. ದೇಹಕ್ಕೆ ಬೀಳುವ ಚಾಕು ಏಟು ನನ್ನ ಎರಡು ಕೈನ ಬೆರಳುಗಳಿಗೆ ಬಿದ್ದಿದೆ. ನಂತರ ನಾನು ಸಿದ್ದಾಪುರದ ಪೋಲೀಸ್ ಠಾಣೆಗೆ ದೂರು ಕೊಡಲು ಹೋದೆ. ಆದರೆ ಅಲ್ಲಿ ಕಾಂಗ್ರೆಸ್ ಕಡೆಯ ವ್ಯಕ್ತಿ ಅವನಾದ್ದರಿಂದ ತಕ್ಷಣ ದೂರು ದಾಖಲಿಸಲಿಲ್ಲ. ನಂತರ ಸಂಘಟನೆ ಯವರ ಒತ್ತಾಯದಿಂದ ದೂರು ದಾಖಲಿಸಿದ್ದಾರೆ. ಆದರೆ ಆ ವ್ಯಕ್ತಿಯನ್ನು ಇದುವರೆಗೂ ಅರೆಸ್ಟ್ ಮಾಡಿಲ್ಲ. ಈ ವಿಷಯ ಪತ್ರಿಕೆಗಳಲ್ಲಿ ಬಂದ ನಂತರ ನನ್ನ ಮದುವೆ ಪೆಬ್ರವರಿಯಲ್ಲಿ ಆಗಬೇಕಾಗಿದ್ದದ್ದು ಈಗ ಮುರಿದು ಬಿತ್ತು. ಆದರೂ ನಾನು ಅದರ ಬಗ್ಗೆ ತಲೆ ಕೆಡಿಸಿಕೊಳ್ಳದೇ ಈ ರೀತಿ ಅನ್ಯಾಯ ಮಾಡುವವರ ವಿರುದ್ಧ ಹೋರಾಟ ಮಾಡ ಬೇಕೆಂದಿದ್ದೇನೆ" ಎಂದು ಶಿರಸಿ ಸಿದ್ದಾಪುರದಿಂದ ಬಂದ ಅಂಗನವಾಡಿ ಕಾರ್ಯಕರ್ತೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು ಅಲ್ಲಿ ನೆರೆದಿದ್ದವರನ್ನು ಸೆಟೆದು ನಿಲ್ಲುವಂತೆ ಮಾಡಿತ್ತು.

21ನೇ ಶತಮಾನದಲ್ಲಿ ತಾಂತ್ರಿಕತೆ, ವೈಜ್ಞಾನಿಕತೆ, ಕಂಪ್ಯೂಟರೀಕರಣ ಕಾಲದಲ್ಲಿ ಅಸಂಘಟಿತ ಕ್ಷೇತ್ರದಲ್ಲಿ ದುಡಿಯುವ ಮಹಿಳೆಯರಿಗೆ ಭದ್ರತೆಯಿಲ್ಲದಿರುವುದು ಮೇಲಿನ ಘಟನೆ ಮತ್ತು ಹೊಸಪೇಟೆಯಿಂದ ಬಂದಿದ್ದ ಕಾರ್ಯಕರ್ತೆ ಕೆಲಸ ನಿರ್ವಹಿಸುವಾಗ ತನ್ನ ಮಗನಿಗೆ ಬೇಯಿಸಿದ ಕೋಳಿಮೊಟ್ಟೆ ಸಿಗಲಿಲ್ಲವೆಂದೂ, ರಸ್ತೆಯೆಂದೇ ತಿಳಿದುಕೊಂಡಿರುವ ವ್ಯಕ್ತಿ ಅಂಗನವಾಡಿ ಕೇಂದ್ರಕ್ಕೆ ನುಗ್ಗಿ ಕಾರ್ಯಕರ್ತೆಯ ಬ್ಲೌಸಿಗೆ ಕೈ ಹಾಕಿ, ಹೊಡೆದು ವಿವಸ್ತ್ರಗೊಳಿಸಲು ಪ್ರಯತ್ನಿಸಿದ್ದು ಎಂತಹವರನ್ನು ಬೆಚ್ಚಿ ಬೀಳಿಸುವ ಈ ಅಮಾನವೀಯ ಸಂದರ್ಭಗಳನ್ನು ಎದುರಿಸಿದ ಅಂಗನವಾಡಿ ನೌಕರರು ತಾವು ಅನುಭವಿಸಿದ ಸಂಕಟವನ್ನು ನಿರ್ಭಯವಾಗಿ ತೋಡಿಕೊಂಡಿದ್ದು ಏಪ್ರಿಲ್ 8 ರಂದು ಅಂಗನವಾಡಿ ನೌಕರರ "ವಿಧಾನ ಸೌಧ ಚಲೋ" ಕಾರ್ಯಕ್ರಮದಲ್ಲಿ.



**ಏಕೆ ಈ ಹೋರಾಟ?**

ಶಿಶು ಸಮಗ್ರ ಅಭಿವೃದ್ಧಿ ಯೋಜನೆ 1975ರಲ್ಲಿ ಪ್ರಾರಂಭವಾದಾಗಿನಿಂದ ಯೋಜನೆಯ ಸಂಪೂರ್ಣ ಅನುಷ್ಠಾನ ಮತ್ತು ಅಂಗನವಾಡಿ ನೌಕರರ ವಿಚಾರವಾಗಿ ಉದಾಸೀನದಿಂದಲೇ ಇದುವರೆಗೂ ಆಳುತ್ತಿರುವ ಸರ್ಕಾರಗಳು ನಡೆದು ಕೊಳ್ಳುತ್ತಿವೆ. ಗ್ರಾಮೀಣ ಬಡಮಕ್ಕಳು ಮತ್ತು ಮಹಿಳೆಯರು ಮತ್ತು ನಗರದ ಕೊಳಗೇರಿ ಯುವರಿಗೆ ಇದೊಂದು ಉತ್ತಮ ಯೋಜನೆ ಯಾಗಿದೆ. ಆದರೆ ಅದು ಜಾರಿಯಾಗಲು ದಕ್ಷ ಯೋಜನೆ ಮತ್ತು ಸದೃಢ ಮೂಲಭೂತ ಸೌಕರ್ಯ ಗಳ ಅಗತ್ಯವಿದೆ. ಅಂಗನವಾಡಿ ಕೇಂದ್ರಗಳಿರುವ ಜಾಗಗಳಲ್ಲಿ ಶಿಶುಮರಣ ಸಂಖ್ಯೆ, ಪೌಷ್ಠಿಕಾಂಶ ಕೊರತೆಯಿರುವ ಮಕ್ಕಳ ಸಂಖ್ಯೆಯಲ್ಲಿ ಇಳಿತ ವುಟಾಂಗಿದೆ. ಗರ್ಭಿಣಿ ಸ್ತ್ರೀಯರ ಆರೋಗ್ಯ ಸುಧಾರಿಸಿದೆ ಮತ್ತು ಶಾಲೆ ಬಿಡುವ ಮಕ್ಕಳ ಸಂಖ್ಯೆಯೂ ಕಡಿಮೆಯಾಗಿದೆ ಎಂಬುದನ್ನು ಹಲವಾರು ವರದಿಗಳು ದೃಢಪಡಿಸುತ್ತವೆ.

**ಸಾಮುದಾಯಿಕ ಪ್ರಜೆಗೆ ಸಹಕಾರಿ.**

ಜನಾರೋಗ್ಯ ಮತ್ತು ವಿಜ್ಞಾನದಲ್ಲಿ ಅದ್ಭುತ ಪ್ರಗತಿ ಸಾಧಿಸಿರುವ ಇಂದಿನ ದಿನಗಳಲ್ಲೂ ನಮ್ಮ ದೇಶದ ಪರಿಸ್ಥಿತಿ ಆಶಾದಾಕಯವಾಗಿಲ್ಲ. ನಮ್ಮ ದೇಶದಲ್ಲಿ ಶಿಶುಮರಣದ ಸಂಖ್ಯೆ 1000ದಲ್ಲಿ 70 ರಷ್ಟಿದ್ದರೆ, ಗರ್ಭಿಣಿಯರ ಸಾವು ಒಂದು ಲಕ್ಷಕ್ಕೆ 408 ರಷ್ಟಿರುವುದು ಜಗತ್ತಿನಲ್ಲೇ ಅತಿ ಹೆಚ್ಚಾಗಿದೆ. ಭಾರತದ ನಂತರ ಸ್ವಾತಂತ್ರ್ಯ ಪಡೆದ ಚೈನಾ ಮತ್ತು 1950ರ ಕ್ರಾಂತಿಯ ನಂತರ ಕ್ಯೂಬಾ ಈ ನಿಟ್ಟಿನಲ್ಲಿ ಗಣನೀಯ ಪ್ರಗತಿ ಸಾಧಿಸಿವೆ. ಶಿಶು ಮರಣ ಮತ್ತು ಗರ್ಭಿಣಿಯರ ಮರಣಕ್ಕೆ ಹಲವಾರು ಸಂಗತಿಗಳು ಕಾರಣವಾಗಿವೆ. ಬಾಲ್ಯವಿವಾಹ, ಗರ್ಭಿಣಿಯರಲ್ಲಿ ಪೌಷ್ಠಿಕಾಂಶದ ಕೊರತೆ, ರಕ್ತಹೀನತೆ, ವೈದ್ಯಕೀಯ ಸೌಲಭ್ಯದ ಕೊರತೆ, ಪ್ರಸವ ಕಾಲದಲ್ಲಿ ಸಾರಿಗೆ ಸೌಲಭ್ಯದ ಕೊರತೆ, ಬಡತನ ಮತ್ತು ನಿರುದ್ಯೋಗ ಈ ಎಲ್ಲವೂ ಅದಕ್ಕೆ ಮುಖ್ಯ ಕಾರಣಗಳು. ಐ.ಸಿ.ಡಿ.ಎಸ್. ಈ ಎಲ್ಲಾ ಕೊರತೆಗಳನ್ನು ನೀಗಲಾರದು. ಆದರೆ ಮಹಿಳೆಯರಿಗೆ ಅರಿವು ಮೂಡಿಸುವಲ್ಲಿ ಮತ್ತು ರೋಗ ನಿರೋಧಕ ಶಕ್ತಿ ಪೌಷ್ಠಿಕಾಂಶ ಮತ್ತು ವಂಶಾಭಿವೃದ್ಧಿಯ ಬಗ್ಗೆ ಸಾಮುದಾಯಿಕ ಪ್ರಜ್ಞೆ ಬೆಳೆಸುವಲ್ಲಿ ಅದು ಖಂಡಿತಾ ಸಹಕಾರಿ.

**ಸರ್ಕಾರ ನಿರ್ಲಕ್ಷ್ಯ.**

ದೇಶದ 33 ಕೇಂದ್ರಗಳಲ್ಲಿ ಪ್ರಯೋಗಾತ್ಮಕವಾಗಿ ಸಮಗ್ರ ಶಿಶು ಅಬಿವೃದ್ಧಿ ಯೋಜನೆ ಜಾರಿಗೆ ಬಂದು 25 ವರ್ಷಗಳಾಗಿವೆ. ಇಂದು ದೇಶದ ಎಲ್ಲ ರಾಜ್ಯಗಳ ಒಟ್ಟು 4384 ತಾಲ್ಲೂಕುಗಳಲ್ಲಿ ಈ ಯೋಜನೆ ಜಾರಿ ಯಲ್ಲಿದ್ದು ಅದು ಶಿಶು ಅಭಿವೃದ್ಧಿ ಯೋಜನೆಗಳಲ್ಲಿ ಇಡೀ ವಿಶ್ವದಲ್ಲೇ ಅತಿ ದೊಡ್ಡ ಯೋಜನೆಯೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಬಡಕುಟುಂಬಗಳಿಗೆ ಸೇರಿದ 49.23 ಲಕ್ಷ ಗರ್ಭಿಣಿ ಮತ್ತು ಸ್ತನ್ಯ ಪಾನ ನೀಡುವ ಮಹಿಳೆಯರು ಮತ್ತು 6 ವರ್ಷಕ್ಕಿಂತ ಚಿಕ್ಕವರಾದ 231.46 ಲಕ್ಷ ಮಕ್ಕಳು ಸೇರಿದಂತೆ ಒಟ್ಟು 2.80 ಕೋಟಿ ಫಲಾನುಭವಿಗಳು ಈ ಯೋಜನೆಯ ಲಾಭ ಪಡೆದಿದ್ದಾರೆ. ದೇಶದಲ್ಲಿ 12 ಲಕ್ಷ ಮಹಿಳೆಯರು ಈ ಯೋಜನೆಯಲ್ಲಿ ದುಡಿಯುತ್ತಿದ್ದು ಇವರ ಕನಿಷ್ಟ ಹಕ್ಕುಗಳ ಬಗ್ಗೆ ಸರ್ಕಾರ ತೀರಾ ನಿರ್ಲಕ್ಷ್ಯ ವಹಿಸಿದೆ. ಹೀಗಿದ್ದೂ ಅಂಗನವಾಡಿ ಕೇಂದ್ರಗಳ ಜಾಗೃತಿ ಮೂಡಿಸುವ ಮತ್ತು ಶಿಶು ಅಭಿವೃದ್ಧಿಗಾಗಿ ಜಂಟಿ ಕಾರ್ಯ ನಡೆಸುವ ಸ್ತ್ರೀ ಸಮುದಾಯ ಸಂದಿಸುವ ಸ್ಥಳವೆಂದೂ ಕರೆದಿರುವುದು ವಿಪರ್ಯಾಸ.

**ಯೋಜನೆ ಯಶಸ್ಸು.**

2000-2001 ನೇ ಇಸವಿಯಲ್ಲಿ ನ್ಯಾಷನಲ್ ಕೌನ್ಸಿಲ್ ಆಫ್ ಅಪ್ಲೈಡ್ ಎಕನಾಮಿಕ್ ರಿಸರ್ಚ್ (NCAER)ನಡೆಸಿದ ಪ್ರಮುಖ ಸರ್ವೇಕ್ಷಣೆಯ ಪ್ರಕಾರ ಶಿಶು ಮರಣ ಪ್ರಮಾಣದಲ್ಲಾಗಿರುವ ಇಳಿತ ಮತ್ತು ಅತೀ ಪೌಷ್ಠಿಕಾಂಶ ಕೊರತೆ ಮತ್ತು ಸಾಮಾನ್ಯ ಪೌಷ್ಠಿಕಾಂಶ ಕೊರತೆಯಿಂದ ನರಳುವ ಮಕ್ಕಳ ಸಂಖ್ಯೆಯಲ್ಲುಂಟಾಗಿರುವ ಇಳಿತ ಈ ಯೋಜನೆಯ ಯಶಸ್ಸನ್ನು ಪ್ರತಿಫಲಿಸುತ್ತದೆ.

**ವಿಶ್ವಬ್ಯಾಂಕ್ ಒತ್ತಡ ಕೇಂದ್ರ ಮುಚ್ಚುವ ಬೆದರಿಕೆ.**

1991ರಲ್ಲಿ ವಿಶ್ವ ಬ್ಯಾಂಕಿನ ಒತ್ತಾಯದಿಂದ ಆರಂಭಿಸಿದ ಆರ್ಥಿಕ ಸುಧಾರಣೆಗಳ ನಂತರ ಸರಕಾರ ಕೈಗೊಂಡ ಹಲವು ಕಾರ್ಯಕ್ರಮಗಳು ಐಸಿಡಿಎಸ್ ಮೇಲೆಯೇ ಪ್ರತಿಕೂಲ ಪರಿಣಾಮ ಬೀರಿವೆ. ಅವು ಅಂಗನವಾಡಿ ನೌಕರರ ಕೆಲಸದ ಪರಿಸ್ಥಿತಿಗಳು ಮತ್ತು ಹಲವು ವರ್ಷಗಳ ನಿರಂತರ ಹೋರಾಟಗಳಿಂದ ಗಳಿಸಿದ ಅಲ್ಪಸ್ವಲ್ಪ ಉದ್ಯೋಗ ಭದ್ರತೆಯ ಮೇಲೂ ಪ್ರತಿಕೂಲ ಪರಿಣಾಮ ಬೀರಿದೆ. ಐಸಿಡಿಎಸ್ ಮೇಲೆ ಈ ನೀತಿಗಳ ಪರಿಣಾಮ ಏನಾಗಿದೆಯೆಂಬುದು ಮಂಜೂರಾದ ಯೋಜನೆಗಳಲ್ಲಿ ಕಾರ್ಯರೂಪಕ್ಕೆ ಇಳಿದ ಯೋಜನೆ ಗಳ ಸಂಖ್ಯೆಯಲ್ಲಿ ಕಾಣುತ್ತದೆ. 1985ರಿಂದ 1995ರ ನಡುವೆ ಐಸಿಡಿಎಸ್ ವ್ಯಾಪ್ತಿಯಲ್ಲಿ ಬಂದ ಬ್ಲಾಕುಗಳ ಸಂಖ್ಯೆ 350 ರಿಂದ 1945ಕ್ಕೇರಿತು. 1995-96ರಲ್ಲಿ ಮಂಜೂರು ಮಾಡಿದ ಎಲ್ಲಾ 1653 ಯೋಜನೆಗಳು ಪೂರ್ವವಾಗಿ ಕಾರ್ಯಗತಗೊಂಡು 9ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಐಸಿಡಿಎಸ್ ಸಾರ್ವತ್ರೀಕರಣಗೊಳ್ಳುತ್ತದೆ ಎಂದು ಸರಕಾರ ಸಾರಿತು. ಆಗ ದೇಶದಲ್ಲಿನ ಒಟ್ಟು ಇಂತಹ ಯೋಜನೆಗಳ ಸಂಖ್ಯೆ 5614 ಆಗುತ್ತಿತ್ತು. ಆದರೆ 1999-2000ರ ವೇಳೆಗೆ ಕಾರ್ಯಗತಗೊಂಡ ಯೋಜನೆಗಳ ಸಂಖ್ಯೆ 4200ರಲ್ಲಿ ನಿಂತಿತ್ತು. 9ನೇ ಯೋಜನ ಮುಗಿಯಲು 1 ವರ್ಷ ಉಳಿದಿರುವಾಗ ಫೆಬ್ರವರಿ 2001ರ ವೇಳೆಗೆ ಈ ಸಂಖ್ಯೆ ಕೇವಲ 4384-ಮಂಜೂರಾದ ಯೋಜನೆಗಳು ಕಾರ್ಯಗತ ಗೊಳ್ಳಲಿಲ್ಲ. ಏಕೆಂದರೆ ಹಣಕಾಸು ಸಚಿವಾಲಯ ಹೊಸಯೋಜನೆಗಳ ಆರಂಭಕ್ಕೆ ಹಣಕಾಸಿನ ತೊಂದರೆಯಿದೆ ಎಂಬ ನೆಪದ ಮೇಲೆ ಅನುಮತಿ ನೀಡಲಿಲ್ಲ. ಪಂಜಾಬಿನಲ್ಲಿ ಕೆಲವು ಯೋಜನೆಗಳನ್ನು ಮುಚ್ಚಲಾಯಿತು. ಡೆಹರಾಡೂನ್‌ನಲ್ಲಿ 16 ಕೇಂದ್ರಗಳನ್ನು ಮುಚ್ಚಲಾಯಿತು. ಕೇಂದ್ರ ಸರ್ಕಾರವೇ ಒದಗಿಸುತ್ತಿದ್ದ ಪೂರಕ ಪೌಷ್ಠಿಕ ಆಹಾರವನ್ನು ಒದಗಿಸುವುದು ರಾಜ್ಯ ಸರ್ಕಾರದ ಜವಾಬ್ದಾರಿ ಯೆಂದು ತಿಳಿಸಿದೆ. ಆದರೆ ಖರ್ಚು ಕಡಿಮೆ ಮಾಡುವ ತಮ್ಮ ಕ್ರಮಗಳಿಂದಾಗಿ ಬಿಹಾರ, ರಾಜಸ್ತಾನ, ಮಧ್ಯಪ್ರದೇಶ ಇತ್ಯಾದಿ ರಾಜ್ಯಗಳು ತಿಂಗಳಾನುಗಟ್ಟಲೆ ಅದನ್ನು ಪೂರೈಸಿಲ್ಲ. ಇದರ ಫಲಿತಾಂಶವಾಗಿ ಅಂಗನವಾಡಿ ಕೇಂದ್ರಕ್ಕೆ ಮಕ್ಕಳು ಬರುವ ಸಂಖ್ಯೆ ಕಡಿಮೆ ಇಳಿಮುಖವಾಗುತ್ತಿದೆ. ಮಕ್ಕಳ ಸಂಖ್ಯೆ 25 ಕ್ಕಿಂತ ಕಡಿಮೆಯಾದರೆ ಕೇಂದ್ರ ಗಳನ್ನು ಮುಚ್ಚುವುದಾಗಿ ಅಧಿಕಾರಿಗಳು ಬೆದರಿಸುತ್ತಾರೆ.

ಅಂಗನವಾಡಿ ಕೇಂದ್ರಕ್ಕೆ ಬೇಕಾದ ಕಟ್ಟಡ, ಸೌದೆ, ಆಟಿಕೆ ಸಾಮಾನು ಇವುಗಳನ್ನು ಸಮುದಾಯದ ಜನ ರಿಂದ ಸಂಗ್ರಹ ಮಾಡಬೇಕೆಂದೂ ಸರ್ಕಾರ ಹೇಳುತ್ತಿದೆ.

**ಹೆಚ್ಚಿದ ದೌರ್ಜನ್ಯಗಳು.**

ರಾಜ್ಯದಲ್ಲಿ ಮಹಿಳೆಯ ಸಶಕ್ತೀಕರಣಕ್ಕಾಗಿ ಗ್ರಾಮಾಂತರ ಮಹಿಳೆಯರಿಂದಲೇ ಹಣವನ್ನು ಸಂಗ್ರಹಿಸಿ ಸ್ವಸಹಾಯ ಗುಂಪಿನಂತೆ ಸ್ತ್ರೀ ಶಕ್ತಿ ಎಂಬ ಹೆಸರಿನ ಗುಂಪುಗಳನ್ನು ಅಂಗನವಾಡಿ ಕೇಂದ್ರವಿರುವ ಸ್ಥಳದಲ್ಲಿ 3 ಗುಂಪುಗಳನ್ನು ಮಾಡಲೇ ಬೇಕು. ಜನಸಂಖ್ಯೆ ಕಡಿಮೆಯಿರುವ, ಆದಾಯ ರಹಿತ ಮಹಿಳೆಯರು ಇರುವ ಕಡೆ ಸ್ತ್ರೀಶಕ್ತಿ ಗುಂಪುಗಳನ್ನು ರಚಿಸದಿದ್ದರೆ ಶಿಸ್ತುಕ್ರಮ ಕೈಗೊಳ್ಳುವುದು ಮೊದಲು ಸರಕಾರ 3 ಗುಂಪುಗಳಿಗೂ 5000 ರೂಗಳ ಲೋನ್ ಕೊಡುತ್ತೇವೆಂದು ಹೇಳಿ ಈಗ ಮೊದಲ ಗುಂಪಿಗೆ ಮಾತ್ರ (ಅತ್ಯುತ್ತಮವಾಗಿ ಕಾರ್ಯನಿರ್ವಹಿಸುವ) ಲೋನ್ ಕೊಡುವುದಾಗಿ ಹೇಳುತ್ತಿದೆ. ಇದರಿಂದ ಮತ್ತೇ ಗ್ರಾಮಾಂತರ ಪ್ರದೇಶಗಳಲ್ಲಿ ಅಂಗನವಾಡಿ ನೌಕರರು ಮತ್ತೊಂದು ರೀತಿಯ ದೌರ್ಜನ್ಯಕ್ಕೂ ಒಳಗಾಗಬೇಕಾದ ಪರಿಸ್ಥಿಯಿದೆ.

ಇದೆಲ್ಲವನ್ನು ವಿರೋಧಿಸಿ ಪ್ರತಿಭಟನೆ ನಡೆದಿದೆ "ಐ.ಸಿ.ಡಿ.ಎಸ್. ಯೋಜನೆಯನ್ನು ಉಳಿಸಿ, ನಮ್ಮ ಮಕ್ಕಳನ್ನು ರಕ್ಷಿಸಿ" ಎಂಬ ಪುಸ್ತಕವನ್ನು 'ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ' ಬಿಡುಗಡೆ ಮಾಡಿದೆ. ಈ ಪುಸ್ತಕ ಜೆಸಿಡಿಎಸ್. ಯೋಜನೆ ಮತ್ತು ಈ ಮಹಿಳೆಯರಿಗೆ ಸಂಬಂಧಿಸಿದ ವಿವರವಾದ ಮಾಹಿತಿಯಿದೆ.

- ಎಸ್. ವರಲಕ್ಷ್ಮಿ


ಜಮ್ಮು ಮತ್ತು ಕಾಶ್ಮೀರ

# ಕೇಂದ್ರದ ನೀತಿ- ಪರಿಸ್ಥಿತಿಯನ್ನು ಹದಗೆಡಿಸಲಿದೆ


ಜಮ್ಮು ಮತ್ತು ಕಾಶ್ಮೀರದಲ್ಲಿ ಕಾರ್ಯಾಚರಿಸುತ್ತಿರುವ ಭಯೋತ್ಪಾದಕ ಸಂಘಟನೆಗಳು ಜಮ್ಮುವಿನಲ್ಲಿ ನಡೆಸಿರುವ ದಾರುಣ ದಾಳಿಯು, ರಾಜ್ಯದಲ್ಲಿನ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಲು ನಡೆಸಿರುವ ಉದ್ದೇಶಪೂರ್ವಕ ಪ್ರಚೋದನೆಯಾಗಿದೆ ಹಾಗೂ ಶಾಂತಿ ಮತ್ತು ಸುವ್ಯವಸ್ಥೆಯನ್ನು ಪುನರ್‌ಸ್ಥಾಪಿಸಲು ಇರುವ ರಾಜಕೀಯ ಪ್ರಕ್ರಿಯೆಯನ್ನು ಮುಂದುವರಿಸಲು ಅವಕಾಶಗಳನ್ನು ಮುಚ್ಚುವಂತದಾಗಿದೆ. ಸಾಯಲು ಸಿದ್ಧವಿರುವ 2 ಅಥವಾ 3 ಜನರ ಶಸ್ತ್ರಸಜ್ಜಿತ ತಂಡಕ್ಕೆ ಅರಾಜಕತೆಯನ್ನು ಸೃಷ್ಟಿಸಲು ಹಾಗೂ ಅಮಾಯಕರನ್ನು ಹತ್ಯೆಗೈಯ್ಯುವುದು ಕಷ್ಟವಲ್ಲ ಎಂಬುದನ್ನು ಇತ್ತೀಚಿನ ಅನುಭವಗಳು ತೋರುತ್ತದೆ. ಪಾಕಿಸ್ತಾನದಲ್ಲಿ ನೆಲೆವುಳ್ಳ ಲಷ್ಕರೀ - ತಯಭ ಮತ್ತು ಜೈಷ್-ಇ-ಮಹಮದ್‌ನಂತಹ ಗುಂಪುಗಳ ಮೇಲೆ ಸಹಜವಾಗಿ ಅನುಮಾನ ಬರುತ್ತದೆ. ಪಾಕಿಸ್ತಾನದಲ್ಲಿ ಅಂತಹ ಸಂಘಟನೆಗಳ ಮೇಲೆ ನಿಷೇಧ ಹೇರಿರುವುದು, ಆ ಸಂಘಟನೆಗಳು ಬೇರೆ ಬೇರೆ ಹೆಸರಿನಲ್ಲಿ ಕಾರ್ಯಚರಿಸುವಂತೆ ಮಾಡಿದೆ.

ಅಮಾಯಕ ನಾಗರೀಕರು, ಸೈನ್ಯದಲ್ಲಿ ಕೆಲಸ ನಿರ್ವಹಿಸುತ್ತಿರುವ ಸೈನಿಕರ ಮನೆಗಳ ಸದಸ್ಯರೇ ಹೆಚ್ಚುಳ್ಳ ಮಹಿಳೆಯರು ಮತ್ತು ಮಕ್ಕಳ ಬರ್ಬರ ಕೊಲೆ ರಾಷ್ಟ್ರದಲ್ಲಿ ತೀವ್ರ ಆಕ್ರೋಶಕ್ಕೆ ಎಡೆಮಾಡಿದೆ. ತಮ್ಮ ಇರುವಿಕೆ ಹಾಗೂ ಉದ್ದೇಶ ಕುರಿತು ಅಂತರರಾಷ್ಟ್ರೀಯ ಗಮನ ಸೆಳೆಯುವ, ಉದ್ದೇಶದೊಂದಿಗೆ ಅಮೇರಿಕಾದ ಸಹಾಯಕ ಕಾರ್ಯದರ್ಶಿ ಕ್ರಿಸ್ಟಿನಾ ರೋಕಾ ದೆಹಲಿಗೆ ಆಗಮಿಸುವ ಸಮಯವನ್ನು ಈ ದಾಳಿ ನಡೆಸಲು ತಂತ್ರಗಾರಿಕೆಯಿಂದ ಬಳಸಿಕೊಂಡಿದ್ದಾರೆ. ಇಂತಹ ಬರ್ಬರ ಹತ್ಯೆಗಳು ತಕ್ಷಣದ ಕಾರ್ಯಾಚರಣೆ ಮತ್ತು ಪ್ರತಿಕಾರಕ್ಕೆ ಎಡೆಮಾಡಿಕೊಡುತ್ತದೆ. ಇಂತಹ ಭಯೋತ್ಪಾದನೆ ವಿರುದ್ಧ ದೂರಗಾಮಿ ಯುದ್ಧ ನಡೆಸುವ ಮುನ್ನ ಅಂತಹ ಆಯ್ಕೆಯ ಎಲ್ಲಾ ಸಾಧ್ಯತೆ - ಬಾದ್ಯತೆಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ.

ಸಂಸತ್ತಿನ ಮೇಲೆ ಡಿಸೆಂಬರ್ 13'ರ ಭಯೋತ್ಪಾದಕರ ದಾಳಿಯ ನಂತರ ವಾಜಪೇಯಿ ಸರ್ಕಾರ ನಿಯಂತ್ರಣ ರೇಖೆಯ ಉದ್ದಕ್ಕೂ ಗಡಿಯಲ್ಲಿ ಪೂರ್ಣ ಪ್ರಮಾಣದಲ್ಲಿ ಸೈನ್ಯೆಯನ್ನು ಜಮಾಯಿಸಿತು. ಪಾಕಿಸ್ತಾನವು ತನ್ನ ಸೈನ್ಯೆಯನ್ನು ಜಮಾಯಿಸಿತು. ಕಳೆದ 4 ತಿಂಗಳಿಂದ ಎರಡು ಕಡೆಯ ಸೈನ್ಯೆಯು ಯಾವಾಗಲಾದರು ಮಿಲಿಟರಿ ಕಾರ್ಯಾಚರಣೆ ಪ್ರಾರಂಭವಾಗಬಹುದೆಂದು ನಿರೀಕ್ಷೆಯಲ್ಲಿ ಜಮಾವಣೆಗೊಂಡಿದೆ. ಇಂತಹ ಸ್ಥಿತಿಯಲ್ಲಿ ಪಕ್ಷದ 17ನೇ ಮಹಾಧಿವೇಶನವು ಅನುಮೋದಿಸಿರುವ ನಿಲುವಾದ ಸೈನ್ಯೆಯ ಜಮಾವಣೆಯನ್ನು ಎರಡೂ ಕಡೆಯವರು ಹಿಂದೆ ಪಡೆದು, ಆತಂಕ ನಿವಾರಣೆಗೆ ಕ್ರಮವಹಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸಿತ್ತು.







ಡಿಸೆಂಬರ್ 13'ರ ದಾಳಿಯ ನಂತರದ ಪರಿಸ್ಥಿತಿಯಂತೆ, ಇತ್ತೀಚಿನ ಭಯೋತ್ಪಾದಕ ದಾಳಿಯ ಕುರಿತು ವ್ಯಾಪಕ ಅಂತರರಾಷ್ಟ್ರೀಯ ಖಂಡನೆಯು ಮೂಡಿಬಂದಿದೆ. ಪಾಕಿಸ್ತಾನದ ಆಡಳಿತ ಹಾಗೂ ಮುಷರಫ್‌ರವರು. ಪಾಕಿಸ್ತಾನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೂಲಭೂತವಾದಿ ಹಾಗೂ ಭಯೋತ್ಪಾದಕ ಗುಂಪುಗಳ ಮೇಲೆ ಅವರ ಜನವರಿ 12'ರ ಭಾಷಣಕ್ಕೆ ಅನುಗುಣವಾಗಿ ಉಗ್ರಕ್ರಮ ವಹಿಸುವಂತೆ ಭಾರತವು ಒತ್ತಡ ಹೇರಬೇಕಿದೆ. "ಭಯೋತ್ಪಾದನೆ ವಿರುದ್ಧ ಯುದ್ಧ"ದಲ್ಲಿ ಪಾಕಿಸ್ತಾನವನ್ನು ತನ್ನ ಪಟ್ಟಿಯಲ್ಲಿ ಇರಿಸಿ ಕೊಂಡಿರುವ ಅಮೇರಿಕಾಗೆ ಈ ವಿಷಯ ಕುರಿತು ವಿಶೇಷ ಜವಾಬ್ದಾರಿಯಾಗಿದೆ. ಗಡಿಯಾಚೆಗಿನ ಯಾವುದೇ ಸೈನಿಕ ಕಾರ್ಯಾಚರಣೆ ಈ ಉದ್ದೇಶವನ್ನು ಸಾಕಾರಗೊಳಿಸದು. ಈ ಕುರಿತಂತೆ ಪ್ರಖ್ಯಾತ ರಕ್ಷಣಾ ತಜ್ಞರಾದ ಲೆಫ್ಟಿನೆಂಟ್ ಜನರಲ್ ವಿ.ಆರ್.ರಾಘವನ್ ಎಚ್ಚರಿಸಿರುವಂತೆ, ಪಾಕಿಸ್ತಾನ ಅಥವಾ ಪಾಕ್ ಆಕ್ರಮಿತ ಕಾಶ್ಮೀರದ ಮೇಲಿನ ಎಂತಹದೇ ಸೀಮಿತ ಮಿಲಿಟರಿ ದಾಳಿಯೂ ಸಹಾ ಪ್ರತಿ ದಾಳಿಗೆ ಎಡೆಮಾಡಲಿದೆ. ಈ ಬಿಕ್ಕಟ್ಟು ಪೂರ್ಣ ಪ್ರಮಾಣದ ಯುದ್ಧವಾದಲ್ಲಿ ಅಣ್ವಸ್ತ್ರಗಳ ಬಳಕೆಯ ಅಪಾಯ ತಪ್ಪಿದ್ದಲ್ಲ.

ವಾಜಪೇಯಿ ಸರ್ಕಾರಕ್ಕೆ 'ಸಂಬಂಧಿಸಿದಂತೆ', ಗಡಿಯಲ್ಲಿ ಪೂರ್ಣ ಪ್ರಮಾಣದ ಪಡೆಗಳ ಜಮಾವಣೆ ಮತ್ತೆ ಅವುಗಳನ್ನು ಅಲ್ಲಿ ದುಬಾರಿ ವೆಚ್ಚದಲ್ಲಿ ಇರಿಸುವಿಕೆ ಅನುತ್ಪಾದಕವಾಗಿ ಪರಿಣಮಿಸಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಕೆಲವು ಆಂತರಿಕ ಭದ್ರತೆಯ ಜವಾಬ್ದಾರಿ ನಿರ್ವಹಿಸಬೇಕಾಗಿದ್ದ ಸಶಸ್ತ್ರ ಪಡೆಗಳನ್ನು ಗಡಿಗೆ ನಿಯೋಜಿಸಲಾಯಿತು. ದೊಡಾ-ಪೂಂಚ್ ಪ್ರದೇಶಗಳಲ್ಲಿ ಭಯೋತ್ಪಾದಕರ ಉಪಟಳ ಮತ್ತು ಜಮ್ಮು ಪ್ರದೇಶದಲ್ಲಿ ಭಯೋತ್ಪಾದಕರ ಹೆಚ್ಚಿಚ್ಚು ಕೇಂದ್ರಿಕರಣದ ಅಪಾಯ ಎದುರಿಸಲು ಸಶಸ್ತ್ರ ಪಡೆಗಳ ವಿಶೇಷ ಗಮನದ ಅಗತ್ಯವಿದೆ. ಭಯೋತ್ಪಾದಕ ಗುಂಪುಗಳು ಅಪಾಯವನ್ನು ಎದುರಿಸಲು ಜಮ್ಮು ಮತ್ತು ಕಾಶ್ಮೀರದಲ್ಲಿ ಸಮರ್ಪಕ ಕ್ರಮವಹಿಸದೆ, ಪಾಕಿಸ್ತಾನದ ಮೇಲೆ ಸೈನಿಕ ಒತ್ತಡವನ್ನು ಮುಂದುವರೆಸುವ ಪೋಸನ್ನು ನೀಡುವುದು ಫಲಕಾರಿಯಾಗದು. ಹಿಮ ಕರಗುವುದರಿಂದಾಗಿ, ರಾಜ್ಯದೊಳಕ್ಕೆ ನುಸುಳುವಿಕೆ ಹೆಚ್ಚಲಿದೆ, ಸೈನ್ಯೆಯು ಇತರೆ ರಕ್ಷಣಾ ಪಡೆಗಳೊಂದಿಗೆ ಪರಿಸ್ಥಿತಿ ಎದುರಿಸಲು ಕ್ರಮವಹಿಸಬೇಕಿದೆ.


ಈ ಕ್ರಮಗಳು ಅಗತ್ಯವಿರುವಾಗಲೇ, ಕಾಶ್ಮೀರದ ಮೂಲಭೂತ ಸಮಸ್ಯೆ ಎದುರಿಸಲು ಬಿಜೆಪಿ ನೇತೃತ್ವದ ಸರ್ಕಾರದ ಬಳಿ ಯಾವುದೇ ರಾಜಕೀಯ ಪರಿಹಾರವಿಲ್ಲದಾಗಿರುವುದು ವಾಸ್ತವಾಂಶ. ಇನ್ನೇನು ಕೆಲವು ತಿಂಗಳುಗಳಲ್ಲಿ ಕಾಶ್ಮೀರದಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಲಿದ್ದು ಪ್ರಸ್ತುತ ಚೌಕಟ್ಟಿನೊಳಗಿರುವ ಗುಂಪುಗಳನ್ನು ಹೊರತುಪಡಿಸಿ ಇತರರನ್ನು ಒಳಗೊಳ್ಳಲು ಮನವೊಲಿಸಲು ವಾಜಪೇಯಿ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ತನ್ನ ದುರಾಡಳಿತ ಹಾಗೂ ಬಿಜೆಪಿಯೊಂದಿಗೆ ಕೈಜೋಡಿಸುವ ತನ್ನ ಸಮಸಾಧಕತನದಿಂದಾಗಿ ಫರೂಖ್ ಅಬ್ದುಲ್ಲಾ ಸರ್ಕಾರ ಜನತೆಯ ಅವಕೃಪೆಗೆ ಒಳಗಾಗಿದೆ. ಉತ್ತಮ ಹೆಜ್ಜೆಯಾಗಿ ನೀಡಬಹುದಾಗಿದ್ದ ಸ್ವಾಯತ್ತತೆಯನ್ನು ಕಾಶ್ಮೀರದ ಜನತೆಗೆ ನಿರಾಕರಿಸಿರುವ ವಾಜಪೇಯಿ ಸರ್ಕಾರ ಪ್ರಸ್ತುತ ಕಾಶ್ಮೀರದ ಜನತೆಗೆ ನೀಡಲು ಯಾವುದೇ ರಾಜಕೀಯ ಪ್ರಸ್ತಾವಗಳು ಇಲ್ಲದಾಗಿವೆ.

ಭಯೋತ್ಪಾದಕರ ಮೇಲೆ ಸಮರ್ಪಕ ಕ್ರಮಗಳನ್ನು ಜರುಗಿಸುವಂತೆ ಪಾಕಿಸ್ತಾನಿ ಸರ್ಕಾರದ ಮೇಲೆ ರಾಜತಾಂತ್ರಿಕ ಹಾಗೂ ರಾಜಕೀಯ ಒತ್ತಡವನ್ನು ಹೆಚ್ಚಿಸುವುದು, ಜಮ್ಮು ಮತ್ತು ಕಾಶ್ಮೀರದಲ್ಲಿ ರಾಜಕೀಯ ಪ್ರಕ್ರಿಯೆಯನ್ನು ಬಲಗೊಳಿಸಲು ಸಮರ್ಪಕ ಕ್ರಮಗಳನ್ನು ವಹಿಸುವುದು ಮತ್ತು ಮಾತುಕತೆಗೆ ಆಧಾರವಾಗಿ ಸ್ವಾಯತ್ತತೆಯನ್ನು ಪ್ರಸ್ತಾಪಿಸುವುದು, ಹಾಗೂ ಭಯೋತ್ಪಾದಕರನ್ನು ನಿಗ್ರಹಿಸಲು ಭದ್ರತಾ ಕ್ರಮಗಳು ಮತ್ತು ಬೇಹುಗಾರಿಕೆಯನ್ನು ಹೆಚ್ಚಿಸುವಂತಹ, ಈ ಮೂರು ದೃಷ್ಟಿಕೋನದ ತಿಳುವಳಿಕೆಯೊಂದಿಗೆ ಕ್ರಮವಹಿಸುವುದು ಮಾತ್ರ ಪರಿಸ್ಥಿತಿಯನ್ನು ಸಮರ್ಪಕವಾಗಿ ಎದುರಿಸಲು ಸಹಕಾರಿಯಾಗಲಿದೆ.

ವಾಜಪೇಯಿ ಸರ್ಕಾರದ ಯುದ್ಧೋನ್ಮಾದ ತೀವ್ರಗೊಳಿಸುವ ಹೇಳಿಕೆಗಳು ಮತ್ತು ಕಾಶ್ಮೀರ ಸಮಸ್ಯೆಯ ರಾಜಕೀಯ ಪರಿಹಾರಕ್ಕೆ ಗಂಭೀರ ಗಮನ ನೀಡುವುದರ ಕೊರತೆ ಹಾಗೂ ಜಮ್ಮು ಮತ್ತು ಕಾಶ್ಮೀರ ಕುರಿತು ಸರ್ಕಾರ ನೀತಿ ಒಟ್ಟಾರೆಯಾಗಿ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುವ ಅಪಾಯವನ್ನು ಹೊಂದಿವೆ.

# ಕೇಂದ್ರ ಹಣಕಾಸು ಸಚಿವ ಯಶ್ವಂತ್ ಸಿನ್ಹಾ ರಾಜಿನಾಮೆಗೆ ನೀಡಬೇಕು

ಮಾರಿಷಸ್ ನೆಲೆಯ ವಿದೇಶಿ ಹಣಕಾಸು ಬಂಡವಾಳ ಹೂಡಿಕೆದಾರರಿಗೆ, (FII) ಶೇರುಗಳ ಮಾರಾಟದಿಂದ ಲಭಿಸುವ ಆದಾಯವು (ದ್ವಿತೆರಿಗೆ ತಪ್ಪಿಸಿಕೊಳ್ಳುವಿಕೆ ಒಪ್ಪಂದದಂತೆ - DTAC) ಸೇರಿದಂತೆ



ಭಾರತದಲ್ಲಿ ಗಳಿಸಲಾಗುವ ಬಂಡವಾಳ ಗಳಿಕೆಯ ಮೇಲಿನ ತೆರಿಗೆಯಿಂದ ವಿಮುಕ್ತಗೊಳಿಸುವ ನೇರ ತೆರಿಗೆಯ ಕೇಂದ್ರ ಮಂಡಳಿ (CBDT)ಯ 2000'ದ ಏಪ್ರಿಲ್ 13'ರ ಸುತ್ತೋಲೆಯನ್ನು ದೆಹಲಿ ಉಚ್ಚ ನ್ಯಾಯಾಲಯದ ನ್ಯಾಯಪೀಠವು ರದ್ದುಗೊಳಿಸಿದ ಹಿನ್ನೆಲೆಯಲ್ಲಿ ಹಣಕಾಸು ಸಚಿವ ಯಶವಂತ್ ಸಿನ್ಹಾ ರಾಜಿನಾಮೆ ನೀಡಬೇಕೆಂದು ಸಿಪಿಐ(ಎಂ) ರಾಜ್ಯಸಮಿತಿ ಒತ್ತಾಯಿಸಿದೆ.

ಮಾರೀಷಸ್ ಮೂಲಕ ವಿದೇಶಿ ಹಣಕಾಸು ಬಂಡವಾಳ ಹೂಡಿಕೆದಾರರಿಗೆ ಸುರಕ್ಷಿತ ದಾರಿ ಒದಗಿಸುವ ಪ್ರತಿಪಾದನೆಯನ್ನು ಬಹಿರಂಗವಾಗಿ ಮಾಡಿದ ಹಣಕಾಸು ಸಚಿವರ ರಾಜಿನಾಮೆಯನ್ನು 2 ವರ್ಷಗಳ ಹಿಂದೆಯೇ ಸಿಪಿಐ(ಎಂ) ಒತ್ತಾಯಿಸಿತ್ತು. ಸಚಿವರ ಈ ತೀರ್ಮಾನದಿಂದಾಗಿ, ಅಂದಿನ ಅಂದಾಜಿನಂತೆ ಸರಿಸುಮಾರು 3000 ಕೋಟಿ ರೂಪಾಯಿಗಿಂತ ಹೆಚ್ಚು ಹಣವನ್ನು ಭಾರತ ದೇಶವು ಕಳೆದುಕೊಳ್ಳಬೇಕಾಯಿತು. CBDT ಯನ್ನು ಇಂತಹ ಒಂದು ವಿವಾದಾಸ್ಪದ ಸುತ್ತೋಲೆ ಹೊರಡಿಸಲು ಒತ್ತಾಯಿಸುವ ಒಂದು ವಾರ ಮೊದಲೇ ಶ್ರೀ ಯಶ್ವಂತ್ ಸಿನ್ಹಾರವರು ವಿದೇಶಿ ಹೂಡಿಕೆದಾರರಿಗೆ ತೆರಿಗೆ ವಿನಾಯತಿ ನೀಡುವುದಾಗಿ ಬಹಿರಂಗವಾಗಿ ಆಶ್ವಾಸನೆ ನೀಡಿದ್ದರು.

ಅಂದಿನಿಂದ ಈ ಮಾರಿಷಸ್ ದಾರಿಯನ್ನು ವಿದೇಶಿ ಹೂಡಿಕೆದಾರ ಸಂಸ್ಥೆಗಳು ವ್ಯಾಪಕವಾಗಿ ಬಳಸಿ ಭಾರತದಲ್ಲಿ ತೆರಿಗೆ ನೀಡುವುದನ್ನು ತಪ್ಪಿಸಿಕೊಂಡು, ದೊಡ್ಡ ಪ್ರಮಾಣದ ವಿದೇಶಿ ವಿನಿಮಯವನ್ನು ನಮ್ಮ ರಾಷ್ಟ್ರದಿಂದ ಕೊಳ್ಳೆ ಹೊಡೆಯುತ್ತಿವೆ. ಇದರಿಂದಾಗಿ ಎರಡು ವರ್ಷದ ಹಿಂದಿನ (2000'ದ) ಅಂದಾಜಿಗಿಂತ ಹೆಚ್ಚು ನಷ್ಟ ರಾಷ್ಟ್ರದ ಖಜಾನೆಗೆ ಆಗಿರಬಹುದು.

ಈ ಹಿನ್ನೆಲೆಯಲ್ಲಿ ದೆಹಲಿ ಉಚ್ಚನ್ಯಾಯಾಲಯದ ತೀರ್ಪು ಸಿಪಿಐ(ಎಂ) ನಿಲುವನ್ನು ಎತ್ತಿಹಿಡಿದಿದೆ. ಅಧಿಕಾರದಲ್ಲಿ ಉಳಿಯಲು ಯಶ್ವಂತ್ ಸಿನ್ಹಾರವರಿಗೆ ಇನ್ನು ಯಾವುದೇ ಹಕ್ಕು ಇಲ್ಲ. ಗಮನಿಸಬೇಕಾದ ಅಂಶವೆಂದರೆ ಸಿನ್ಹಾರವರ ಸಾರಥ್ಯದಲ್ಲಿ ಹಣಕಾಸು ಸಚಿವಾಲಯ ಹಿಂದೆಂದೂ ಕಂಡರಿಯದಂತಹ ಹಗರಣಗಳಲ್ಲಿ ಭಾಗಿಯಾಗಿದೆ.

ಈ ಕೂಡಲೇ ಮಾರಿಷಸ್ ದಾರಿಯನ್ನು ನಿರ್ಬಂಧಿಸಿ, ರಾಷ್ಟ್ರದ ಇಂತಹ ಲೂಟಿಗೆ ಅನುವುಗೊಳಿಸಿದ ಕಾರ್ಯದಲ್ಲಿ ಭಾಗಿಗಳಾಗಿರುವ ಎಲ್ಲರನ್ನು ಶಿಕ್ಷಿಬೇಕೆಂದು ಈಗಲಾದರೂ ಶ್ರೀ ಯಶ್ವಂತ್ ಸಿನ್ಹಾರವರು ರಾಜಿನಾಮೆ ನೀಡಲೇಬೇಕು.

## ವಾಜಪೇಯಿ ಸರ್ಕಾರದ ಪೆಟ್ರೋ

# ಮತ್ತೇ ಪೆಟ್ರೋಲ್-ಡೀಸೆ


**ಬಜೆಟ್‌ನಲ್ಲಿ ಪೆಟ್ರೋಲಿಯಂ ತೈಲ ಉತ್ಪನ್ನಗಳ ಆಡಳಿತಾತ್ಮಕ ಬೆಲೆ ವ್ಯವಸ್ಥೆಯನ್ನು ರದ್ದು ಬೆಲೆಯಲ್ಲಿ ಭಾರಿ ಏರಿಕೆ ಮಾಡಲಾಗಿದೆ. ಪೆಟ್ರೋಲ್ ಲೀಟರ್‌ಗೆ ಸುಮಾರು ರೂ. 2.50 ಒಂದು ಕಡೆ ಆಡಳಿತಾತ್ಮಕ ಬೆಲೆ ವ್ಯವಸ್ಥೆಯ ಭಾಗವಾದ ಭಾರಿ ತೆರಿಗೆಗಳನ್ನು ಉಳಿಸಿಕೊಂಡು ಮಾಡುತ್ತಿದೆ. ಇನ್ನೊಂದು ಕಡೆ ಅಂತರ್‌ರಾಷ್ಟ್ರೀಯ ಬೆಲೆಗಳು ಏರಿದ ನೆಪದಲ್ಲಿ ಬೆಲೆ ಏರಿ ಏರಿಕೆಯಿಂದ ಇನ್ನೂ 4 ಸಾವಿರ ಕೋಟಿಯಷ್ಟು ಲೂಟಿ ಹೆಚ್ಚಲಿದೆ. ಈ ಬಜೆಟ್‌ನಲ್ಲಿ ಸಾಮ ತೆರಿಗೆ ಇಮ್ಮಡಿಗೊಳಿಸಿದೆ. ಈ ಅಧಿಕ ತೆರಿಗೆಯನ್ನು ಪೂರ್ಣವಾಗಿ ಹಿಂತೆಗೆದುಕೊಂಡರೆ ಸಾಕ ಜನತೆಯ ಮೇಲೆ ಹೊರಿಸುವ ಅಗತ್ಯ ಇಲ್ಲ. ಜನಸಾಮಾನ್ಯರ ಲೂಟಿ ಮಾಡಿ ಭಾರಿ ಕಂ ಬೇಕಾಗಿಲ್ಲ. ಸರಕಾರದ ಈ ಕ್ರಮ ಬಸ್ಸು, ಆಟೋ, ಎಲ್ಲಾ ಸಾರಿಗೆ ಬೆಲೆ ಏರಿಸಲಿದೆ. ಹಣದುಬ್ಬರ ಹೆಚ್ಚಲಿದೆ. ಸರಕಾರದ ಈ ಪೆಟ್ರೋ-ಲೂಟಿಯನ**

ಜೂನ್ 3 ರ ಮಧ್ಯರಾತ್ರಿಯಿಂದ ಸರಕಾರ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯಲ್ಲಿ ಬಾರಿ ಏರಿಕೆ ಮಾಡಿದೆ. ಸರಾಸರಿ ಪೆಟ್ರೋಲ್ ಬೆಲೆಯನ್ನು ಪ್ರತಿ ಲೀಟರಿಗೆ ರೂ. 2.50 ರಷ್ಟು. ಡಿಸೇಲ್ ಬೆಲೆಯನ್ನು ರೂ. 1.50 ರಷ್ಟು ಏರಿಸಲಾಗಿದೆ. ಬೇರೆ ಬೇರೆ ತೆರಿಗೆ ದರಗಳಿಂದಾಗಿ ರಾಜ್ಯದಿಂದ ರಾಜ್ಯಕ್ಕೆ ಈ ಬೆಲೆಗಳು ಬೇರೆ ಇರುತ್ತವೆ. ಬೆಂಗಳೂರಲ್ಲಿ ಪೆಟ್ರೋಲ್ ಬೆಲೆ ರೂ. 2.61 ನಷ್ಟು ಏರಿ ರೂ. 32.83 ಆಗಿದೆ. ಡೀಸೆಲ್ ಬೆಲೆ ರೂ. 1.54 ನಷ್ಟು ಏರಿ ರೂ. 21.34 ಆಗಿದೆ. ಮುಂಬೈಯಲ್ಲಿ ಅತಿಹೆಚ್ಚು ಬೆಲೆ. ಬೆಂಗಳೂರು ಸೇರಿದಂತೆ ವಿವಿಧ ನಗರಗಳಲ್ಲಿ ಬೆಲೆಗಳ ವಿವರ ಕೋಷ್ಟಕ-1 ರಲ್ಲಿ ಇದೆ.

ಕಳೆದ ಎರಡು ತಿಂಗಳಲ್ಲಿ ಬ್ಯಾರೆಲ್‌ಗೆ 5 ಡಾಲರಿನಷ್ಟು ಬೆಲೆ ಏರಿದ್ದೇ ಈ ಬೆಲೆ ಏರಿಕೆಗೆ ಕಾರಣ ಎಂದು ಸರಕಾರದ ಸಮಜಾಯಿಷಿ. ಅಲ್ಲದೆ ಈ ವರ್ಷದ ಬಜೆಟ್‌ನಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಆಡಳಿತಾತ್ಮಕ ಬೆಲೆ ವ್ಯವಸ್ಥೆಯ ರದ್ದು ಮಾಡಿದ ಹಿನ್ನೆಲೆಯಲ್ಲಿ ಇದು ಅನಿವಾರ್ಯ ಎಂದು ಅವರ ಅಂಬೋಣ. ಸರಕಾರದ ಈ ಹೇಳಿಕೆ ನಿಜವೆ ಎಂಬುದರ ಬಗ್ಗೆ ಆಮೇಲೆ ಬರೋಣ. ಈ ಬೆಲೆಯ ಪರಿಣಾಮ ಏನು ಎಂದು ಮೊದಲು ನೋಡೋಣ. ನೇರವಾಗಿ ಪೆಟ್ರೋಲ್ ಬಳಸುವ ಮಧ್ಯಮ ವರ್ಗದವರ ಕಿಸೆ ಕತ್ತರಿಸುವುದು ಒಂದು ಕಡೆ. ಬಸ್ಸುಗಳ ದರ ಏರಿಸುವ ಘೋಷಣೆ ಈಗಾಗಲೇ ಮಾಡಲಾಗಿದೆ. ಆಟೋರಿಕ್ಷಾ, ಲಾರಿ-ರೈಲು ಸಾಗಾಣಿಕೆ ದರಗಳು ಏರಲಿವೆ. ಇದು ಎಲ್ಲಾ ಸರಕುಗಳ ಅಗತ್ಯ ವಸ್ತುಗಳ ಬೆಲೆ ಏರಿಸಲಿದೆ. ಒಟ್ಟಾರೆ ಹಣದುಬ್ಬರ ಹೆಚ್ಚಲಿದೆ. ಎನ್‌ಡಿಎ ಸರ್ಕಾರದ ಆರ್ಥಿಕ ನೀತಿಗಳು, ಯಶವಂತ ಸಿನ್ಹಾರ ಈ ವರ್ಷದ ಬಜೆಟ್‌ನ ಭಾರದಿಂದ ಕುಗ್ಗಿಹೋಗಿರುವ ಜನಸಾಮಾನ್ಯರು ಕುಸಿದು ಬೀಳುವ ಹಂತಕ್ಕೆ ಬಂದಿದ್ದಾರೆ.

**ಹಿಂದಿನ ಆಡಳಿತಾತ್ಮಕ ಬೆಲೆ ವ್ಯವಸ್ಥೆ**

ಇನ್ನು ಪೆಟ್ರೋಲಿಯಂ ಬೆಲೆ ನಿಗದಿ ಮಾಡುವ ಹೊಸ ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳೋಣ. ಏಪ್ರಿಲ್ 1 ರಿಂದ ಹಿಂದೆ ಇದ್ದ ಆಡಳಿತಾತ್ಮಕ ಬೆಲೆ ವ್ಯವಸ್ಥೆಯನ್ನು ರದ್ದು ಮಾಡಲಾಗಿದೆ. ತೈಲ ಉತ್ಪನ್ನಗಳು ಆರ್ಥಿಕದಲ್ಲಿ ವಹಿಸುವ ಮಹತ್ವದ ಪಾತ್ರ, ಸಾರ್ವಜನಿಕ ಹಿತ ಕಾಪಾಡುವ ದೃಷ್ಟಿಯಿಂದ ಅವುಗಳ ಬೆಲೆಯನ್ನು ಸರಕಾರ ನಿಗದಿ ಮಾಡುವುದು. ಮಾರುಕಟ್ಟೆಯ ಏರುಪೇರುಗಳಿಗೆ



ಪೆಟ್ರೋಲಿಯಂ ಸಚಿವ ರಾಮನಾಯಕ್

ಬಿಡದಿರುವುದು - ಈ ವ್ಯವಸ್ಥೆಯ ಪ್ರಮುಖ ಉದ್ದೇಶವಾಗಿತ್ತು. ನಮ್ಮ ತೈಲ ಪೂರೈಕೆ ಒಂದು ಭಾಗ ದೇಶದಲ್ಲೇ ಉತ್ಪಾದನೆಯಿಂದ ಬರುತ್ತಿದೆ. ದೊಡ್ಡ ಭಾಗ ವಿದೇಶಿ ಆಮದಿನಿಂದ ಪೂರೈಕೆ ಆಗುತ್ತದೆ. ದೇಶೀಯ ಉತ್ಪಾದನೆಯ ಭಾಗ ಏರಿಸುತ್ತಾ ಅಂತರ್‌ರಾಷ್ಟ್ರೀಯ ತೈಲ ಬೆಲೆ ಏರುಪೇರು ನಮ್ಮ ಆರ್ಥಿಕದ ಮೇಲೆ ದುಷ್ಪರಿಣಾಮ ಬೀಳದಂತೆ ತಡೆಯುವುದು. ತೈಲ ಉತ್ಪನ್ನಗಳ ಉತ್ಪಾದನೆ, ಬೆಲೆಗಳನ್ನು ಇತರ ಶಕ್ತಿ ಮೂಲ ಮತ್ತು ಇಂಧನಗಳ ಉತ್ಪಾದನೆ ಮತ್ತು ಬೆಲೆಗಳ ಜತೆ ಸಮನ್ವಯಗೊಳಿಸುವುದು. ಬಡವರು ಬಳಸುವ ಸೀಮೆಎಣ್ಣೆ ಬೆಲೆ ಅವರ ಕೊಳ್ಳುವ ಶಕ್ತಿಯ ಮಿತಿಯೊಳಗೆ ಇಡುವುದೂ .- ಇವೆಲ್ಲ ಈ ವ್ಯವಸ್ಥೆಯ ಭಾಗವಾಗಿತ್ತು.

ಈ ವ್ಯವಸ್ಥೆ ಅದರ ಸಾರ್ವಜನಿಕವಾಗಿ ಘೋಷಿತ ಉದ್ದೇಶದಂತೆ ಅಚ್ಚುಕಟ್ಟಾಗಿ ಕೆಲಸ ಮಾಡಿತ್ತು ಎಂದು ಹೇಳಲಾಗುವುದಿಲ್ಲ. ಆದರೆ ಈ ವ್ಯವಸ್ಥೆಯ ಬಹುಭಾಗ ಸಾರ್ವಜನಿಕ ಹಿತ ಕಾಪಾಡಿತ್ತು. ತೈಲದಂತಹ ಪ್ರಮುಖ ಕ್ಷೇತ್ರದಲ್ಲಿ ಬಹುರಾಷ್ಟ್ರೀಯ ಕಂಪನಿಗಳ, ಪೆಟ್ರೋಲಿಯಂ ರಫ್ತು ಮಾಡುವ ದೇಶಗಳ ಲಾಭದಾಸೆಗೆ ಕಪಿಮುಷ್ಟಿಗೆ ನಮ್ಮ ಆರ್ಥಿಕ ಸಿಗದಂತೆ ಕಾಪಾಡುವುದರಲ್ಲಿ ಮಹತ್ವದ ಪಾತ್ರವಹಿಸಿತ್ತು. ದೇಶಿಯ ತೈಲ ಉತ್ಪಾದನೆಯನ್ನು ಬೆಳೆಸಿ ಗಟ್ಟಿ ಗೊಳಿಸಲೂ ಸಹಾಯ ಮಾಡಿತ್ತು. ಅದೇ ರೀತಿ ತೈಲಉತ್ಪನ್ನಗಳ ಅದರಲ್ಲೂ ಬಡವರು ಕೊಳ್ಳುವ ಸೀಮೆಎಣ್ಣೆ, ಸಾರ್ವಜನಿಕರಿಗೆ ನೇರ ಪರಿಣಾಮ ಡೀಸೆಲ್ ಬೆಲೆಯನ್ನು .ನಿಯಂತ್ರಿಸುವುದರಲ್ಲೂ ಪಾತ್ರ ವಹಿಸಿತ್ತು. ಆಳುವ ವರ್ಗಗಳ ಆರ್ಥಿಕ ಬಲ ಗಟ್ಟಿಗೊಳಿಸುವ ಯೋಜನೆಗೆ ಜನಸಾಮಾನ್ಯರಿಂದ ಪರೋಕ್ಷ ತೆರಿಗೆ ಯಿಂದ ಹಣ ಒದಗಿಸುವ ನೀತಿಯ ಭಾಗವಾಗಿತ್ತು ಈ ವ್ಯವಸ್ಥೆ. ಸರಕಾರದ ಹಣದ ಕೊರತೆ ತುಂಬುವ ಕಾಮಧೇನು ಸಹ ಆಗಿತ್ತು. ಈ ವರ್ಷದ ಏಪ್ರಿಲ್ 1 ರಂದು ರದ್ದು ಮಾಡುವ ಮೊದಲೇ, ಈ ವ್ಯವಸ್ಥೆ ಹಲವು ಬದಲಾವಣೆಗಳನ್ನು ಕಂಡಿತ್ತು. 80 ರ ದಶಕದ ಉದಾರೀಕರಣ, 90 ರ ದಶಕದ ಜಾಗತೀಕರಣದ ಭಾಗವಾಗಿ ಈ ವ್ಯವಸ್ಥೆಯ ಹಲವು ಸಾರ್ವಜನಿಕ ಹಿತ ದಲ್ಲಿರುವ ಅಂಶ ಗಳು ಮಾಯವಾ ಗುತ್ತಾ ಬಂದಿದ್ದವು. ಪ್ರತಿಗಾಮಿ ಅಂಶ ಗಳನ್ನು ಉಳಿಸಿ ಬೆಳೆಸುತ್ತಾ ನಡೆದಿತ್ತು.

**ಎಡಪಕ್ಷಗಳ ವಿರುದ್ಧ ಅಪಪ್ರಚಾರ**

ಕಳೆದ ಕೆಲವು ವರ್ಷಗಳಿಂದ ಈ ವ್ಯವಸ್ಥೆ ನಮ್ಮ ಆರ್ಥಿಕದ 'ನಾಯಕಿ'ಯನ್ನು ಕಾಡಿಸುವ 'ಖಳನಾಯಕ' ಎಂದು ಬಿಂಬಿಸುವ ಪ್ರಯತ್ನ ನಡೆದಿದೆ. ಆದ್ದರಿಂದ ಈ 'ಖಳನಾಯಕ'ನನ್ನು ಮುಗಿಸಿಬಿಡಬೇಕು ಎಂಬ ಪ್ರಚಾರ. ಎನ್‌ಡಿಎ ಸರಕಾರ ಈ ವ್ಯವಸ್ಥೆಯನ್ನು ಕಿತ್ತುಹಾಕುವ ಮೊದಲಿನ ಪ್ರಚಾರದ ಭಾಗವಾಗಿ (ಯಶವಂತ ಸಿನ್ಹಾ ತಮ್ಮ ಬಜೆಟ್ ಭಾಷಣದಲ್ಲೂ, ತೈಲಮಂತ್ರಿ ರಾಮನಾಯಕ್ ತಮ್ಮ ಹೇಳಿಕೆಗಳಲ್ಲೂ) ಎಡ ಪಕ್ಷಗಳು ಬೆಂಬಲಿಸಿದ್ದ ಸಂಯುಕ್ತರಂಗದ ನೀತಿಯನ್ನು ಜಾರಿ ಮಾಡುತ್ತಿದ್ದೇವೆ ಅಷ್ಟೆ ಅಂತ ತಮ್ಮ ಜವಾಬ್ದಾರಿ ಯಿಂದ ನುಸುಳಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಈ ಸಂಬಂಧ ಎರಡು ವಿಷಯಗಳನ್ನು ಆ ಬಗ್ಗೆ ನೆನಪಿಸಿಕೊಳ್ಳಬೇಕು. ಮೊದಲನೆಯದಾಗಿ ಎಡಪಕ್ಷಗಳು ಸಂಯುಕ್ತರಂಗದ ಈ ನೀತಿಯನ್ನು ಬಲವಾಗಿ ವಿರೋಧಿಸಿದ್ದವು. ಎರಡನೆಯದಾಗಿ ಆಡಳಿತಾತ್ಮಕ ವ್ಯವಸ್ಥೆ ರದ್ದು ಮಾಡುವ ಮೊದಲ ವರ್ಷದಲ್ಲಿ ತೈಲ ಉತ್ಪನ್ನಗಳ ಮೇಲೆ ಆಮದು ತೆರಿಗೆ ಮತ್ತು ಎಕ್ಸೈಜ್ ತೆರಿಗೆಗಳನ್ನು

ಕೋಷ್ಟಕ-1

**ಬೆಲೆ ಹೆಚ್ಚಳ ವಿವರ**

**ಪೆಟ್ರೋಲ್**

| ನಗರ | ಹಾಲಿ ದರ | ಏರಿದ ದರ | ಏರಿಕೆ |
|---|---|---|---|
| ನವದೆಹಲಿ | 26.54 | 28.94. | 2.40 |
| ಮುಂಬೈ | 30.78 | 33.47 | 2.69 |
| ಕೋಲ್ಕತ್ತಾ | 26.99 | 29.39 | 2.40 |
| ಚೆನ್ನೈ | 28.49 | 31.05 | 2.56 |
| ಬೆಂಗಳೂರು | 30.22 | 32.83 | 2.61 |

**ಡೀಸೆಲ್**

| ನಗರ | ಹಾಲಿದರ | ಏರಿದ ದರ | ಏರಿಕೆ |
|---|---|---|---|
| ನವದೆಹಲಿ | 16.59 | 17.99 | 1.40 |
| ಮುಂಬೈ | 21.10 | 22.85 | 1.75 |
| ಕೋಲ್ಕತ್ತಾ | 16.97 | 18.39 | 1.41 |
| ಚೆನ್ನೈ | 18.10 | 19.63 | 1.53 |
| ಬೆಂಗಳೂರು | 19.80 | 21.34 | 1.54 |

ಕೋಷ್ಟಕ 2

**ಬಜೆಟ್ ತೆರಿಗೆ ಏರಿಕೆಯಿಂದ ಸರ್ಕಾರಕ್ಕೆ ಆದಾಯ**

**ಸೀಮೆ ಎಣ್ಣೆ ಮತ್ತು ಗ್ಯಾಸ್**

| | |
|---|---|
| 1. ಹೆಚ್ಚುವರಿ ಕರ | 2700 ಕೋಟಿ ರೂ. |
| 2. ಗ್ಯಾಸ್ ಮೇಲೆ ಹೆಚ್ಚುವರಿ ಎಕ್ಸೈಜ್ | 700 ಕೋಟಿ ರೂ. |
| 3. ಸೀಮೆಎಣ್ಣೆ ಮೇಲೆ ಹೆಚ್ಚುವರಿ ಎಕ್ಸೈಜ್ | 600 ಕೋಟಿ ರೂ. |
| 4. ಹೆಚ್ಚುವರಿ ಆಮದು ಕರ (0.5ಅ ಕ್ಕಿಂತ ಹೆಚ್ಚಿನದು) | 2500 ಕೋಟಿ ರೂ. ನಿಂದ 5,000 ಕೋಟಿ ರೂವರೆಗೆ |
| ಒಟ್ಟು | 6500 ಕೋಟಿ ರೂ.ನಿಂದ 9000 ಕೋಟಿ ವರೆಗೆ |



### ಪೆಟ್ರೋಲ್ - ಡೀಸಲ್ ಬೆಲೆ ಏರಿಕೆ - ಸಿಪಿಐ(ಎಂ) ಖಂಡನೆ

ಈಗಾಗಲೇ ಜನಸಾಮಾನ್ಯರು ಅದರಲ್ಲೂ ಮಧ್ಯಮ ವರ್ಗದ ಜನ ಕೇಂದ್ರ ಸರ್ಕಾರದ ನೀತಿಗಳಿಂದಾಗಿ ಸಂಕಷ್ಟದಲ್ಲಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರ ಪೆಟ್ರೋಲ್ - ಡೀಸಲ್ ಬೆಲೆಯನ್ನು ಶೇ.10ರಷ್ಟು ಏರಿಕೆ ಮಾಡಿ, ಜನತೆಯನ್ನು ಮತ್ತಷ್ಟು ಸಂಕಷ್ಟಕ್ಕೆ ಒಳಪಡಿಸಿದೆ. ಡೀಸಲ್ ಬೆಲೆ ಏರಿಕೆಯಿಂದಾಗಿ - ಸಾಗಾಣಿಕೆ ವೆಚ್ಚದ ಹೆಸರಿನಲ್ಲಿ ಎಲ್ಲಾ ಪದಾರ್ಥಗಳ ದರಗಳು ಹೆಚ್ಚಳವಾಗಲಿವೆ: ಬಸ್ ಪ್ರಯಾಣ ದರವನ್ನು ಹೆಚ್ಚಳ ಮಾಡುವ ಪ್ರಸ್ತಾಪಗಳು ಬಂದಿವೆ. ಆದ ಕಾರಣ ಕೇಂದ್ರದ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರ ಏರಿಸಿರುವ ಪೆಟ್ರೋಲ್ - ಡೀಸಲ್ ಬೆಲೆಗಳನ್ನು ಈ ಕೂಡಲೇ ವಾಪಸ್ಸುಪಡೆಯಬೇಕಾಗಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಾಜ್ಯಸಮಿತಿ ಆಗ್ರಹಿಸಿದೆ.

< ಪೆಟ್ರೋಲ್ ಬೆಲೆ ಏರಿಕೆ ವಿರೋಧಿಸಿ ಬೆಂಗಳೂರಿನಲ್ಲಿ ಸಿಪಿಐ(ಎಂ)ನಿಂದ ರಸ್ತೆ ತಡೆ

ರಣ

# ಬೆಲೆ ಏರಿಕೆ

**ಿನ್ನೆಲೆಯಲ್ಲಿ, ಪೆಟ್ರೋಲ್-ಡೀಸೆಲ್ ಲ್ ರೂ. 1.50 ರಷ್ಟು ಏರಿಸಲಾಗಿದೆ. ವರ್ಷಕ್ಕೆ 44 ಸಾವಿರ ಕೋಟಿ ವಸೂಲಿ ಲೂಟಿ ಮಾಡಲಾಗುತ್ತಿದೆ. ಈ ಬೆಲೆ ತ್ರದ ತೈಲ ಕಂಪನಿಗಳ ಮೇಲೆ ಅಧಿಕ ಏರಿದ ಅಂತರ್ರಾಷ್ಟ್ರೀಯ ಬೆಲೆಗಳನ್ನು ಕ್ಕಸ ತುಂಬಿಸುವ ಸರಕಾರಕ್ಕೆ ಇದು ಗಳು ಇನ್ನಷ್ಟು ದುಬಾರಿ ಆಗಲಿದೆ. ಬೇಕು.**

**ಶರತ್‌ಚಂದ್ರ**

ತೆಗೆದುಹಾಕುವುದು ಅಥವಾ ಗಮನಾರ್ಹವಾಗಿ ಕಡಿಮೆ ಮಾಡುವ ಯೋಜನೆ ಇತ್ತು. ಇದನ್ನು ಎನ್‌ಡಿಎ ಸರ್ಕಾರ ಮಾಡಿಲ್ಲ.

**ಪೆಟ್ರೋ-ಹಗರಣ**

ಅದರ ಬದಲಾಗಿ ತೆರಿಗೆಗಳನ್ನು ಈ ವರ್ಷದ ಬಜೆಟ್‌ನಲ್ಲಿ ಜಾಸ್ತಿ ಮಾಡಿದೆ. ಬಜೆಟ್ ಪ್ರಸ್ತಾವಗಳಲ್ಲಿ ತೆರಿಗೆ ಏರಿಕೆ ಹಲವು(ಎಕ್ಸೈಜ್ ಮತ್ತು ಆಮದು ಶುಲ್ಕ ಏರಿಕೆ) ಇತ್ಯಾದಿಗಳ ಮೂಲಕ 6500 ಕೋಟಿ ರೂ.ನಿಂದ 9000 ಕೋಟಿ ರೂ. ಹೆಚ್ಚುವರಿ ಭಾರ ಹೊರಿಸಿದೆ. (ವಿವರಗಳಿಗೆ ಕೋಷ್ಟಕ 2 ನೋಡಿ)

ಆದರೆ ನಿಜವಾದ ಹಗರಣ ಸಾರ್ವಜನಿಕ ಕ್ಷೇತ್ರದ ತೈಲ ಕಂಪನಿಗಳ ಉತ್ಪಾದನೆ ಮೇಲೆ ತೆರಿಗೆ ಇಮ್ಮಡಿ ಮಾಡಿದ್ದರಲ್ಲಿ ಇದೆ. ಈ ನಿರ್ಧಾರ ಈ ಸರ್ಕಾರದ ನಿಜವಾದ ಸ್ವರೂಪ, ಉದ್ದೇಶಗಳನ್ನು ಬಯಲಿಗೆಳೆಯುತ್ತದೆ. ONGC, Oil India ಮುಂತಾದ ಸಾರ್ವಜನಿಕ ಕ್ಷೇತ್ರದ ಕಂಪನಿಗಳ ಮೇಲಿನ ತೆರಿಗೆಯನ್ನು ಟನ್‌ಗೆ ರೂ. 9 ಸಾವಿರದಿಂದ ರೂ. 18 ಸಾವಿರಕ್ಕೆ ಏರಿಸಲಾಗಿದೆ. ಈ ತೆರಿಗೆ ಒಂದರಿಂದಲೇ 2700 ಕೋಟಿ ರೂ. ನಷ್ಟು ಸರ್ಕಾರ ತನ್ನ ಆದಾಯ ಹೆಚ್ಚಿಸಿಕೊಂಡಿದೆ. ಈ ತೆರಿಗೆ ರಿಲೈಯನ್ಸ್, ಎನ್ರೋನ್/ಬ್ರಿಟಿಷ್ ಗ್ಯಾಸ್ ಮುಂತಾದ ಖಾಸಗಿ ಕಂಪನಿಗಳು ಕೊಡಬೇಕಾಗಿಲ್ಲ ಎಂದು ಗಮನಿಸಬೇಕು. 5400 ಕೋಟಿ ರೂ. ಸಾರ್ವಜನಿಕ ತೈಲ ಕಂಪನಿಗಳಿಂದಲೇ ಸರ್ಕಾರ ಆದಾಯ ಪಡೆಯುತ್ತಿದೆ. ಈ ಆದಾಯ ಒಂದರಿಂದಲೇ ಸರ್ಕಾರ ಅಂತರ್ರಾಷ್ಟ್ರೀಯ ಬೆಲೆಯ ಏರಿಕೆಯ ಪರಿಣಾಮ ಜನಸಾಮಾನ್ಯರ ಮೇಲೆ ಬೀಳದಂತೆ ಪಡೆಯಬಹುದಾಗಿತ್ತು. ಆದರೆ ಸರ್ಕಾರಕ್ಕೆ ಇದು ಬೇಕಾಗಿಲ್ಲ. ಇಲ್ಲವೆ ಈ ತೆರಿಗೆಯನ್ನು ರದ್ದು ಮಾಡಬೇಕು.

ಅದೂ ಅಲ್ಲದೆ ಪೆಟ್ರೋಲಿಯಂ ಕ್ಷೇತ್ರವನ್ನು ಈಗ ಖಾಸಗಿ ಕ್ಷೇತ್ರಕ್ಕೆ ತೆರೆದಿದ್ದು, ಈ ತೆರಿಗೆಗೆ ಏನು ಅರ್ಥ ಇದೆ? ಹಿಂದೆ ತೈಲ ಸಾರ್ವಜನಿಕ ಕ್ಷೇತ್ರದಲ್ಲಿ ಪ್ರಮುಖವಾಗಿ ಇದ್ದಾಗ, ಈ ತೆರಿಗೆ ತೈಲ ಕೈಗಾರಿಕಾ ಬೆಳವಣಿಗೆ ಫಂಡ್‌ಗೆ ಎಂದು ಹೇಳಲಾಗಿತ್ತು. ಈ ತೆರಿಗೆಗಳ ಮೂಲಕ 1974 ರಿಂದ 2000 ದವರೆಗೆ ಸುಮಾರು 36 ಸಾವಿರ ಕೋಟಿ ರೂ. ವಸೂಲಿ ಮಾಡಲಾಗಿದ್ದು, ಕೇವಲ 904 ಕೋಟಿ ರೂ. ಮಾತ್ರ ಫಂಡ್‌ಗೆ ಕೊಡಲಾಗಿದೆ. ಉಳಿದದ್ದು ಸರ್ಕಾರದ ಬೊಕ್ಕಸಕ್ಕೆ ಸೇರಿದೆ. ಹೀಗಿರುವಾಗ ಈ ತೆರಿಗೆ ಮುಂದುವರೆಸುವುದರಲ್ಲಿ ಮತ್ತು ಇಮ್ಮಡಿಗೊಳಿಸುವುದರಲ್ಲಿ ಏನು ಅರ್ಥ ಇದೆ? ಮಾರುಕಟ್ಟೆ ಏರುಪೇರಿನ ಭಾರ ಬಳಕೆದಾರರು ಹೊರಬೇಕಾದರೆ, ಈ ರೂ. 5400 ಕೋಟಿ ರೂ. ತೈಲ ಬೆಳವಣಿಗೆ ತೆರಿಗೆಯ ಭಾರ ಯಾಕೆ ಬಳಕೆದಾರ ಹೊರಬೇಕು? ಇದು ಎರಡು ವ್ಯವಸ್ಥೆಗಳ (ಆಡಳಿತಾತ್ಮಕ ಬೆಲೆ ಮತ್ತು ಮಾರುಕಟ್ಟೆ) ಕ್ರೂರ ಮಿಶ್ರಣವಲ್ಲವೇ? ನಿಜವಾಗಿಯೂ ಸರ್ಕಾರ ತರುತ್ತಿರುವುದು ಮಾರುಕಟ್ಟೆ ವ್ಯವಸ್ಥೆ ಅಲ್ಲ. ಮಾರುಕಟ್ಟೆಯನ್ನು ಆಳುವವರ್ಗಗಳ ಹಿತಾಸಕ್ತಿಗೆ ತಿರುಚುವ ವ್ಯವಸ್ಥೆ ಅಷ್ಟೆ.

**ತೈಲ ಕ್ಷೇತ್ರಕ್ಕೆ ಸಬ್ಸಿಡಿಯೋ? ಲೂಟಿಯೋ?**

ಇದಲ್ಲದೆ ಸರ್ಕಾರ ಒಂದು ಕಡೆ ತೈಲಕ್ಷೇತ್ರದಿಂದ ಭಾರಿ ಆದಾಯ ಗಳಿಸುತ್ತಾ ಇನ್ನೊಂದು ಕಡೆ ಈ ಕ್ಷೇತ್ರಕ್ಕೆ ಭಾರಿ ಸಬ್ಸಿಡಿ ಕೊಡುತ್ತಿದ್ದೇವೆ ಎಂಬ ಹಸಿಸುಳ್ಳು ಪ್ರಚಾರ ಮಾಡುತ್ತಿದೆ. ಜತೆಗೆ ಆಗಾಗ ಸೀಮೆ ಎಣ್ಣೆ, ಗ್ಯಾಸ್, ಪೆಟ್ರೋಲ್, ಡೀಸೆಲ್‌ಗಳ ಬೆಲೆ ಹೆಚ್ಚಿಸುತ್ತಾ ನಡೆದಿದೆ. ಸರ್ಕಾರ ಈ ಎಲ್ಲಾ ಬೆಲೆ ಏರಿಕೆಗಳ ನಂತರವೂ 6500 ಕೋಟಿ ರೂ. ಸಬ್ಸಿಡಿ ಇದೆ ಎಂದು ಸರ್ಕಾರ ಹೇಳುತ್ತದೆ. ನಾವು ಈಗಾಗಲೇ ನೋಡಿದ ಹಾಗೆ (ಕೋಷ್ಟಕ 1 ರಲ್ಲಿ) ಬಜೆಟ್ ಪ್ರಸ್ತಾವಗಳ ಮೂಲಕ ಈಗಾಗಲೇ 9 ಸಾವಿರ ಕೋಟಿ ರೂ ನಷ್ಟು ಹೆಚ್ಚುವರಿ ಆದಾಯ ಹೊಂದಿದೆ. ಇನ್ನೆಲ್ಲಿಯ ಸಬ್ಸಿಡಿ?

ಸರ್ಕಾರ ಒಟ್ಟಾರೆಯಾಗಿ ತೈಲ ಕ್ಷೇತ್ರದಿಂದ ಭಾರಿ ಆದಾಯ ಗಳಿಸುತ್ತಿದ್ದು ಅದು ವರ್ಷ-ವರ್ಷದಿಂದ ಏರುತ್ತಿದೆ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅದು ಸುಮಾರು 26 ಸಾವಿರ ಕೋಟಿ ರೂ. ನಿಂದ 44 ಸಾವಿರ ಕೋಟಿ ರೂ. ಗೆ ಏರಿದೆ. ಇದಲ್ಲದೆ ತೈಲ ಕಂಪನಿಗಳಲ್ಲಿನ ಶೇರು ಮಾರಾಟಗಳಿಂದ ಕಳೆದ ಮೂರು ವರ್ಷಗಳಲ್ಲಿ ರೂ. 7,200 ಕೋಟಿ ರೂ. ಸರ್ಕಾರ ಗಳಿಸಿದೆ. ಕೋಷ್ಟಕ-3 ಕೇಂದ್ರ ಸರ್ಕಾರ ತೈಲ ಕ್ಷೇತ್ರದಿಂದ ವಸೂಲಿ ಮಾಡುತ್ತಿರುವ ಒಟ್ಟು ಆದಾಯ ಮೂರು ವರ್ಷಗಳ ವಿವರ ಕೊಡುತ್ತದೆ. (ಈ ವಿವರ ಸರ್ಕಾರವೇ ರಾಜ್ಯಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಕೊಟ್ಟಿದ್ದು) ಇವೆಲ್ಲದರ ಮುಖ್ಯಭಾಗ ಬಳಕೆದಾರರೇ ತೆರುವುದು ಎಂದು ನೆನಪಿಸಿಕೊಳ್ಳಬೇಕು.

ಕೋಷ್ಟಕ -3

**ಕೇಂದ್ರ ಸರ್ಕಾರ ತೈಲ ಕ್ಷೇತ್ರದಿಂದ ವಸೂಲಿ ಮಾಡುತ್ತಿರುವ ಆದಾಯ**

| ಆದಾಯ ಮೂಲ | ಕೋ ರೂ.ಗಳಲ್ಲಿ | ಕೋಟಿ ರೂ.ಗಳಲಿ | ಕೋಟಿ ರೂ.ಗಳಲಿ |
|---|---|---|---|
| | 97-98 | 98-99 | 99-00 |
| ಆಮದು ಶುಲ್ಕ | 10,883 | 8,340 | 11,368 |
| ತೆರಿಗೆ | 2,637 | 2,498 | 2,396 |
| (ಸಾರ್ವಜನಿಕ ತೈಲ ಕಂಪನಿಗಳಿಂದ) | | | |
| ಎಕ್ಸೈಜ್ | 8,494 | 11,628 | 19,478 |
| ರಾಯಲ್ಟಿ | 1,364 | 1,245 | 1,459 |
| ಕಂಪನಿ ತೆರಿಗೆ | 2,131 | 2,536 | 3,760 |
| ಡಿವಿಡೆಂಟ್ | 874 | 1,758 | 1,977 |
| ಡಿವಿಡೆಂಟ್ ಮೇಲೆ ತೆರಿಗೆ | 87 | 190 | 363 |
| ಇತರ (ಸೇವಾ ತೆರಿಗೆ ಇತ್ಯಾದಿ) | 6 | 54 | 112 |
| ಒಟ್ಟು | 26,476 | 28,249 | 40,913 |

# ಕಾಮದೇನುಗಳ ಕೊಂಡ(ದ)ವರು

**ಜಿ.ಎಸ್. ಮಣಿ**

ಉದಾರೀಕರಣದ ಭಾರತದಲ್ಲಿ ಕಾಮದೇನುಗಳು ಮಾರಾಟಕ್ಕಿರುವುದು ಹೊಸ ವಿಷಯವೇನಲ್ಲ. ಎನ್‌ಡಿಎ ಸರಕಾರ ಅದರಲ್ಲೂ ಅರುಣಶೌರಿ ಎಂಬ ಮಂತ್ರಿ ಈ ಸಾರ್ವಜನಿಕ ವಲಯದ ಉದ್ದಿಮೆಗಳೆಂಬ ಕಾಮಧೇನುಗಳು ಮಾರಾಟಕ್ಕಿವೆ ಎಂದು ಕೂಗಿ ಹೇಳುತ್ತಿದ್ದಾನೆ. ಹಾಗೇ ಈ ಉದ್ದಿಮೆಗಳನ್ನು ಮೂರು ಕಾಸಿಗೆ ಮಾರುವ ಕೆಲಸವನ್ನು ಈ ಸರಕಾರ ಬಿರ ಬಿರನೆ ಮಾಡುತ್ತಿವೆ. ದೇಶೀ ಬಂಡವಾಳಿಗರೇ ಬಹುತೇಕ ಈ ಉದ್ದಿಮೆಗಳನ್ನೂ ಕೊಳ್ಳುತ್ತಿದ್ದಾರೆ. ಕೊಂಡ ಮೇಲೆ ಇವರೇನು ಮಾಡುತ್ತಾರೆ (ಮಾಡುತ್ತಿದ್ದಾರೆ)?

ಬಾಲ್ಕೊ ಎಂಬ ಉದ್ದಿಮೆ ಮಾರಾಟವಾಗಿ ದೊಡ್ಡ ಗುಲ್ಲೆದ್ದಿತು. ಮಾಡರ್ನ್ ಫುಡ್ಸ್ ಎಂಬ ಉದ್ದಿಮೆ ಮಾರಾಟವಾಯಿತು. ವಿದೇಶ ಸಂಚಾರ ನಿಗಮ ನಿಯಮಿತ (ವಿಎಸ್‌ಎನ್‌ಎಲ್) ಮಾರಾಟವಾಯಿತು. ಮಾರುತಿ ಉದ್ಯೋಗ ಮಾರಾಟವಾಯಿತು. ಐಪಿಸಿಎಲ್ ಎಂಬ ಪೆಟ್ರೋಲ್ ಉದ್ದಿಮೆ ಮಾರಾಟವಾಗುತ್ತಿದೆ. ಐಪಿಸಿಎಲ್‌ನಲ್ಲಿ ಶೇ 25 ರಷ್ಟು ಪಾಲು ಕೊಳ್ಳಲು ರಿಲೈಯನ್ಸ್ ಕಂಪನಿ 14911 ಕೋಟಿ ರೂಪಾಯಿಗಳನ್ನು ಸರ್ಕಾರಕ್ಕೆ ಈಗಷ್ಟೇ ಪಾವತಿಸಿದೆ.

ಈ ಮಾರಾಟದಿಂದ ಏನಾಗಬೇಕು? ಸರ್ಕಾರದ ಪ್ರಕಾರ ಈ ಉದ್ದಿಮೆಗಳನ್ನು ಕೊಂಡವರು ಅದನ್ನು ಇನ್ನೂ ಬೆಳೆಸಬೇಕು. ಅದರಿಂದ ದೇಶದ ಕಾಮಧೇನುಗಳಾದ ಇವು ದೇಶದ ಕಾಮಧೇನುಗಳಾಗೇ ಮುಂದುವರೆಯಬೇಕು. ಅವುಗಳಲ್ಲಿನ ಹಣ / ಆಸ್ತಿ ಆಯಾ ಉದ್ದಿಮೆಗಳ ಬೆಳವಣಿಗೆಗೆ ಉಪಯೋಗವಾಗಬೇಕು. ಸರ್ಕಾರೀ ಕ್ಷೇತ್ರದಲ್ಲಿರುವವರೆಗೆ ಅವುಗಳಲ್ಲಿ ಕಾರ್ಯಕ್ಷಮತೆ ಉತ್ಪಾದಕತೆ ಕಡಿಮೆ ಇದ್ದವು. ಯಾಕೆಂದರೆ ಸರ್ಕಾರಿ ವಲಯವೆಂದರೆ ಯಾರೂ ಕೇಳುವುದಿಲ್ಲ ತಾನೆ? ಖಾಸಗೀ ವಲಯದವರು ಹೆಚ್ಚು ವ್ಯವಹಾರಿಕತೆ ಬಲ್ಲವರು. ಆದ್ದರಿಂದ ಸಾರ್ವಜನಿಕ (ಅಂದರೆ ಸರ್ಕಾರಿ) ವಲಯದಿಂದ ಖಾಸಗೀ ವಲಯಕ್ಕೆ ಬಂದ ನಂತರ ಇವುಗಳು ಉತ್ಪಾದನೆ ಉತ್ಪಾದಕತೆ ಎಲ್ಲವೂ ಹೆಚ್ಚಳವಾಗಬೇಕು

ಇನ್ನೊಂದು ನಿರೀಕ್ಷೆಯಿದೆ. ಈ ಖಾಸಗೀ ಉದ್ದಿಮೆದಾರರು ಸರ್ಕಾರಿ ಉದ್ದಿಮೆಗಳನ್ನು ಕೊಂಡ ನಂತರ ಇವುಗಳಲ್ಲಿನ ಆಸ್ತಿಗಳನ್ನು ಹೇಗೆ ಬೇಕೋ ಹಾಗೆ ಬಳಸದೇ ಒಟ್ಟಾರೆ ದೇಶದ ಒಳಿತನ್ನು ಗಮನದಲ್ಲಿಟ್ಟುಕೊಂಡು ನಿರ್ವಹಿಸಬೇಕು. ಇದನ್ನು ಈ ಉದ್ದಿಮೆಗಳ ಮಾರಾಟವನ್ನು ಸಮರ್ಥಿಸಿಕೊಳ್ಳಲೂ ಸಹ ಸರ್ಕಾರ ವಾದವನ್ನಾಗಿ ಮುಂದಿಡುತ್ತ ಬಂದಿದೆ. ಅಂದರೆ ಉದ್ದಿಮೆಗಳನ್ನು ಖಾಸಗೀಯವರಿಗೆ ಮಾರುವುದರಿಂದ ದೇಶಕ್ಕೆ ಹೆಚ್ಚು ಅನುಕೂಲವಾಗುತ್ತದೆ ಎಂದು ಅವರು ಹೇಳುತ್ತ ಬಂದಿದ್ದಾರೆ.

ಸಿಪಿಐ(ಎಂ) ಮತ್ತು ಎಡಪಕ್ಷಗಳು ಇಂತಹ ಉದಾರೀಕರಣದಿಂದ ಖಾಸಗೀಯವರು ಮಾತ್ರ ಲಾಭ ಮಾಡಿಕೊಳ್ಳುತ್ತಾರೆ. ದಶಕಗಳಿಂದ ಕಟ್ಟಿರುವ ಈ ಉದ್ದಿಮೆಗಳನ್ನು ಅಲ್ಪ ಸಮಯದಲ್ಲಿ ಈ ಲಾಭಬಡುಕರು ಹಿಂದೆ ಮುಂದೆ ನೋಡದೇ ಬಾಚಿ ಮುಕ್ಕತೊಡಗುತ್ತಾರೆ. ಈ ಉದ್ದಿಮೆಗಳು ಭಾರತದ ಆರ್ಥಿಕದ ಕಂಬಗಳು. ಆದ್ದರಿಂದ ಅವುಗಳನ್ನು ಮಾರಲೇಬಾರದು ಎಂಬುದು ಸಿಪಿಐ(ಎಂ) ಬಲವಾಗಿ ಪ್ರತಿಪಾದಿಸುತ್ತ ಬಂದಿದೆ.

**ಈಗೇನಾಗಿದೆ?**

ವಿಎಸ್‌ಎನ್‌ಎಲ್ ಎಂಬ ಬೃಹತ್ ಸಂಸ್ಥೆಯನ್ನು ಕೊಂಡ ಟಾಟಾಗಳು ಪಟ್ಟನೇ ಆ ಕಂಪನಿಯಿಂದ ಟಾಟಾ ಟೆಲಿ ಸರ್ವಿಸಸ್ ಎಂಬ ಸಂಸ್ಥೆಗೆ 1200 ಕೋಟಿ ರೂಪಾಯಿಗಳನ್ನು ವರ್ಗಾಯಿಸುವ ನಿರ್ಧಾರ ತೆಗೆದುಕೊಂಡಿದ್ದಾರೆ.

ಇದು ಸರ್ಕಾರೀ ವಲಯಗಳಲ್ಲೂ ಜನ ಹುಬ್ಬೇರಿಸುವಂತೆ ಮಾಡಿದೆ. ಮಾಹಿತಿ ತಂತ್ರಜ್ಞಾನದ ಮಂತ್ರಿ ಪ್ರಮೋದ್ ಮಹಾಜನ್ ಅವರೇ ಇದನ್ನು ನೋಡಿ ಬೊಬ್ಬೆಯಿಡುತ್ತಿದ್ದಾರೆ. 'ಟಾಟಾ' ಗಳು ಈ ವಿಎಸ್‌ಎನ್‌ಎಲ್‌ನಿಂದ ದುಡಿದು ತಮ್ಮ ಕಂಪನಿಗೆ ಹಣ ವರ್ಗಾಯಿಸಿಕೊಂಡರೆ ಸುಮ್ಮನಿರಬಹುದಿತ್ತು. ಆದರೆ ಅವರು' ಸರ್ಕಾರ (ತನ್ನ ಸ್ವಾಮ್ಯದಲ್ಲಿದ್ದಾಗ) ದುಡಿದು ಶೇಖರಿಸಿದ ಹಣವನ್ನು ತಟ್ಟನೇ ವರ್ಗಾಯಿಸುವ ಕೆಲಸಕ್ಕೆ ಇಳಿಸಿದ್ದಾರೆ. ಇದು ಖೇದದ ಸಂಗತಿ ಎಂದಿದ್ದಾರೆ.

(ವಿಎಸ್‌ಎನ್‌ಎಲ್ - ವಿದೇಶಗಳೊಂದಿಗೆ ನಮಗೆ ಬೇಕಾಗುವ ಟೆಲಿಫೋನ್ ಇತ್ಯಾದಿ ಸಂಪರ್ಕ ಕಲ್ಪಿಸುವ ಉದ್ದಿಮೆ)

ಖಾಸಗೀ ಕಂಪನಿಗಳು ಲಾಭಬಡುಕತನಕ್ಕೆ ಹೇಳಿ ಮಾಡಿಸಿದವರು. ಅವರ ಕೈಗೆ ಇಂತಹ ಸರ್ಕಾರಿ ಉದ್ದಿಮೆಗಳನ್ನು ನೀಡಿದರೆ ಏನಾಗುತ್ತದೆ ಎಂಬುದಕ್ಕೆ ಇದು ನಿದರ್ಶನ.

ಇದನ್ನು ತಿಳಿಯಲು ಈ ನಿದರ್ಶನವೇ ಬೇಕಾಗಿರಲಿಲ್ಲ. ಜಗತ್ತಿನಾದ್ಯಂತ ಬಂಡವಾಳಿಗರು ಇದೇ ರೀತಿ ವರ್ತಿಸುವುದು. ಮಾನಮರ್ಯಾದೆಗಳಿಗೆ ಅವರಲ್ಲಿ ಅವರದೇ ಆದ ವಿಶೇಷ ಅರ್ಥವಿರುತ್ತದೆ.

ಸಿಪಿಐ(ಎಂ) ಮತ್ತು ಪ್ರಗತಿಪರ ಶಕ್ತಿಗಳು ಈ ಮಾರಾಟದಿಂದ ಇಂತಹದೇ ಪರಿಣಾಮಗಳು ಆಗುತ್ತವೆ ಎಂದಾಗ ಬೂರ್ಜ್ವಾ ಮಾಧ್ಯಮಗಳು ಕುಹಕವಾಡಿದ್ದವು. ಈಗ ಈ ನಿದರ್ಶನವೇ ಇದೆ. 'ಅವರು ಕೊಂಡ ಮೇಲೆ ಅವರಿಗೆ ಬೇಕಾದಂತೆ ಅಲ್ಲಿನ ಹಣವನ್ನು ಬಳಸುತ್ತಿದ್ದಾರೆ. ಅದರಿಂದೇನು? ಎಂದು ಕೇಳುವವರಿದ್ದಾರೆ ಈ ಬೂರ್ಜ್ವಾ ಮಾಧ್ಯಮಗಳಲ್ಲಿ ಹೇಗಿದೆ ಇದು?

ಒಂದೂರಿನಲ್ಲಿ ಒಬ್ಬ ರೈತನಿದ್ದ . ಆತ ಹಸುವೊಂದನ್ನು ಸಾಕಿದ್ದ. ತುಂಬಾ ಹಾಲು ನೀಡುವ ಈ ಹಸುವಿನ ಹಾಲನ್ನು ಮಾರಿ

ಪುಟ 10 ಕ್ಕೆ

ಶ್ರೀಮಂತ ಕುಟುಂಬದಲ್ಲಿ ಹುಟ್ಟಿ ಬೆಳೆದರೂ ಚಿಕ್ಕಂದಿನಿಂದಲೇ ಅನ್ಯಾಯದ ವಿರುದ್ಧ ಅಸಹನೆಯನ್ನು ಬೆಳೆಸಿಕೊಂಡು ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದವರು. ಜತೆಯಲ್ಲೇ ಸ್ವಾತಂತ್ರ್ಯ ಬಂದರಷ್ಟೇ ಸಾಲದು ಸ್ವಾತಂತ್ರ್ಯ ಸರ್ವರ ಕಣ್ಣೀರೊರೆಸುವ ಸಾಧನವಾಗಬೇಕು ಎಂದು ನಂಬಿ ಅದಕ್ಕೆ ತಕ್ಕ ರಾಜಕೀಯ ದೃಷ್ಟಿಕೋನ ಅಳವಡಿಸಿಕೊಂಡವರು. ಕಾರ್ಮಿಕರು, ರೈತಾಪಿ ವರ್ಗದ ನಡುವೆ ಒಡನಾಡಿದರು. ಅಖಿಲ ಭಾರತ ಕಿಸಾನ್ ಸಭಾ ಸಹಿತ ಹತ್ತು ಹಲವು ಸಂಘಟನೆಗಳ ಜನಾನುರಾಗಿ ನೇತಾರರಾಗಿ ಒಂದೊಂದೇ ಮೆಟ್ಟಿಲೇರುತ್ತಾ ಭಾರತದ ಪ್ರಮುಖ ಎಡಪಕ್ಷವಾದ ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ತಲುಪಿದವರು. ಹಲವಾರು ನಿರ್ಣಾಯಕ ಸಂದರ್ಭಗಳಲ್ಲಿ ದೇಶದ ರಾಜಕೀಯ ಮುಖಂಡರಿಗೆ ಮಾರ್ಗದರ್ಶನ ಕೊಡುತ್ತಾ ಬಂದಿರುವ ಮುತ್ಸದ್ದಿ. ಪಿತ್ರಾರ್ಜಿತ ಆಸ್ತಿ ಮಾರಿ ಬಂದ 30 ಲಕ್ಷ ರೂಪಾಯಿಗಳನ್ನು ಪಕ್ಷಕ್ಕೆ ದಾನ ಮಾಡಿದ ತ್ಯಾಗಕ್ಕೆ ಹೊಸ ಭಾಷ್ಯ ಬರೆದ ಈ ಅಪರೂಪದ ರಾಜಕಾರಣಿ ಹರಕಿಷನ್ ಸಿಂಗ್ ಸುರ್ಜಿತ್. ಸಿಪಿಐ(ಎಂ) ಪಕ್ಷದ ಪಾಲಿಟ್‌ಬ್ಯೂರೋ ಹಾಗೂ ಕೇಂದ್ರ ಸಮಿತಿ ಸಭೆಯಲ್ಲಿ ಪಾಲ್ಗೊಳ್ಳಲು ಉದ್ಯಾನ ನಗರಿಗೆ ಬಂದಿದ್ದ ಕೆಂಬಾವುಟದ ಧುರೀಣನನ್ನು 'ಐಕ್ಯರಂಗ'ಕ್ಕಾಗಿ ವಿಶ್ವ ಕುಂದಾಪುರ ಮಾತನಾಡಿಸಿದಾಗ....

# ಭಾರತ - ಪಾಕ್ ಯುದ್ಧ ವಿವೇಕದ್ದಲ್ಲ

## ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಜತೆ 'ಐಕ್ಯರಂಗ' ವಿಶೇಷ ಸಂದರ್ಶನ

***● ಸಿಪಿಐ(ಎಂ) ಕೇಂದ್ರ ಸಮಿತಿ ಸಭೆಯನ್ನು ಬೆಂಗಳೂರಿನಲ್ಲಿ ನಡೆಸಲು ವಿಶೇಷ ಕಾರಣವೇನು?***

ಇಲ್ಲಿನ ಹವೆ ಒಂದು ಪ್ರಮುಖ ಕಾರಣ (ನಗು) ಬೇರೆ ಬೇರೆ ಪ್ರದೇಶಗಳಲ್ಲಿ ಇಂಥ ಸಭೆ ನಡೆಸುವುದರಿಂದ ಆಯಾ ರಾಜ್ಯಗಳ ಜನತೆಗೆ ಪಕ್ಷದ ಪರಿಚಯವಾಗುತ್ತದೆ. ಆಯಾ ರಾಜ್ಯಗಳ ಪಕ್ಷದ ನಾಯಕರು, ಕಾರ್ಯಕರ್ತರ ಜತೆ ವಿಚಾರ ವಿನಿಮಯಕ್ಕೆ ಅವಕಾಶ ಸಿಗುತ್ತದೆ. ಪಕ್ಷದ 17ನೇ ಮಹಾಧಿವೇಶನದ ನಂತರದ ಕೇಂದ್ರ ಸಮಿತಿಯ ಪ್ರಥಮ ಸಭೆಯನ್ನು ಕರ್ನಾಟಕದಲ್ಲಿ ನಡೆಸುತ್ತಿರುವ ಹಿನ್ನೆಲೆಯೂ ಇದೇ ಆಗಿದೆ.

***● ಭಾರತ-ಪಾಕಿಸ್ತಾನ ನಡುವೆ ಯುದ್ಧದ ಮಾತು ಕೇಳಿ ಬರುತ್ತಿರುವ ಬಗ್ಗೆ ನಿಮ್ಮ ಅಭಿಪ್ರಾಯವೇನು?***

ಯುದ್ಧ ನಡೆಯಬಾರದು ಎನ್ನುವುದೇ ನಮ್ಮ ಪಕ್ಷದ ದೃಢ ಅಭಿಪ್ರಾಯ. ಸಮರ ಯಾವ ಕಾರಣಕ್ಕೂ ಪರಿಹಾರ ಆಗಲಾರದು. ಯುದ್ಧದಿಂದ ಆಗುವ ಪರಿಣಾಮಗಳೇನು ಎನ್ನುವುದು ನಮ್ಮೆಲ್ಲರ ಕಣ್ಣ ಮುಂದೆಯೇ ಇದೆ. ಅದಕ್ಕೆ ಕುರುಡಾಗುವುದು ತರವಲ್ಲ.

***● ಪ್ರಧಾನಿ ಎ.ಬಿ.ವಾಜಪೇಯಿ ಸಮರಕ್ಕೆ ಇದು ಸಕಾಲ ಎಂದಿದ್ದಾರಲ್ಲ....***

ಯುದ್ಧವೆಂದರೆ ಹುಡುಗಾಟವಲ್ಲ. ವಾಜಪೇಯಿ ಗಳಿಗೆಗೊಂದು ಹೇಳಿಕೆ ನೀಡುತ್ತಾರೆ. ಸಮರದ 'ಕಾರ್ಮೋಡ' ಕವಿದಿಲ್ಲ ಎಂದು ಒಂದು ಸಂಜೆ ಹೇಳುತ್ತಾರೆ. ಮರುದಿನ ಬೆಳಿಗ್ಗೆ ಯುದ್ಧಕ್ಕೆ ಸಿದ್ಧ ಎನ್ನುತ್ತಾರೆ. ದೇಶದ ಪ್ರಧಾನಿಯೊಬ್ಬರು ನಡೆದುಕೊಳ್ಳುವ ರೀತಿಯಲ್ಲ ಇದು.

***● ಎರಡೂ ದೇಶಗಳು ಅಣ್ವಸ್ತ್ರ ಸಾಮರ್ಥ್ಯ ಪಡೆದಿರುವ ಹಿನ್ನೆಲೆಯಲ್ಲಿ ಭಾರತ-ಪಾಕ್ ಸಮರ ನಡೆದರೆ ಏನಾದೀತು?***

ಅಣ್ವಸ್ತ್ರದ ಆಘಾತಕಾರಿ ವಿನಾಶಕ್ಕೆ ಜಗತ್ತು ಈಗಾಗಲೇ ಸಾಕ್ಷಿಯಾಗಿದೆ. ಆದ್ದರಿಂದ ಅಣ್ವಸ್ತ್ರ ಸಮರ್ಥ ಭಾರತ-ಪಾಕ್ ಯುದ್ಧಕ್ಕೆ ಎಳಸಲೇ ಬಾರದು. ಉಭಯ ದೇಶಗಳ ನಡುವೆ ಸೀಮಿತ ಅಣ್ವಸ್ತ್ರ ಯುದ್ಧ ನಡೆದರೂ 30 ಲಕ್ಷ ಜನರು ಸಾಯುತ್ತಾರೆ ಎಂಬ ತಜ್ಞರ ಎಚ್ಚರಿಕೆಯನ್ನು ಕಡೆಗಣಿಸಬಾರದು. ಅದು ವಿವೇಕವಲ್ಲ. ಅಣು ಯುದ್ಧ ನಡೆದರೆ ದೇಶದ ಉತ್ತರ ಭಾಗವಂತೂ ಭಾರಿ ನಷ್ಟ ಅನುಭವಿಸುವುದು ನಿಶ್ಚಿತ.

***● ಮತ್ತೇಕೆ ಯುದ್ಧದ ಮಾತು?***

ಭಾರತದ ಮಟ್ಟಿಗೆ ಹೇಳುವುದಾದರೆ, ಬಹುಶಃ ಗುಜರಾತ್ ನರಮೇಧದ ಹಿನ್ನೆಲೆಯಲ್ಲಿ ಭಾರತ ಅಂತಾರಾಷ್ಟ್ರೀಯ ಸಮುದಾಯದ ಆಕ್ರೋಶಕ್ಕೆ ಒಳಗಾಗಿರುವುದರಿಂದ ಇಲ್ಲಿನ ಆಡಳಿತಗಾರರು ಗಮನವನ್ನು ಬೇರೆಡೆ ಸೆಳೆಯಲು ಯುದ್ಧ ಸನ್ನಿಯ ಹುಯಿಲೆಬ್ಬಿಸಿರುವುದು ಸ್ಪಷ್ಟ. ಆದರೆ ಗುಜರಾತಿನ ಅನಾಗರೀಕ, ಅಮಾನವೀಯ ಕೃತ್ಯಗಳನ್ನು ಮರೆಸಲು ನಾವು ಅವಕಾಶ ಕೊಡುವುದಿಲ್ಲ. ಈ ಘೋರ ಕೃತ್ಯಗಳ ಪಾತಕಿಗಳಿಗೆ ಶಿಕ್ಷೆ ಆಗಲೇಬೇಕು. ಜನರಿಗೆ ಮುಖ ತೋರಿಸಲು ಯಾವುದೇ ಜನಪರವಾದ ಕಾರ್ಯಕ್ರಮಗಳು - ಅವುಗಳ ಅನುಷ್ಠಾನ ಇಲ್ಲದಿರುವಾಗ ಅಂದಿನ ಆಳುವ ಜನಗಳು ಯುದ್ಧ ಸನ್ನಿಯನ್ನು ಸೃಷ್ಟಿಸಿದ ಹಲವು ದೃಷ್ಟಾಂತಗಳು ಇತಿಹಾಸದಲ್ಲಿವೆ.

***● ಹಾಗಾದರೆ ಕಾಶ್ಮೀರ ಸಮಸ್ಯೆಗೆ ಪರಿಹಾರ ಏನು?***

ಮಾತುಕತೆ-ಸಂಧಾನವೇ ಸರಿಯಾದ ಮಾರ್ಗ. ಎರಡೂ ಕಡೆಯವರು ಕುಳಿತು ಪರಸ್ಪರ ಸೌಹಾರ್ದದಿಂದ ಸಮಸ್ಯೆಯನ್ನು ಪರಿಹರಿಸಿ ಕೊಳ್ಳಬೇಕು. ಅಮೇರಿಕಕ್ಕೆ ಪಾಕಿಸ್ತಾನ ಯಾವ ಪ್ರಮಾಣದಲ್ಲಿ ಶರಣಾಗಿದೆಯೋ ಎನ್‌ಡಿಎ ಸರಕಾರದ ಅಡಿಯಲ್ಲಿ ಭಾರತವೂ ಅದೇ ಪ್ರಮಾಣ ದಲ್ಲಿ ಸಾಮ್ರಾಜ್ಯಶಾಹಿಗೆ ಅಡಿಯಾಳಾಗಿದೆ. ಅಮೇರಿಕದ ಜತೆಗೆ ಇರುವ ಈ 'ಬಾಂಧವ್ಯ'ವನ್ನು ಬಳಸಿಕೊಂಡು ಭಯೋತ್ಪಾದಕರಿಗೆ ಬೆಂಬಲ ನೀಡದಂತೆ ಪಾಕಿಸ್ತಾನದ



ಮೇಲೆ ಅಮೇರಿಕದ ಮೂಲಕ ಒತ್ತಡ ಹೇರಲು ನಮ್ಮವರು ಪ್ರಯತ್ನಿಸಬೇಕು. ಅಮೇರಿಕಾಕ್ಕೆ ಕೂಡ ಎರಡೂ ದೇಶಗಳ ಜತೆ ಸಂಬಂಧ ಬೇಕು.

**ಪಾಕ್‌ನಂತೆ - ಭಾರತವೂ ಅಮೇರಿಕಾಕ್ಕೆ ಶರಣು.**

***● ಹಿಂದೂಗಳ ಮೇಲೆ ದಬ್ಬಾಳಿಕೆ ನಡೆದರೆ ಸುಮ್ಮನಿರುವ ಕಮ್ಯುನಿಸ್ಟರು ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯವನ್ನು ಮಾತ್ರ ವಿರೋಧಿಸುತ್ತಾರೆ ಎಂಬ ಆರೋಪಗಳಿವೆ?***

ಮೊದಲನೆಯದಾಗಿ, ಇದೊಂದು ಬೇಜವಾಬ್ದಾರಿ ಆರೋಪ. ಜಮ್ಮು- ಕಾಶ್ಮೀರದ ಉದಾಹರಣೆಯನ್ನೇ ತೆಗೆದುಕೊಳ್ಳೋಣ, ಅಲ್ಲಿನ ಅಲ್ಪ ಸಂಖ್ಯಾತರನ್ನು ರಕ್ಷಿಸಲು ನಮ್ಮ ಪಕ್ಷ ಸಿಪಿಐ(ಎಂ) ಹಾಗೂ ಇತರ ಎಡಶಕ್ತಿಗಳು ಸತತವಾಗಿ ಶ್ರಮಿಸುತ್ತಿವೆ. ಜಮ್ಮು-ಕಾಶ್ಮೀರ ವಿಧಾನ ಸಭೆಯ ಏಕೈಕ ಸಿಪಿಐ(ಎಂ) ಶಾಸಕ ಯೂಸುಫ್ ತರಿಗಾಮಿ ಈ ಪ್ರಯತ್ನಗಳ ಮುಂಚೂಣಿ ಯಲ್ಲಿದ್ದಾರೆ. ಅವರನ್ನು ಕೊಲ್ಲಲು ಭಯೋತ್ಪಾದಕರು ಹಲವು ಬಾರಿ ಪ್ರಯತ್ನಿಸಿದ್ದಾರೆ. ಇಷ್ಟು ಮಾತ್ರವಲ್ಲದೇ ಮುಸ್ಲಿಂ ಮೂಲಭೂತವಾದಿ ಶಕ್ತಿಗಳು ಹಾಗೂ ಭಯೋತ್ಪಾದಕರ ಬೆದರಿಕೆಯನ್ನು ನೂರಾರು ಕಮ್ಯುನಿಸ್ಟ್ ಕಾರ್ಯಕರ್ತರು, ಮುಖಂಡರು ಕಾಶ್ಮೀರ ಕಣಿವೆಯಲ್ಲಿ ಎದುರಿಸುತ್ತಿದ್ದಾರೆ. ಜಮ್ಮು-ಕಾಶ್ಮೀರದಲ್ಲಿ ಭಯೋತ್ಪಾದನೆ ವಿರೋಧಿ ಸಂಗ್ರಾಮದಲ್ಲಿ ಅನೇಕ ಕಮ್ಯುನಿಸ್ಟರು ಪ್ರಾಣ ತೆತ್ತಿದ್ದಾರೆ.

ಪಂಜಾಬ್, ಅಸ್ಸಾಂ ಮೊದಲಾದ ರಾಜ್ಯಗಳಲ್ಲಿನ ಭಯೋತ್ಪಾದನೆ, ಪ್ರತ್ಯೇಕವಾದದ ವಿರುದ್ಧ ಕಮ್ಯುನಿಸ್ಟರು ಅಪಾರ ತ್ಯಾಗ-ಬಲಿದಾನ ಮಾಡಿದ್ದನ್ನು ನಾವು ಮರೆಯಬಾರದು. ಒಟ್ಟಿನಲ್ಲಿ ತಾವು ಮಾತ್ರ ದೇಶಪ್ರೇಮಿಗಳು. ಕಮ್ಯುನಿಸ್ಟರು ಅಲ್ಲ ಎನ್ನುವುದು ಸರಿಯಲ್ಲ.

ಸಂಘ ಪರಿವಾರ ತನ್ನ ಪ್ರಚಾರ ಸಾಧನಗಳ ಮೂಲಕ ನಿರಂತರವಾಗಿ ಕಮ್ಯುನಿಸ್ಟರ ವಿರುದ್ಧ ಪ್ರಚಾರ ನಡೆಸುತ್ತಲೇ ಇರುತ್ತದೆ. ಆದರೆ ಯಾರು ಸರಿ, ಯಾರು ತಪ್ಪು-ಯಾರು ಜನಪರರು-ಯಾರು ಜನವಿರೋಧಿಗಳು ಎನ್ನುವುದನ್ನು ಜನರು ನಿರ್ಧರಿಸುತ್ತಾರೆ.

***● ಸಂವಿಧಾನದ 356ನೇ ವಿಧಿಯನ್ನು, ಅಂದರೆ ಚುನಾಯಿತ ಸರಕಾರ ವಜಾ ಮಾಡಿ ರಾಷ್ಟ್ರಪತಿ ಆಡಳಿತ ಹೇರುವುದನ್ನು ಮಾರ್ಕ್ಸ್‌ವಾದಿಗಳು ವಿರೋಧಿಸುತ್ತಲೇ ಬಂದಿದ್ದಾರೆ. ಆದರೆ, ಗುಜರಾತ್ ಸರಕಾರ ವಜಾ ಮಾಡಿ ಅಲ್ಲಿ ಕೇಂದ್ರಾಡಳಿತ ಹೇರಬೇಕೆಂದು ಪಕ್ಷ ಈಗ ಒತ್ತಾಯಿಸುತ್ತಿದೆ. ಇದನ್ನು ಹೇಗೆ ಸಮರ್ಥಿಸಿಕೊಳ್ಳುತ್ತೀರಿ?***

ಈ ವಿಚಾರವಾಗಿ ನಮ್ಮ ನಿಲುವಿನಲ್ಲಿ ಬದಲಾವಣೆ ಇಲ್ಲ. ಆದರೆ ಗುಜರಾತ್ ಸ್ಥಿತಿ ತೀರಾ ಭಿನ್ನ. ಅಲ್ಲಿ ಸಂವಿಧಾನಾತ್ಮಕ ರೀತಿಯಲ್ಲಿ ಸರಕಾರ ನಡೆಯುತ್ತಿಲ್ಲ. ಸರಕಾರದ ಕೃಪಾಕಟಾಕ್ಷದಿಂದಲೇ ಅಲ್ಪಸಂಖ್ಯಾತರ ಮಾರಣ ಹೋಮ ನಡೆಯುತ್ತಿದೆ. ಮೂರು ತಿಂಗಳಾದರೂ ಪರಿಸ್ಥಿತಿಯನ್ನು ನಿಯಂತ್ರಿಸಲಾಗದ ಸರಕಾರವನ್ನು ವಜಾ ಮಾಡಲು ಒತ್ತಾಯಿಸುವುದರಲ್ಲಿ ತಪ್ಪೇನಿದೆ ಹೇಳಿ. ಆರೆಸ್ಸೆಸ್ ಮತ್ತು ವಾಜಪೇಯಿ ನೇತೃತ್ವದ ಸರಕಾರ ನರೇಂದ್ರ ಮೋದಿಯವರನ್ನು ರಕ್ಷಿಸುತ್ತಿದೆ. ಬಾಬ್ರಿ ಮಸೀದಿ ನಾಶದ ಬೆನ್ನಲ್ಲಿ ಕೋಮುಗಲಭೆ ಭುಗಿಲೆದ್ದಾಗಲೂ ನಾಲ್ಕು ರಾಜ್ಯಗಳಲ್ಲಿ ರಾಷ್ಟ್ರಪತಿ ಆಡಳಿತ ಹೇರುವುದಕ್ಕೆ ನಾವು ಬೆಂಬಲ ನೀಡಿದ್ದೆವು.

ಇನ್ನೂ ಒಂದು ಪರಿಸ್ಥಿತಿಯನ್ನು ಕಲ್ಪಿಸಿಕೊಳ್ಳಿ. ಯಾವುದೇ ಒಂದು ರಾಜ್ಯ ತಾನು ಭಾರತ ಒಕ್ಕೂಟ ದಿಂದ ಹೊರಹೋಗುತ್ತೇನೆಂದು ಹೇಳಿದಾಗ ಏನು ಮಾಡಬೇಕು?. ದೇಶದ ಏಕತೆ ರಕ್ಷಣೆ ಪ್ರಶ್ನೆ ಬಂದಾಗ ಇಂಥ ಕ್ರಮ ಅನಿವಾರ್ಯವಾಗುತ್ತದೆ.

***● ರೈತರ ಆತ್ಮಹತ್ಯೆಗೂ ಆರ್ಥಿಕ ಸಮಸ್ಯೆಗೂ ಸಂಬಂಧ ಇಲ್ಲ ಎಂಬ ಕರ್ನಾಟಕದ ವೀರೇಶ್ ಸಮಿತಿಯ ವರದಿ ಬಗ್ಗೆ ನಿಮ್ಮ ಟಿಪ್ಪಣಿ.***

ಆ ವರದಿ ನಾನು ಓದಿಲ್ಲ ಆದರೆ ಸಾಮ್ರಾಜ್ಯಶಾಹಿ ಶಕ್ತಿಗಳ ಹಿತಕಾಯುವ ಜಾಗತೀಕರಣದ ಭರಾಟೆಯಲ್ಲಿ ರೈತರೂ ಸೇರಿದಂತೆ ಎಲ್ಲ ಜನ ವಿಭಾಗಗಳು ಸಂಕಷ್ಟದ ಸುಳಿಗೆ ಸಿಲುಕಿದ್ದಾರೆ. ಕರ್ನಾಟಕ ಮಾತ್ರವೇ ಅಲ್ಲದೇ ದೇಶದ ಹಲವು ಭಾಗಗಳಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಕ್ಕೂ ಹಣಕಾಸಿನ ದುಸ್ಥಿತಿಗೂ ಸಂಬಂಧ ಇದ್ದೇ ಇದೆ. ಹೀಗಾಗಿ, ಕರ್ನಾಟಕದ ತರುಜ್ಞರ ಸಮಿತಿ ತನ್ನ ವರದಿಯಲ್ಲಿ ಈ ಬಗ್ಗೆ ವ್ಯಕ್ತಪಡಿಸಿರುವ ಅಭಿಪ್ರಾಯ ಸರ್ವಥಾ ಸ್ವೀಕಾರಾರ್ಹವಲ್ಲ. ಹಾಗಿದ್ದಲ್ಲಿ ಅದು ಅಪ್ಪಟ ಅವೈಜ್ಞಾನಿಕ ಚಿಂತನೆಯ ಫಲವಾಗಿದೆ. ರೈತರ ಅವಹೇಳನ ಸಲ್ಲ.

***● ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ಪರಿಹಾರ ನೀಡಿದರೆ ಅದು ಆತ್ಮಹತ್ಯೆಗೆ ಪ್ರೋತ್ಸಾಹದಾಯಕವಾಗುತ್ತದೆ ಎಂಬ ನಿಲುವು ಕೆಲವು ವಲಯಗಳಲ್ಲಿವೆ. ಇದಕ್ಕೇನೆನ್ನುವಿರಿ?***

ಇದೊಂದು ಹಾಸ್ಯಾಸ್ಪದ, ಬೇಜವಾಬ್ದಾರಿ ನಿಲುವು ಎಂದಷ್ಟೇ ಹೇಳಬಹುದು. ದುಡಿಯುವ ಜನರು, ಅನ್ನದಾತರ ಬಗ್ಗೆ ಗೌರವ ಇಲ್ಲದವರು ಈ ರೀತಿಯ ಅಭಿಪ್ರಾಯ ವ್ಯಕ್ತಪಡಿಸಬಹುದು. ಈ ಪರಿಯಾಗಿ ರೈತರನ್ನು ಅಲಕ್ಷಿಸುವುದು, ಅವಹೇಳನ ಮಾಡುವುದು ಅಕ್ಷಮ್ಯ ಅಪರಾಧ.

ದೇಶದ ಕೃಷಿ ವ್ಯವಸ್ಥೆಯ ಬೆನ್ನೆಲುಬಾದ ರೈತರು ಹಲವು ಬಗೆಯ ಸಕಷ್ಟಗಳಿಗೆ ಸಿಲುಕಿದ್ದಾರೆ. ಅವರಲ್ಲಿ ಅತೃಪ್ತಿ ತಾಂಡವವಾಡುತ್ತಿದೆ. ಇದೊಂದು ಬೃಹತ್ ಆಂದೋಲನವಾಗಿ ರೂಪುಗೊಳ್ಳುವ ದಿನಗಳು ದೂರವಿಲ್ಲ.

***● ಜಾಗತೀಕರಣ, ಉದಾರೀಕರಣದ ವಿರುದ್ಧ ನಿರೀಕ್ಷಿತ ಮಟ್ಟದಲ್ಲಿ ಚಳುವಳಿ ರೂಪುಗೊಂಡಿಲ್ಲ. ಯಾಕೆ?***


ಇಲ್ಲ, ಈ ಪ್ರಶ್ನೆಯೇ ತಪ್ಪು. ಜಗತ್ತಿನ ನಾನಾ ಭಾಗಗಳಲ್ಲಿ, ಮುಂದುವರಿದ ದೇಶಗಳಲ್ಲಿ ಕೂಡ ಕೈಗಾರಿಕೆಗಳ ಮುಚ್ಚುವಿಕೆ, ನಿರುದ್ಯೋಗ ಮೊದಲಾದ ಸಮಸ್ಯೆಗಳ ವಿರುದ್ಧ ವ್ಯಾಪಕ ಜನಾಂದೋಲನ ನಡೆಯುತ್ತಿದೆ. ಜರ್ಮನಿ, ಜಪಾನ್, ದಕ್ಷಿಣ ಕೋರಿಯಾ ಮೊದಲಾದ ದೇಶಗಳು ಇದಕ್ಕೆ ಕೆಲ ದೃಷ್ಟಾಂತಗಳು. ಭಾರತದ ಕೂಡ ಹೋರಾಟ ಗರಿಗಟ್ಟುತ್ತಿದೆ. ಏಪ್ರಿಲ್ 16 ರ ಸಾರ್ವಜನಿಕ ರಂಗದ ಉದ್ದಿಮೆಗಳ ಅಧಿಕಾರಗಳ ಸಹಿತ ಲಕ್ಷಾಂತರ ನೌಕರರು, ಕಾರ್ಮಿಕರು ನಡೆಸಿದ ಮುಷ್ಕರ ಭಾರತದಲ್ಲಿ ಚಳುವಳಿ ಬಲಗೊಳ್ಳುತ್ತಿರುವುದರ ಸೂಚನೆಯಾಗಿದೆ. ಅಲ್ಲದೆ, ಆಳುವ ವರ್ಗಗಳನ್ನು ಪ್ರತಿನಿಧಿಸುವ ಪಕ್ಷಗಳ ಕಾರ್ಮಿಕ ಸಂಘಟನೆಗಳು ಕೂಡ, ಉದಾಹರಣೆಗೆ ಬಿಎಂಎಸ್, ಎಡಪಂಥೀಯರ ಜತೆ ಕೈ ಜೋಡಿಸುತ್ತಿರುವುದು ಗಮನಾರ್ಹ.

***● ಪೀಪಲ್ಸ್ ಫ್ರಂಟ ಪರಿಸ್ಥಿತಿ ಹೇಗಿದೆ?***

ಕಾಂಗ್ರೆಸ್ ಹಾಗೂ ಬಿಜೆಪಿಗೆ ಪರ್ಯಾಯವಾಗಿ ಜನತಾರಂಗವನ್ನು ಬಲಪಡಿಸಲು ಯೋಜಿಸಲಾಗುತ್ತಿದೆ. ರಂಗ ಬಲಿಷ್ಟವಾಗಿಲ್ಲದಿರಬಹುದು. ಆದರೆ, ಜನಪರವಾದ ರಾಜಕೀಯ ಕಾರ್ಯಕ್ರಮಗಳನ್ನು ಮುಂದಿಟ್ಟುಕೊಂಡು ಅದನ್ನು ಎಲ್ಲ ಕಡೆ ಬೆಳೆಸಲು ಯೋಜಿಸಲಾಗಿದೆ. ಮಾಜಿ ಪ್ರಧಾನಿ ದೇವೇಗೌಡರು ಈ ವಿಚಾರದಲ್ಲಿ ಸಕಾರಾತ್ಮಕವಾಗಿ ಪ್ರತಿಕ್ರಿಯಿಸುತ್ತಿದ್ದು ಸಕ್ರಿಯವಾಗಿದ್ದಾರೆ.

ತಾವು ಕಮ್ಯುನಿಸ್ಟ್ ಸಿದ್ಧಾಂತಕ್ಕೆ ಆಕರ್ಷಣೆಗೊಂಡು ರೈತ-ಕಾರ್ಮಿಕರ ಏಳಿಗೆಗಾಗಿ, ಸಮಸ್ತ ಜನರು ಸುಖವಾಗಿರಲು ಸಾಧ್ಯ ಮಾಡುವ ಸಮಾಜವಾದಿ ಸಮಾಜ ನಿರ್ಮಾಣಕ್ಕಾಗಿ ಮಾಡಿದ ನಿರ್ಧಾರ ಹಾಗೂ ಕೊನೆಯವರೆಗೂ ಹಾಗೆಯೇ ಶ್ರಮಿಸಿದವರು ಸಿ.ನಂಜುಂಡಪ್ಪನವರು. ಅವರು ಕಮ್ಯುನಿಸ್ಟರಾದ ಬಗ್ಗೆ 1990 ರ ಐಕ್ಯರಂಗ ಲೇಖನವೊಂದು ಪ್ರಕಟಗೊಂಡಿತು. ಅದನ್ನು ಅವರ ನೆನಪಿಗಾಗಿ ಮತ್ತೆ ಪ್ರಕಟಿಸಲಾಗಿದೆ.

# ಏನು ಜಾದೂ ಮಾಡಿದ್ದೀರಯ್ಯಾ ನೀವು ಕಮ್ಯುನಿಸ್ಟರು



ನಾನು ಕಮ್ಯುನಿಸ್ಟ್ ಪಕ್ಷವನ್ನು ಸೇರಿದ ಸಂದರ್ಭದ ಕುರಿತು 'ಐಕ್ಯರಂಗ'ದಿಂದ ಒತ್ತಾಯ ಬರುತ್ತಿದೆ. ಕಮ್ಯುನಿಸ್ಟ್ ಪಕ್ಷದ ಸದಸ್ಯನಾಗಬೇಕೆಂದು ಅಭಿಪ್ರಾಯವನ್ನು ನನ್ನ ತಲೆಗೆ ಹಾಕಿದವರು ಕ್ಯಾಸಂಬಳ್ಳಿಯ ನಾರಾಯಣ, ಅದೂ 1958ರಲ್ಲಿ. ಆದರೆ ನನ್ನನ್ನು ಪಕ್ಷದ ಸದಸ್ಯನನ್ನಾಗಿ ಸೇರಿಸಿದವರು ಕೃಷ್ಣಸ್ವಾಮಿ. 1965ರಲ್ಲಿ, ಹೀಗಾಗಿ ನಾನು ಒಂದೂವರೆ ದಶಕದ ಬೆಳವಣಿಗೆಗಳನ್ನು ಪ್ರಸ್ತಾಪಿಸಬೇಕಾಗುತ್ತದೆ.

ನನ್ನ ಮಾಧ್ಯಮಿಕ ಶಿಕ್ಷಣ ಮುಗಿಯುವ ವೇಳೆಗೆ ನಾನು ರಾಮಾಯಣ, ಮಹಾಭಾರತ ಮತ್ತು ಕೆಲವು ಪುರಾಣಗಳನ್ನು ಓದಿದ್ದೆ. ಆಗ ನನಗೆ ಓದುವುದಕ್ಕೆ ಒಳ್ಳೆಯ ಪ್ರೋತ್ಸಾಹ. ಉತ್ತೇಜನ ಸಿಕ್ಕುತ್ತಿದ್ದುವು. ಮುತ್ತೂರಿನಲ್ಲಿದ್ದ ವಯಸ್ಕರ ಶಿಕ್ಷಣ ಶಾಲೆಯ ಪುಸ್ತಕ ಭಂಡಾರದಿಂದಲೂ ಪುಸ್ತಕಗಳನ್ನು ತೆಗೆದುಕೊಂಡು ಓದುತ್ತಿದ್ದೆ. ಈ ಓದಿನ ಪರಿಣಾಮವಾಗಿ ಮಾಧ್ಯಮಿಕ ಶಿಕ್ಷಣ ಮುಗಿಯುವ ವೇಳೆಗೆ ನನಗೆ ದೇವರು, ಧರ್ಮಗಳಲ್ಲಿ ನಂಬಿಕೆ ಹೊರಟುಹೋಯಿತು. ಆ ತರುವಾಯದ ವರ್ಷಗಳಲ್ಲಿ ಮನುಷ್ಯ ತನ್ನ ಅನುಕೂಲಕ್ಕಾಗಿ ದೇವರು, ಸ್ವರ್ಗ, ನರಕಗಳನ್ನು ಸೃಷ್ಟಿಸಿಕೊಂಡ ಎಂಬ ಭಾವನೆ ಬಂದಿತು.

ನನ್ನ ಮಾಧ್ಯಮಿಕ ಶಿಕ್ಷಣದ ಕಾಲದಲ್ಲಿ ತೆಲಂಗಾಣಾ ಹೋರಾಟದ ವಾರ್ತೆಗಳು ಹಿರಿಯರ ಸಂಭಾಷಣೆಗಳಿಂದ ಕಿವಿಗೆ ಬೀಳುತ್ತಿದ್ದುದು. ಕೆ.ಜಿ.ಎಫ್ ಚಿನ್ನದ ಗಣಿ ಕಾರ್ಮಿಕರ ಚಳುವಳಿಯ ಸುದ್ದಿಗಳೂ ಕಿವಿಗೆ ಬೀಳುತ್ತಿದ್ದುವು.

ಆಗ ಲೋಯರ್ ಸೆಕೆಂಡರಿ ಪರೀಕ್ಷೆ ರಾಜ್ಯಮಟ್ಟದ ಪಬ್ಲಿಕ್ ಪರೀಕ್ಷೆಯಾಗಿರುತ್ತಿದ್ದಿತು. ನಾನು 1952ರಲ್ಲಿ ಮಾಲೂರು ಮಾಧ್ಯಮಿಕ ಶಾಲೆಯಿಂದ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದು ಪಾಸಾದೆ. ಕೆಲವು ದಶಕಗಳಿಂದ ಆ ಶಾಲೆ ಅಸ್ತಿತ್ವದಲ್ಲಿದ್ದಿತಾದರೂ ಆ ಶಾಲೆಗೆ ರ್‍ಯಾಂಕ್ ಸಿಕ್ಕಿದ್ದು ಅದೇ ಮೊದಲ ಬಾರಿ. ಹೀಗಾಗಿ ನನ್ನ ಹೆಸರು ಆಗ ಅಲ್ಲಿ ಮಾತ್ರವಲ್ಲದೇ ಸುತ್ತಮುತ್ತಲಿನ ಹಲವಾರು ಊರುಗಳಲ್ಲಿ, ಶಾಲೆಗಳಲ್ಲಿ ಹರಡಿ ಜನಪ್ರಿಯತೆಯನ್ನು ಗಳಿಸಿತು.

1952ರಲ್ಲಿ ನಾನು ವಿಜಯಪುರದ ಪ್ರೌಢಶಾಲೆಗೆ ಸೇರಿದೆ. ಪಠ್ಯಪುಸ್ತಕಗಳ ಅಭ್ಯಾಸಕ್ಕಿಂತಲೂ ಹೆಚ್ಚಾಗಿ ನನ್ನ ಓದು ಕನ್ನಡ ಸಾಹಿತ್ಯದ ಎಲ್ಲಾ ಪ್ರಾಕಾರಗಳನ್ನೂ ಮುಟ್ಟಿತು. ಆಗ ನಾನು ಸ್ಥಳೀಯವಾಗಿ ಲಭ್ಯವಿದ್ದ ಪುಸ್ತಕಗಳನ್ನಲ್ಲದೆ ಧಾರವಾಡದ 'ಸಮಾಜ ಪುಸ್ತಕಾಲಯ', 'ಮನೋಹರ ಗ್ರಂಥ ಮಾಲೆ' ಗಳಿಂದಲೂ ಪುಸ್ತಕಗಳನ್ನು ವಿ.ಪಿ.ಪಿ ಮೂಲಕ ತರಿಸಿ ಓದುತ್ತಿದ್ದೆ. ಈ ವ್ಯಾಸಂಗದಲ್ಲಿ ಕಮ್ಯುನಿಸಂ, ಕಮ್ಯುನಿಸ್ಟ್, ಸೋವಿಯತ್ ರಷ್ಯಾ, ಚೀನ, ಸ್ಟಾಲೀನ್, ಮಾವೋ, ಮೊದಲಾದ ಹೆಸರುಗಳ ಪರಿಚಯವಾಯಿತು. ಬಸವರಾಜ ಕಟ್ಟಿಮನಿಯವರ 'ಜ್ವಾಲಾಮುಖಿಯ ಮೇಲೆ' ಅ.ನ.ಕೃರವರ ಕೆಲವು ಬರಹಗಳು, ತ.ರಾ.ಸುರವರ 'ಕೇದಿಗೆ ವನ', ನಿರಂಜನರ 'ಚಿರಸ್ಮರಣೆ' ಮತ್ತು ಇತರ ಕೃತಿಗಳು ಕಮ್ಯುನಿಸಂನಲ್ಲಿ, ಕಮ್ಯುನಿಸ್ಟ್ ಪಕ್ಷದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿದ್ದವು. ಕನ್ನಡದಲ್ಲಿ ಲಭ್ಯವಿದ್ದ ಕಮ್ಯುನಿಸ್ಟ್ ಸಾಹಿತ್ಯವನ್ನು ಓದಲಾರಂಭಿಸಿದೆ.

1953ರಲ್ಲಿ ಸ್ಟಾಲಿನ್ನರ ನಿಧನದ ಸುದ್ದಿ ಆಕಾಶವಾಣಿ ಬಿತ್ತರಿಸಿದಾಗ ನಾನು ವಿಜಯಪುರದ ಜೈಹಿಂದ್ ಕಾಫಿ ಕ್ಲಬ್ಬಿನಲ್ಲಿ ಕೂತು ಕಾಫಿ ಕುಡಿಯುತ್ತಿದ್ದೆ. ಆ ಹೋಟೆಲ್ ಮಾಲಿಕ ಮತ್ತು ಸೇವಕ ಬಸಪ್ಪನವರು ಮತ್ತು ಸುತ್ತಮುತ್ತಲಿಂದ ಅಲ್ಲಿ ಬಂದು ನೆರೆದ ಜನರು ಸ್ಟಾಲಿನ್ನರ ಸಾವಿನ ಬಗ್ಗೆ ವ್ಯಕ್ತಪಡಿಸಿದ ದುಃಖ ನನ್ನ ಮೇಲೆ ಪರಿಣಾಮ ಮಾಡಿತು. ಆಶ್ಚರ್ಯವೆಂದರೆ ವಿಜಯಪುರದಲ್ಲಿ ಕಮ್ಯುನಿಸ್ಟ್ ಪಕ್ಷವಿರಲಿಲ್ಲ. ಬಹುಶಃ ಇಂದೂ ಇರಲಿಕ್ಕಿಲ್ಲ. ಸ್ವಲ್ಪ ಕಾಲದಲ್ಲಿಯೇ ಇಂದಿರಾ ಶ್ರೀಕಂಠಯ್ಯನವರು ಭಾಷಾಂತರಿಸಿದ್ದ 'ಜೋಸೆಫ್ ಸ್ಟಾಲಿನ್'ರ ಜೀವನ ಚರಿತ್ರೆಯನ್ನು ಓದಿದೆ. ಪ್ರೌಢ ಶಾಲೆಯಲ್ಲಿದ್ದಾಗ ಯಾವಾಗಲೂ ಮೊದಲ ದರ್ಜೆಯ ವಿದ್ಯಾರ್ಥಿಯಾಗಿದ್ದು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಮೊದಲ ದರ್ಜೆಯಲ್ಲಿ ತೇರ್ಗಡೆಯಾದೆ. ಆಗ ನನಗೆ ಒಮ್ಮೊಮ್ಮೆ ಕೆ.ಜಿ.ಎಫ್‌ಗೆ ಹೋಗಬೇಕು ಎನ್ನಿಸುತ್ತಿದ್ದಿತು. ಒಬ್ಬನೇ ಹೋಗುವುದು ಹೇಗೆ? ನನ್ನ ಸಹಪಾಠಿಗಳು 'ಟ್ಯಾಕ್ಸಿ ಡ್ರೈವರ್' ಸಿನಿಮಾ ನೋಡಲು ರಾತ್ರಿ ಸೈಕಲ್‌ಗಳ ಮೇಲೆ ವಿಜಯಪುರದಿಂದ ಚಿಕ್ಕಬಳ್ಳಾಪುರಕ್ಕೆ ಬರಲು ಸಿದ್ಧರಿದ್ದರೇ ಹೊರತು ಕೆ.ಜಿ.ಎಫ್‌ಗೆ ಹೋಗಲು ಯಾರೂ ತಯಾರಿರಲಿಲ್ಲ.

ನನ್ನ ಶಾಲಾ ವಿದ್ಯಾರ್ಥಿ ದೆಸೆಯಲ್ಲಿ ನಾನು ಸಂಚರಿಸಿದ್ದ ಕೋಲಾರ ಜಿಲ್ಲೆಯ ಊರುಗಳಲ್ಲಿ ಕಮ್ಯುನಿಸ್ಟ್ ಪಕ್ಷದ ಬಗ್ಗೆ ಪಕ್ಷದ ಕಾರ್ಯಕರ್ತರ ಬಗ್ಗೆ ಆಧರಾಭಿಮಾನಗಳಿದ್ದುದನ್ನು, ಗೌರವವಿದ್ದುದನ್ನು ಗುರುತಿಸಿದ್ದೆ.

1955ರಲ್ಲಿ ಬೆಂಗಳೂರಿನಲ್ಲಿ ನಾನು ಕಾಮರ್ಸ್ ಕಾಲೇಜು ಸೇರುವ ವೇಳೆಗೆ ವರ್ಗಗಳು, ವರ್ಗಹೋರಾಟ, ಸಮಾಜವಾದ, ಸಮತಾವಾದ, ರಾಷ್ಟ್ರೀಕರಣ, ಉತ್ಪಾದನಾ ಸಾಧನೆಗಳ ಸಾಮೂಹಿಕ ಒಡೆತನ ಇಷ್ಟರಮಟ್ಟಿಗಿನ ತಿಳುವಳಿಕೆ ಇದ್ದಿತು. ಕಾಲೇಜಿನಲ್ಲಿ ಮೊದಲನೆಯ ವರ್ಷ ಮುಗಿಯುವ ವೇಳೆಗೆ ನನಗೆ ಎರಡು ಹೆಸರುಗಳು ಬಂದವು.

ಮುಂದುವರಿಯುವುದು

## ಸದ್ದಿಲ್ಲದ ಸಂಘಟಕ ಕಾಮ್ರೇಡ್ ಸಿ.ನಂಜುಂಡಪ್ಪ

ಬಿ. ಮಾಧವ

ಕಾಮ್ರೇಡ್ ಸಿ.ನಂಜುಂಡಪ್ಪ ಹೇಗಿದ್ದರು? ಎಂದು ಕೇಳಿದರೆ ಅವರು ಕಾಮ್ರೇಡ್ ಸಿ.ನಂಜುಂಡಪ್ಪನವರಂತಿದ್ದರು ಎಂದು ಉತ್ತರಿಸಬೇಕಾಗುತ್ತದೆ. ಅವರಂತವರು ಬೇರೊಬ್ಬರಿಲ್ಲ. ಅದುದರಿಂದಲೇ ಅವರ ಅಗಲಿಕೆಯು ನಮಗೆ ನಿಜವಾಗಿಯೂ ತುಂಬಲಾಗದ ನಷ್ಟ.

ಅವರೊಬ್ಬ ಸದ್ದಿಲ್ಲದ ಸಂಘಟಕ. ಮಧ್ಯಮ ವರ್ಗದ ನಡುವೆ ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಪ್ರಸಾರ ಮಾಡುವುದರಲ್ಲಿ ಅವರ ಕೊಡುಗೆ ಅಪಾರ. ಇದು ಸುಲಭದ ಕೆಲಸವಲ್ಲ. ಕಾರ್ಮಿಕ ವರ್ಗದ ಕ್ರಾಂತಿಕಾರಿ ಚಳುವಳಿಯು ಪ್ರಬಲವಾಗಿರುವ ರಾಜ್ಯಗಳಲ್ಲಿ ವರ್ಗ ಹೋರಾಟಗಳಿಂದ ಸ್ಫೂರ್ತಿ ಪಡೆದ ಮಧ್ಯಮ ವರ್ಗದ ಮಾರ್ಕ್ಸ್‌ವಾದಿ ವಿಚಾರಧಾರೆಯ ಕಡೆಗೆ ಆಕರ್ಷಿತವಾಗುತ್ತದೆ. ಆದರೆ ಅಷ್ಟು ಪ್ರಬಲವಾದ ಚಳುವಳಿ ಇಲ್ಲದಿರುವ ಕರ್ನಾಟಕದಂತಹ ರಾಜ್ಯಗಳಲ್ಲಿ ಮಾರ್ಕ್ಸ್‌ವಾದ ಲೆನಿನ್ ವಾದದ ತತ್ವವನ್ನು ನೇರವಾಗಿ ಜನರ ನಡುವೆ ಕೊಂಡು ಹೋಗಿ ಪ್ರಚಾರ ಮಾಡಬೇಕಾಗುತ್ತದೆ. ಇದಕ್ಕೆ ಬಹಳಷ್ಟು ತಾಳ್ಮೆ ಬೇಕು. ಇಂತಹ ತಾಳ್ಮೆಯ ಕಣಜವಾಗಿದ್ದರು ಕಾಮ್ರೇಡ್ ಸಿ.ಎನ್.

ಕರ್ನಾಟಕ ರಾಜ್ಯಾದ್ಯಂತ ಅನೇಕ ಸರಕಾರಿ ನೌಕರರು, ಬ್ಯಾಂಕ್ ನೌಕರರು, ವಿಮಾ ನೌಕರರು, ವಕೀಲರು ಇತ್ಯಾದಿ ಮಧ್ಯಮ ವರ್ಗದ ಜನರಲ್ಲಿ ಮಾರ್ಕ್ಸ್‌ವಾದ್ದದ ತಿಳುವಳಿಕೆಯನ್ನು ಮೂಡಿಸುವ ಕೆಲಸವನ್ನು ಕಾಮ್ರೇಡ್ ಸಿ.ಎನ್. ಮಾಡಿದ್ದಾರೆ. ಒಬ್ಬೊಬ್ಬ ವ್ಯಕ್ತಿಯನ್ನೂ ಜಾಗ್ರತೆಯಿಂದ ಗುರುತಿಸಿ, ನಿರಂತರವಾಗಿ ಅವರ ವೈಯಕ್ತಿಕ ಸಂಪರ್ಕ ಬೆಳೆಸಿ, ಅವರಿಗೆ ಮಾರ್ಕ್ಸ್‌ವಾದದ ಮೂಲ ಪಾಠಗಳ ಕುರಿತು ಸಾಹಿತ್ಯಗಳನ್ನು ಒದಗಿಸಿ ಕೊಟ್ಟು, ಪ್ರತಿ ಬಾರಿಯೂ ಗಂಟೆಗಟ್ಟಲೆ ಅತ್ಯಂತ ತಾಳ್ಮೆಯಿಂದ ಅವರೊಂದಿಗೆ ಚರ್ಚಿಸಿ ಅವರನ್ನು ಪಕ್ಷ ಬೆಂಬಲಿಗರನ್ನಾಗಿ ರೂಪಿಸುವ ಕೆಲಸಕ್ಕೆ ಅವರು ತನ್ನ ಹೆಚ್ಚಿನ ಸಮಯವನ್ನು ವಿನಿಯೋಗಿಸಿದ್ದಾರೆ. ಹೀಗೆ ಪಕ್ಷದ ಬೆಂಬಲಿಗರಾಗಿ ಪರಿವರ್ತಿತರಾದವರಲ್ಲಿ ಹೆಚ್ಚಿನವರು ಪಕ್ಷದ ಬಹಿರಂಗ ಚಟುವಟಿಕೆಗಳಲ್ಲಿ ಭಾಗವಹಿಸಲಾರದವರು. ಆದ್ದರಿಂದ ಈ ನಿಟ್ಟಿನಲ್ಲಿ ಕಾಮ್ರೇಡ್ ಸಿ.ಎನ್.ರವರ ಕೊಡುಗೆಯು ಮೂರ್ತಿಯಾಗಿ ಮೇಲ್ನೋಟಕ್ಕೆ ಗೋಚರಿಸಲಾರದು. ಆದರೆ ಮಾರ್ಕ್ಸ್‌ವಾದ ಲೆನಿನ್‌ವಾದದ ಪ್ರಚಾರದಲ್ಲಿ ಮಧ್ಯಮ ವರ್ಗವು ವಹಿಸುವ ಪಾತ್ರವು ಮಹತ್ತರವಾದದ್ದು.

ನಾನು ಕಾಮ್ರೇಡ್ ಸಿ.ನಂಜುಂಡಪ್ಪನವರನ್ನು ಮೊತ್ತಮೊದಲು ಭೇಟಿಯಾದದ್ದು 1968 ರಲ್ಲಿ. ಆಗ ತಾನೇ ಅವರು ದೂರವಾಣಿ ಇಲಾಖೆಯ ತಮ್ಮ ಉದ್ಯೋಗಕ್ಕೆ ರಾಜೀನಾಮೆ ನೀಡಿದ್ದರು. ಯಾಕೆ ರಾಜೀನಾಮೆ ಕೊಟ್ಟಿರಿ ಎಂದು ನಾನು ಕೇಳಿದೆ. ಪಕ್ಷದ ನಿರ್ದೇಶನದ ಪ್ರಕಾರ ಉದ್ಯೋಗಕ್ಕೆ ರಾಜೀನಾಮೆ ನೀಡಿದೆ ಎಂದರು. ಆ ಕ್ಷಣದಲ್ಲಿ ನನಗೆ ಅವರೊಬ್ಬ ಮಹಾನ್ ವ್ಯಕ್ತಿಯಾಗಿ ಕಂಡರು. ಪಕ್ಷವೇ ತನ್ನ ಜೀವನ ಎಂಬ ಆಯ್ಕೆಯನ್ನು ಅವರು ಮಾಡಿಕೊಂಡಿದ್ದರು. ಈ ತೀರ್ಮಾನದ ನಂತರ ಅವರು ಹಿಂದಕ್ಕೆ ನೋಡಲಿಲ್ಲ. ತನ್ನದೇ ಆದ ಕುಟುಂಬವೇ ಇಲ್ಲದಿದ್ದ ಅವರನ್ನು ಎಂದೂ ಅನಾಥ ಪ್ರಜ್ಞೆ ಕಾಡಲಿಲ್ಲ. ಪಕ್ಷದ ಸಂಘಟನೆಯೇ ತನ್ನ ಕುಟುಂಬ ಎಂಬ ದೃಢವಾದ ನಂಬಿಕೆಯಿಂದ ಅವರು ಜೀವನವನ್ನು ಎದುರಿಸಿದರು. ಪಕ್ಷ ಕೂಡಾ, ಕೊನೆಯ ಕ್ಷಣದವರೆಗೂ ಅವರ ಬಾಳಿಗೆ ಆಸರೆಯಾಗಿ ನಿಂತಿತು.

**ಕ್ರಾಂತಿಕಾರಿ ನಿಷ್ಠೆ**

ನೀವು ಯಾಕೆ ಮದುವೆಯಾಗಲಿಲ್ಲ? ಎಂದು ಅವರನ್ನು ಒಮ್ಮೆ ಕೇಳಿದ್ದೆ. ಒಬ್ಬ ಕ್ರಾಂತಿಕಾರಿಯ ಜೀವನಕ್ಕೆ ಕುಟುಂಬದಿಂದಾಗಿ ಅಡಚಣೆಗಳು ಉಂಟಾಗಬಹುದು. ಆದುದರಿಂದ ನನಗೆ ಕುಟುಂಬ ಬೇಡ ಎಂದು ನಿರ್ಧರಿಸಿರುವುದಾಗಿ ಉತ್ತರಿಸಿದರು. ನಾನು ಆ ಅಭಿಪ್ರಾಯವನ್ನು ಒಪ್ಪಲಿಲ್ಲ. ಆದರೆ ಕ್ರಾಂತಿಕಾರಿ ಕರ್ತವ್ಯದ ಬಗ್ಗೆ ಅವರಿಗೆ ಇದ್ದ ನಿಷ್ಠೆ ಅಷ್ಟು ತೀವ್ರವಾಗಿತ್ತು. ಕ್ರಾಂತಿಕಾರಿ ಚಟುವಟಿಕೆಗಳಿಗಾಗಿ ಜೈಲಿಗೆ ಹೋಗಬೇಕಾಗಬಹುದು, ಪೋಲೀಸ್ ಮತ್ತು ಗೂಂಡಾ ದಾಳಿಗಳನ್ನು ಎದುರಿಸಬೇಕಾಗಬಹುದು. ಭೂಗತ ಜೀವನ ನಡೆಸಬೇಕಾಗಬಹುದು. ಇಂತಹ ಸಂದರ್ಭಗಳಲ್ಲಿ ಕುಟುಂಬವೆಂಬುದು ಒಂದು ತೊಡಕಾಗಬಹುದು ಎಂದು ಅವರು ಬಲವಾಗಿ ವಾದಿಸುತ್ತಿದ್ದರು.

**ಚಿರಸ್ಮರಣೀಯ**

ಒಬ್ಬ ಕಾರ್ಮಿಕ ಮುಖಂಡನಾಗಿ ಕಾಮ್ರೇಡ್ ಸಿ.ನಂಜುಂಡಪ್ಪನವರು ಹೆಚ್ಚಾಗಿ ದುಡಿದದ್ದು ಪ್ಲಾಂಟೇಷನ್ ಕಾರ್ಮಿಕರ ನಡುವೆ. ಸಮಾಜದ ತೀರ ಕೆಳಸ್ತರದಲ್ಲಿರುವ ಈ ಕಾರ್ಮಿಕರ ಪ್ರಾದೇಶಿಕ, ರಾಜ್ಯ ಮತ್ತು ಅಖಿಲ ಭಾರತ ಮಟ್ಟದ ಮುಖಂಡರಾಗಿ ತೋಟಗಳಲ್ಲಿ ಈ ಕಾರ್ಮಿಕರ ಮನೆ ಮನೆಗಳನ್ನು ಸಂದರ್ಶಿಸಿ ಅವರ ಕುಟುಂಬಗಳೊಂದಿಗೆ ಬೆರೆತು ಜೀವಿಸಿದ ಕಾಮ್ರೇಡ್ ಸಿ.ಎನ್ ಅತ್ಯಂತ ಕಷ್ಟದ ಪರಿಸ್ಥಿತಿಗಳಿಗೆ ಕೂಡಾ ಹೊಂದಿಕೊಳ್ಳುತ್ತಿದ್ದರು. ಸಿಐಟಿಯು ವಿನ ಅಖಿಲ ಭಾರತ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಜನರಲ್ ಕೌನ್ಸಿಲ್ ಸದಸ್ಯರಾಗಿ, ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಮತ್ತು ಉಪಾಧ್ಯಕ್ಷರಾಗಿ ಹಾಗೂ ದ.ಕ. ಮತ್ತು ಉಡುಪಿ ಜಿಲ್ಲಾ ಸಮಿತಿಯ ಅಧ್ಯಕ್ಷರಾಗಿ ಕಾಮ್ರೇಡ್ ಸಿ.ಎನ್. ರವರು ಮಾಡಿದ ಕೆಲಸಗಳು ಚಿರಸ್ಮರಣೀಯ.

**ಉತ್ತಮ ಶಿಕ್ಷಕ**

ಪಕ್ಷದ ಮತ್ತು ಟ್ರೇಡ್ ಯೂನಿಯನ್ ಕಾರ್ಯಕರ್ತರಿಗೆ ಅವರೊಬ್ಬ ಉತ್ತಮ ಶಿಕ್ಷಕರಾಗಿದ್ದರು. ಅವರು ನೀಡುತ್ತಿದ್ದ ಶಿಕ್ಷಣವು ಕೇವಲ ಕ್ಲಾಸುಗಳಿಗೆ ಸೀಮಿತವಾಗಿರಲಿಲ್ಲ. ಹೆಚ್ಚಿನ ಆಸಕ್ತಿ ಇರುವ ಕಾರ್ಯಕರ್ತರನ್ನು ಗುರುತಿಸಿ ಅವರಿಗೆ ಪುಸ್ತಕಗಳನ್ನು ತರಿಸಿಕೊಡುತ್ತಿದ್ದರು. ನಿರ್ದಿಷ್ಟ ಕೃತಿಗಳನ್ನು ಓದುವಂತೆ ಆಗಿಂದಾಗೆ ಸೂಚನೆ ನೀಡುತ್ತಿದ್ದರು. ಅವರ ಪುಸ್ತಕ ಸಂಗ್ರಹವೇ ಅವರ ಆಸ್ತಿ. ಈ ಆಸ್ತಿಯೇ ಮುಂದಿನ ಪೀಳಿಗೆಗೆ ಅವರ ಬಳುವಳಿ.

ಕಾಮ್ರೇಡ್ ಸಿ.ಎನ್. ನಿಮಗಿದೋ ಕೆಂಪು ವಂದನೆ.

**ಪ.ಬಂಗಾಳ ಎಡರಂಗ :**

## 25 ವರುಷಗಳ ದಾಖಲೆ ಜನಪ್ರಿಯ ಆಚರಣೆಗೆ ಸಿದ್ಧತೆ

ಜೂನ್ 21, 2002 ಭಾರತದ ರಾಜಕೀಯ ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿ ದಾಖಲಾಗಿರುವ ದಿನ. ಪ-ಬಂಗಾಳದ ಎಡರಂಗ ಸರ್ಕಾರ 25 ವರುಷಗಳ ಅವಧಿಯನ್ನು ಯಶಸ್ವಿಯಾಗಿ ಪೂರೈಸಿ ದೃಡತೆಯ ದಾಪುಗಾಲಿಡುತ್ತಿದೆ. ಇದು ದೇಶದಲ್ಲಿ, ಪ್ರಪಂಚದಲ್ಲೇ ಗಮನ ಸೆಳೆದ ದಾಖಲೆ.

ಎಡರಂಗದ ಅಸ್ತಿತ್ವ, ನಡೆಸಿದ ಸಾಧನೆಗಳು ಅಪಾರ ಅನುಭವ ಸಾಗರದಷ್ಟು. ತೋರಿದ ಪರ್ಯಾಯ ವಿಶಿಷ್ಟವಾದುದು, ಅನುಕರಣೀಯದ್ದು, ಇಂತಹ ಹಲವು ಅಗಾಧ ಅನುಭವಗಳನ್ನೂ, ಸ್ಪೂರ್ತಿಯನ್ನು ದೇಶದ ಎಲ್ಲಾ ಜನತೆಗೆ ಹಂಚಲು ಬೆಂಗಳೂರಿನಲ್ಲಿ ಸೇರಿದ್ದ ಸಿ.ಪಿ.ಐ(ಎಂ) ಕೇಂದ್ರ ಸಮಿತಿಯು ನಿರ್ಧರಿಸಿದೆ.

ಜೂನ್ 21ರಿಂದ ಜುಲೈ 1ರವರೆಗೆ ಪ.ಬಂಗಾಳ ಎಡರಂಗ ಸರ್ಕಾರದ 25ನೇ ವಾರ್ಷಿಕೋತ್ಸವದ ಆಚರಣೆಯನ್ನು ಹಮ್ಮಿಕೊಳ್ಳಲು ಕರೆ ನೀಡಿದೆ. ಈ ಹತ್ತು ದಿನಗಳಲ್ಲಿ 25 ವರ್ಷಗಳ ದೀರ್ಘಕಾಲದ ಐತಿಹಾಸಿಕ ದಾಖಲೆಗಳನ್ನು ವ್ಯಾಪಕ ಪ್ರತಿಪಾದಿಸಬೇಕು. ಬಹಿರಂಗಸಭೆಗಳು, ವಿಚಾರಸಂಕಿರಣಗಳು, ಅಸಂಖ್ಯಾತ ಕಿರುಹೊತ್ತಿಗೆ ಪ್ರಕಟನೆ, ಪತ್ರಗಳು, ಹೊತ್ತಿಗೆಗಳನ್ನು ತರಲು ನಿರ್ಧರಿಸಲಾಗಿದೆ. ಇವುಗಳಲ್ಲಿ ಪಕ್ಷದ ಪ್ರಮುಖ ನಾಯಕರು, ಸಚಿವರು ಪ್ರಮುಖ ಕೇಂದ್ರಗಳಲ್ಲಿ ಭಾಗವಹಿಸು ವರು. ಹಾಗೆಯೇ "ಪೀಪಲ್ಸ್ ಡೆಮೊಕ್ರಸಿ" ಲೋಕ್‌ಲಹರ್, ಐಕ್ಯರಂಗ ಹಲವು ವಿಶೇಷ ಲೇಖನಗಳನ್ನು ಪ್ರಕಟಿಸಲಿದೆ. 'ದಿ ಮಾರ್ಕ್ಸಿಸ್ಟ್‌ನ ಮುಂಬರುವ ಸಂಚಿಕೆ ಇದಕ್ಕೆ ಮೀಸಲು. ಈ ಸ್ಪೂರ್ತಿ ಕರ್ನಾಟಕದ ಜನತೆಗೂ ಸಿಗಲಿ.

## ಮೀಸಲಾತಿ ನೀತಿಯನ್ನು ರಕ್ಷಿಸಿ

ಒಂದು ದಶಕಗಳ ಕಾಲದ ಉದಾರೀಕರಣ - ಖಾಸಗೀಕರಣ ಧೋರಣೆಗಳಿಂದ ಪರಿಶಿಷ್ಟ ಜಾತಿ - ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವಿಭಾಗಗಳಿಗೆ ಇರುವ ಉದ್ಯೋಗಾವಕಾಶಗಳು ಸಂಕುಚಿತಗೊಂಡು ಸಮಸ್ಯೆಗಳು ಉದ್ಭವಿಸುತ್ತಿವೆ. ಸಾರ್ವಜನಿಕ ಉದ್ದಿಮೆಗಳನ್ನು ಕಳಚಿಹಾಕುವ -ಖಾಸಗೀಕರಿಸುವ ನೀತಿಗಳಿಗೆ ವಿರುದ್ಧವಾಗಿ ಮತ್ತು ಈ ನೀತಿಗಳ ವಿರುದ್ಧ ಹೋರಾಟವನ್ನು ಮುಂದುವರಿಸಬೇಕಾಗಿದೆ.

ಆದರೆ ಈ ಹೋರಾಟವನ್ನು ಮುಂದುವರಿಸುವಾಗಲೇ ಈಗ ನಡೆಯುತ್ತಿರುವ, ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ಮತ್ತು ಸರ್ಕಾರಿ ನೌಕರರ ಪ್ರಮಾಣವನ್ನು ಕಡಿತ ಮಾಡುವ ಕ್ರಮಗಳಿಂದ ಸಂವಿಧಾನ ಬದ್ಧವಾದ ಮೀಸಲಾತಿ ಸೌಲಭ್ಯದ ನಿರಾಕರಣೆಯಾಗುತ್ತಿರುವುದನ್ನು ವಿರೋಧಿಸಬೇಕಾಗಿದೆ. ಒಂದು ಸಾರ್ವಜನಿಕ ಉದ್ದಿಮೆ ಖಾಸಗೀಕರಣಗೊಂಡ ನಂತರ ಖಾಸಗಿ ಆಡಳಿತ ಮಂಡಳಿಯು ಅಲ್ಲಿ ಮೀಸಲಾತಿ ನೀತಿಯನ್ನು ಜಾರಿಗೊಳಿಸುವುದಿಲ್ಲ.

ಉದ್ಯೋಗಾವಕಾಶಗಳಲ್ಲಿನ ಈ ಮೀಸಲಾತಿಯು ಶತಶತಮಾನಗಳಿಂದ ತಾರತಮ್ಯಕ್ಕೆ ತುತ್ತಾದ ಶೋಷಿತ ಜಾತಿಗಳಿಗೆ ನೀಡಲಾಗುವ ಅಲ್ಪ ಪ್ರಮಾಣದ ಪರಿಹಾರ ಈ ಮೀಸಲಾತಿ ಸೌಲಭ್ಯವನ್ನು ರಕ್ಷಿಸಸಿದೆ. ಖಾಸಗೀಕರಿಸಲ್ಪಟ್ಟ ಎಲ್ಲಾ ಸಾರ್ವಜನಿಕ ಉದ್ದಿಮೆಗಳಲ್ಲಿ ಮೀಸಲಾತಿ ಸೌಲಭ್ಯ ಮುಂದುವರೆಯುವಂತೆ ಶಾಶನಾತ್ಮಕ ಅವಕಾಶವನ್ನು ರೂಪಿಸಬೇಕು.

## ಕಾಮಧೇನು ಕೊಂದವರು......

ಪುಟ 7ರಿಂದ

ಆತ ತನ್ನ ಕುಟುಂಬವನ್ನು ಸಾಕುತ್ತಿದ್ದ.

ಒಮ್ಮೆ ರೈತ ಹುಷಾರಿಲ್ಲದೇ ಮಲಗಿದ. ಪೋಲಿ ತಿರುಗುತ್ತಿದ್ದ ಆತನ ಮಗ ಮನೆ ವ್ಯವಹಾರವನ್ನು ನೋಡಿಕೊಳ್ಳತೊಡಗಿದ.

ಹಸುವನ್ನು ಕಟುಕನಿಗೆ ಮಾರಿದರೆ ಒಮ್ಮೆಲೆ ಹೆಚ್ಚು ಹಣ ಸಿಗುತ್ತದೆಂದುಕೊಂಡು ಆತ ಹಸುವನ್ನು ಮಾರಹೋದ. ಹಾಸಿಗೆಯಲ್ಲಿದ್ದ ರೈತ ಆತನಿಗೆ ಇದನ್ನು, ಮಾಡಬೇಡವೆಂದು ಪರಿಪರಿಯಾಗಿ ಕೇಳಿದ.

ಆತನೂ ಹಸುವನ್ನು ಚನ್ನಾಗಿ ಸಾಕುತ್ತಾನೆ. ಈಗ ನಮಗೆ ಹಣವನ್ನು ಕೊಡುತ್ತಾನೆ ಎಂದು ಮಗ ಕಟುಕನಿಗೆ ಮಾರುವುದನ್ನೇ ಸಮರ್ಥಿಸಿಕೊಂಡ. ಕಟುಕ ಹಸುವನ್ನು ತೆಗೆದುಕೊಂಡು ಹೋದ.

ರೈತನ ಮಗನಿಗೆ ಒಮ್ಮೇಲೆ ಹಣ ಬಂದಿತು. ಸ್ವಲ್ಪ ದಿನದಲ್ಲಿ ಅದು ಖರ್ಚಾಗಿಯೂ ಹೋಯಿತು. ಆಗ ರೈತನ ಕುಟುಂಬಕ್ಕೆ ಆದಾಯದ ಒಂದು ಮೂಲವೇ ಪೂರ್ತಿಯಾಗಿ ಇಲ್ಲವಾಯಿತು. ರೈತ ಹುಷಾರಾದ . ಮರುದಿನವೇ ಕಟುಕನನ್ನು ಹುಡುಕಿಕೊಂಡು ಹೋದ. ಹಸುವನ್ನು ವಾಪಸ್ಸು ಪಡೆಯೋಣವೆಂದುಕೊಂಡು ಆದರೆ ಕಟುಕ ಹಸುವನ್ನು ಅಷ್ಟರಲ್ಲಾಗಲಿ ಮಾಂಸಕ್ಕಾಗಿ ಕೊಂದಿದ್ದ!

ಮೇಲಿನ ಕತೆಗೂ ಸರ್ಕಾರೀ ಉದ್ದಿಮೆಗಳ ಮಾರಾಟದ ಕತೆಗೂ ಸಾಮ್ಯವಿಲ್ಲವೇ?

# ಸಾಲ ಗಾಮೆ ಮೀಟರ್‌ಗಳನ್ನು ಕಿತ್ತು ಅಧಿಕಾರಿಗಳಿಗೆ ಹಿಂತಿರುಗಿಸಿದ ರೈತರು

ಅಳವಡಿಸಿದ್ದ ಮೀಟರ್‌ಗಳನ್ನು ಕಿತ್ತು ತಂದು ಕೆ.ಪಿ.ಟಿ.ಸಿ.ಎಲ್. ಮುಂದೆ ಸುರಿದರು ರೈತರು ಬದುಕಿನ ಬವಣೆ, ಈ ಆಕ್ರೋಶಗಳಿಂದ ಅಧಿಕಾರಿಗಳು ಕಣ್ಣು ತೆರೆದಾರೇಯೇ?

ಕೆ.ಪಿ.ಟಿ.ಸಿ.ಎಲ್ ನವರು ಪಂಪ್‌ಸೆಟ್‌ಗಳಿಗೆ ಅಳವಡಿಸಲಾಗಿದ್ದ 330ಕ್ಕೂ ಹೆಚ್ಚು ಮೀಟರ್‌ಗಳನ್ನು ಬಿಚ್ಚಿ ಮತ್ತೆ ಕೆ.ಪಿ.ಟಿ.ಸಿ.ಎಲ್‌ಗೆ ಹಿಂತಿರುಗಿಸಿದ ಘಟನೆ ಹಾಸನ ಜಿಲ್ಲೆಯ ಸಾಲಗಾಮೆಯಲ್ಲಿ ನಡೆಯಿತು.

ಮೇ 13ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಹಾಸನದಲ್ಲಿ ನಡೆದ ಪ್ರತಿಭಟನಾ ರ್‍ಯಾಲಿಯಲ್ಲಿ ರೈತರು ಮೀಟರ್‌ಗಳನ್ನು ಹಿಂತಿರುಗಿಸುವ ಮೂಲಕ ತಮ್ಮ ತೀವ್ರ ಆಕ್ರೋಶವನ್ನು ವ್ಯಕ್ತಪಡಿಸಿದರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೀರಾವರಿ ಪಂಪ್‌ಸೆಟ್‌ಗಳಿಗೂ ಮೀಟರ್ ಅಳವಡಿಸಲು ನಿರ್ಧರಿಸಿ ಹಲವು ಪ್ರದೇಶಗಳಲ್ಲಿ ಮೀಟರ್‌ಗಳನ್ನು ಅಳವಡಿಸುತ್ತಿದೆ. ಈ ಮಧ್ಯೆ ವಿದ್ಯುತ್ ದರ ಏರಿಕೆಗೆ ವಿದ್ಯುತ್ ನಿಯಂತ್ರಣ ಆಯೋಗವು ಅನುಮತಿ ನೀಡಿದ್ದು ರೈತರ ನೀರಾವರಿ ಪಂಪ್‌ಸೆಟ್‌ಗಳ ವಿದ್ಯುತ್ ದರ ಏರಿಕೆಗೆ ಸಲಹೆ ನೀಡಿದೆ. ಇದರಿಂದ ರೈತರು ಕಂಗಾಲಾಗಿದ್ದಾರೆ. ಸಿಪಿಐ(ಎಂ)ಪಕ್ಷವು ಕಳೆದ ಕೆಲವು ದಿನಗಳಿಂದ ವಿದ್ಯುತ್ ದರ ಏರಿಕೆ ಮತ್ತು ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸುವುದನ್ನು ವಿರೋಧಿಸಿ ರಾಜ್ಯಾದ್ಯಂತ ಹಮ್ಮಿಕೊಂಡಿದ್ದ ಹೋರಾಟಕ್ಕೆ ಎಲ್ಲೆಡೆ ವ್ಯಾಪಕ ಬೆಂಬಲ ವ್ಯಕ್ತವಾಗುವಂತೆಯೇ ಸಾಲಗಾಮೆಯ ರೈತರು ಇಂತಹ ಉಗ್ರ ಹೋರಾಟಕ್ಕೆ ಮುಂದಾಗಿದ್ದಾರೆ.

ಮೇ 13ರ ಬೆಳಿಗ್ಗೆ ಸಿಪಿಐ(ಎಂ) ರಾಜ್ಯಮುಖಂಡರಾದ ಎಸ್.ವೈ.ಗುರುಶಾಂತ್ ರ್‍ಯಾಲಿಯನ್ನು ಉದ್ಘಾಟಿಸಿ ಮಾತನಾಡಿದರು. ಆ ಸಂದರ್ಭದಲ್ಲಿ ಸಾಲಗಾಮೆ ಗ್ರಾಮಪಂಚಾಯತಿ ಆವರಣದಲ್ಲಿ ಸುಮಾರು 300 ರೈತರು ಇದ್ದರು. ಅಲ್ಲಿಂದ ಟೆಂಪೋಗಳಲ್ಲಿ, ಟ್ರ್ಯಾಕ್ಟರ್‌ಗಳಲ್ಲಿ ಹಾಸನದ ಇಂಜಿನಿಯರಿಂಗ್ ಕಾಲೇಜ್ ಬಳಿ ಬಂದು ಸಾಲಾಗಿ ನಿಂತರು. ಸುಮಾರು 220ಕ್ಕೂ ಹೆಚ್ಚು ಪಂಪ್‌ಸೆಟ್‌ಗೆ ಅಳವಡಿಸಲಾಗಿದ್ದ ಮೀಟರ್‌ಗಳನ್ನು ಬಿಚ್ಚಿ ತರಲಾಗಿತ್ತು. ನಗರದ ಪ್ರಮುಖ ಬೀದಿಗಳಲ್ಲಿ ಘೋಷಣೆಗಳೊಂದಿಗೆ ಸಂಚರಿಸಿ ಜಿಲ್ಲಾಧಿಕಾರಿ ಆವರಣದಲ್ಲಿ ಸಭೆ ಸೇರಿತು. ಆಗ ರೈತರ ಸಂಖ್ಯೆ ಸಾವಿರಕ್ಕೇರಿತ್ತು, ರೈತರು ರೊಚ್ಚಿಗೆದ್ದಿದರು. ಜಿಲ್ಲಾಧಿಕಾರಿಗಳ ಕಛೇರಿ ಆವರಣದಲ್ಲಿ ರೈತರನ್ನುದ್ದೇಶಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಜಿಲ್ಲಾ ಅಧ್ಯಕ್ಷ ಡಿ.ಟಿ.ಶಿವಣ್ಣ ಕಾರ್ಯದರ್ಶಿ ಧರ್ಮೇಶ್, ಗಿರೀಶ್, ರಾಜಕುಮಾರ್, ಸಾಲಗಾಮೆ ಕೃಷಿಪತ್ತಿನ ಸರಕಾರ ಬ್ಯಾಂಕ್ ಅಧ್ಯಕ್ಷ ಹಾಗೂ ಜಾತ್ಯಾತೀತ ಜನತಾದಳದ ಮುಖಂಡರಾದ ಶಂಕರೇಗೌಡ ಶಿವಲಿಂಗ, ಮಾಜಿಗ್ರಾಮಪಂಚಾಯತಿ ಅಧ್ಯಕ್ಷ ರುಕ್ಮಾಂಗದ, ದೇವಿಹಳ್ಳಿ ಮಹಾದೇವ್, ಮತ್ತಿತರರು ಮಾತನಾಡಿದರು.

ನೀರಾವರಿ ಪಂಪ್‌ಸೆಟ್‌ಗಳಿಗೆ ಅಳವಡಿಸಿದ್ದ ಸುಮಾರು 220ಕ್ಕೂ ಹೆಚ್ಚು ವಿದ್ಯುತ್ ಮೀಟರ್‌ಗಳನ್ನು ರೈತರು ಬಿಚ್ಚಿತಂದಿದ್ದು ಕೆ.ಪಿ.ಟಿ.ಸಿ.ಎಲ್ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಸಿ ಹಿಂತಿರುಗಿಸಲಾಯಿತು. ನಂತರ ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕ ಸುಬ್ರಾಯ ಕಾಮತ್ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು. ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಕೆ ಕ್ರಮವನ್ನು ಬಿಟ್ಟು ಉತ್ತಮ ಗುಣಮಟ್ಟದ ವಿದ್ಯುತ್ ಪೂರೈಸಬೇಕು. ರೈತರ ಕೃಷಿ ಆದಾಯವನ್ನು ವೈಜ್ಞಾನಿಕವಾಗಿ ಲೆಕ್ಕಹಾಕಿ ವಿದ್ಯುತ್ ದರಗಳನ್ನು ನಿಗದಿಪಡಿಸಬೇಕು. ಅಲ್ಲಿಯವರೆಗೆ ಹಿಂದಿನ ದರವನ್ನೇ ಮುಂದುವರೆಸಬೇಕು. ಹೈಟೆನ್ಷನ್ ವಿದ್ಯುತ್ ಬಳಕೆದಾರರಿಂದ ಆಗುತ್ತಿರುವ ವಿದ್ಯುತ್ ಕಳ್ಳತನವನ್ನು ತಡೆಯಲು ಬಿಗಿಯಾದ ಕ್ರಮ ಕೈಗೊಳ್ಳಬೇಕು. ಭಾಗ್ಯಜ್ಯೋತಿ ಸಂಪರ್ಕಗಳಿಗೆ ಮೀಟರ್ ಅಳವಡಿಕೆ ಕ್ರಮ ಕೈಬಿಡಬೇಕು. ಗೃಹಬಳಕೆ ವಿದ್ಯುತ್ ದರ ಇಳಿಸಬೇಕು ಎಂದು ಮುಖ್ಯಮಂತ್ರಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ ಒತ್ತಾಯಿಸಲಾಯಿತು.

ಕೃಷಿ ಉತ್ಪನ್ನಗಳ ಬೆಲೆ ಕುಸಿತದಿಂದ ಈಗಾಗಲೇ ಆತ್ಮಹತ್ಯೆ ದಾರಿ ಹಿಡಿದಿರುವ ರೈತ ಸಮುದಾಯದ ಮೇಲೆ ವಿದ್ಯುತ್ ದರ ಏರಿಕೆ ಹೊಡೆತ ನೀಡಿರುವುದು ಖಂಡನೀಯ. ರಾಜ್ಯ ಸರ್ಕಾರ ರೈತರ ಮತ್ತು ಬಡಜನರ ಹಿತಕ್ಕಾಗಿ ಕೂಡಲೇ ಉದ್ದೇಶಿತ ವಿದ್ಯುತ್ ದರ ಏರಿಕೆ ನಿರ್ಧಾರ ಕೈಬಿಡಬೇಕು. ಮತ್ತು ನೀರಾವರಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸುವ ಕಾರ್ಯವನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ಹೋರಾಟ ಇನ್ನೂ ತೀವ್ರ ಸ್ವರೂಪ ತಾಳುತ್ತದೆ ಎಂದು ಎಚ್ಚರಿಸಲಾಯಿತು. ಅರವಿಂದ್, ಜೆ.ಪಿ.ಸತ್ಯನಾರಾಯಣ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ವರದಿ: **ಬಿ.ಆರ್.ರಾಜಕುಮಾರ್**



# ಪ್ರಗತಿಪರ ಉರ್ದು ಕವಿ ಕೈಫಿ ಆಜ್ಮಿ ನಿಧನ

**ಸೋಶಲಿಸ್ಟ್ ಹಿಂದೂಸ್ತಾನದಲ್ಲಿ ಸಾಯಬೇಕು ಎಂಬುದು ಪ್ರಸಿದ್ಧ ಉರ್ದುಕವಿ ಕೈಫಿ ಆಜ್ಮಿಯವರ 'ಕೊನೆಯ ಬಯಕೆ'ಯಾಗಿತ್ತು. ಹಾಗಂತ ಅವರು 'ಟೆಲಿಗ್ರಾಫ್' ದಿನಪತ್ರಿಕೆಗೆ ಕೊಟ್ಟಿದ್ದ ಸಂದರ್ಶನದಲ್ಲಿ ಹೇಳಿದ್ದರು. 1930 ರ ದಶಕದಲ್ಲಿ ಆರಂಭವಾಗಿ ಹಲವು ದಶಕಗಳ ಕಾಲ ವ್ಯಾಪಕವಾಗಿದ್ದ, ಹಿಂದಿ-ಉರ್ದು ಮಾತ್ರವಲ್ಲ - ಅಖಿಲ ಭಾರತ ಪ್ರಗತಿಪರ ಸಾಂಸ್ಕೃತಿಕ ಚಳುವಳಿಯ ದಿಗ್ಗಜಗಳಲ್ಲಿ ಕೈಫಿ ಆಜಮಿ ಒಬ್ಬರಾಗಿದ್ದರು. ಇದೇ ಮೇ 10 ರಂದು ಅವರ ನಿಧನದೊಂದಿಗೆ ಆ ಪ್ರಗತಿಪರ ಪೀಳಿಗೆ ಹೆಚ್ಚುಕಡಿಮೆ ಕೊನೆಗೊಂಡಿದೆ. ಆದರೆ ಕೈಫಿಗಳು ಸಾಯುವುದಿಲ್ಲ. ಕಾವ್ಯಕ್ಕೆ ಸಾವುಂಟೆ? ಪ್ರಗತಿಪರ ಕಾವ್ಯ, ಕಲೆ ಖಡ್ಗವಿದ್ದಂತೆ. ಕೈಫಿ ಆಜಮಿಯವರ ಪೀಳಿಗೆಯವರು ಕೊಟ್ಟುಹೋದ ಈ ಖಡ್ಗ, ಜನಸಾಮಾನ್ಯರ ಹೋರಾಟದ ಆಯುಧವಾಗಲಿ. ಕೈಫಿಯವರ 'ಕೊನೆಯ ಬಯಕೆ' ಯಾದ 'ಸೋಶಲಿಸ್ಟ್ ಹಿಂದೂಸ್ತಾನ್' ನೆರವೇರಲಿ. ಇದೇ ಕೈಫಿ ಆಜಮಿಯವರಿಗೆ ನಿಜವಾದ ಶ್ರದ್ಧಾಂಜಲಿ**

ಕೈಫಿ ಆಜಮಿಯವರು ಬಾಲಿವುಡ್‌ನಲ್ಲಿ ದೊಡ್ಡ ಹೆಸರು. ಹಲವರಿಗೆ (ಅದರಲ್ಲೂ ಯುವ ಪೀಳಿಗೆಯವರಿಗೆ) ಕೈಫಿ ಪ್ರಸಿದ್ಧ ಹಿಂದಿ ಫಿಲಂ ಹಾಡುಗಳನ್ನು ಬರೆವ ಕವಿಯಾಗಿ ಮಾತ್ರ ಪರಿಚಯ. ಇನ್ನೂ ಕೆಲವರಿಗೆ ಕೈಫಿ ಶಬನಾ ಆಜಮಿಯ ತಂದೆಯಾಗಿ ಪರಿಚಯ. ಆದರೆ ಅವರ ನಿಜವಾದ ಪರಿಚಯ ಬೇರೆ. 1930 ರ ದಶಕದಲ್ಲಿ ಆರಂಭವಾಗಿ ದೇಶದ ತುಂಬಾ ಹಬ್ಬಿದ ಪ್ರಗತಿಪರ ಸಾಂಸ್ಕೃತಿಕ ಚಳುವಳಿಯ ದಿಗ್ಗಜಗಳಲ್ಲಿ ಒಬ್ಬರು. ಇದೇ ಚಳುವಳಿಯ ಇತರ ದಿಗ್ಗಜಗಳೆಂದರೆ ಸರದಾರ್ ಜಾಫರಿ, ಸಾಹಿರ್ ಲೂಧಿಯಾನವಿ. ಕೈಫಿ ಆಜಮಿಯವರ ನಿಧನದೊಂದಿಗೆ ಈ ಪೀಳಿಗೆ ಹೆಚ್ಚುಕಡಿಮೆ ಕೊನೆಗೊಂಡಿದೆ.

ಗುಜರಾತಿನಲ್ಲಿ ಜಾತ್ಯಾತೀತತೆಯ, ಕೋಮು ಸೌಹಾರ್ದದ ಕೊಲೆಯಾಗುತ್ತಿರುವಾಗ ಕೈಫಿ ಆಜಮಿ ನಿಧನ ಇನ್ನೂ ಹೆಚ್ಚು ದುಃಖದ ಸಂಗತಿ. ಗುಜರಾತಿನಲ್ಲಿ ಕೋಮುವಾದಿ-ಫ್ಯಾಸಿಸಂ ತಾಂಡವ ನೃತ್ಯ ನೋಡಲಾರದೆ, ಅವರು ಹೊರಟು ಬಿಟ್ಟರೇನೋ ಎಂಬಂತೆ. ನಿಜಜೀವನ ಕಲೆಯನ್ನು ಕಾಪಿ ಮಾಡುವ ವಿಪರ್ಯಾಸವೂ ಇಲ್ಲದೆ. ಬಾಬ್ರಿ ಮಸೀದಿ ನಾಶದ ದುರಂತದ ಹಿನ್ನೆಲೆಯಲ್ಲಿ ಸೈಯದ್ ಮಿರ್ಜಾ 'ನಸೀಮ್' ಎಂಬ ಫಿಲಂ ಮಾಡಿದ್ದರು. ಅದರಲ್ಲಿ ಸ್ವಾತಂತ್ರ್ಯ, ಕೋಮು ಸೌಹಾರ್ದತೆಗೆ ಹೋರಾಡಿದ್ದ ಹಿಂದಿನ ಪೀಳಿಗೆಯ ತಾತ, ಬಾಬ್ರಿ ಮಸೀದಿ ನಾಶದ ದಿನವೇ ಸಾಯುತ್ತಾನೆ. ತಾತ ತನ್ನ ಮೊಮ್ಮಗನೇ ಮೂಲಭೂತವಾದದತ್ತ ಒಲಿಯುವ ಪರಿಸ್ಥಿತಿ ಉಂಟಾಗಿದ್ದು ನೋಡಿ ಮರುಗುತ್ತಿರುತ್ತಾನೆ. ಆ ತಾತನ ಪಾತ್ರ ಮಾಡಿದ್ದು ಸ್ವತಃ ಕೈಫಿ ಆಜಮಿಯವರೇ!


**ಪೌಲವಿಯಿಂದ ಕಮ್ಯುನಿಸ್ಟ್**

ಕೈಫಿ ಹುಟ್ಟಿದ್ದು (1915) ಉತ್ತರ ಪ್ರದೇಶದ ಅಜಮ್‌ಘರ್ ಜಿಲ್ಲೆಯ ಮಜವಾನ್ ಎಂಬ ಗ್ರಾಮದಲ್ಲಿ ಅವರ ನಿಜವಾದ ಮೂಲ ಹೆಸರು ಅಥರ್ ಹುಸೇನ್ ರಿಜವಿ. ಅವರು ಹುಟ್ಟಿದ್ದು ಶ್ರೀಮಂತ ಮುಸ್ಲಿಂ ಕುಟುಂಬದಲ್ಲಿ. ಕೈಫಿ ಪ್ರಗತಿಪರ ಉರ್ದುಸಾಹಿತ್ಯದ ದಿಗ್ಗಜವಾಗಿದ್ದು ಆಕಸ್ಮಿಕವೇನೋ ಎನ್ನುವಂತೆ ಅವರ ಬಾಲ್ಯ ಇತ್ತು. ಅವರ ಅಣ್ಣಂದಿರಿಗೆಲ್ಲಾ ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯಕ್ಕೆ ಪಾಶ್ಚಿಮಾತ್ಯ ಶಿಕ್ಷಣಕ್ಕೆ ಕಳಿಸಿದರೆ, ಇವರಿಗೆ 'ಪೌಲ್ವಿ' ಆಗುವುದು ಪಾಲಿಗೆ ಬಂದಿತ್ತು. ಅದಕ್ಕಾಗಿ 'ರಿಜವಿ'ಯನ್ನು ಲಕನೌದ ಧಾರ್ಮಿಕ ಶಿಕ್ಷಣ ಕೇಂದ್ರಕ್ಕೆ ಕಳಿಸಲಾಗಿತ್ತು.ತನ್ನ ಊರಲ್ಲಿ ನೋಡಿದ ಜಮೀನುದಾರಿ ಶೋಷಣೆ, ದಮನ, 'ರಿಜವಿ'ಯ ಮೃದು ಹೃದಯವನ್ನು ಕಲಕಿತ್ತು.1933 ರಲ್ಲಿ ಪ್ರಕಟವಾಗಿ ಉರ್ದು ಮಾತ್ರವಲ್ಲ ಇಡಿ ದೇಶದ ಸಾಹಿತ್ಯ-ಸಾಂಸ್ಕೃತಿಕ ಕ್ಷೇತ್ರವನ್ನು ಅಲ್ಲೋಲ ಕಲ್ಲೋಲ ಮಾಡಿದ ಕಥಾ ಸಂಕಲನ 'ಅಂಗಾರೆ' ಯುವ ರಿಜವಿಯ ಮೇಲೂ ಸಾಕಷ್ಟು ಪರಿಣಾಮ ಬೀರಿತು. ಇದು ಮುಸ್ಲಿಮ್ ಸಮಾಜದ ಮೇಲೆ ಎಷ್ಟು ಪರಿಣಾಮ ಬೀರಿತೆಂದರೆ ಮುಲ್ಲಾಗಳು ಮತ್ತು ಬ್ರಿಟಿಷ್ ಸರಕಾರ ಅದನ್ನು ನಿಷೇಧಿಸಿದವು. ಈ ನಿಷೇಧ 'ಅಂಗಾರೆ' ಬಗ್ಗೆ ಆಸಕ್ತಿಯನ್ನು ಕೆರಳಿಸಿದವು. ಹಗಲಲ್ಲಿ 'ಅಂಗಾರೆ'ಯನ್ನು ಟೀಕಿಸಿದವರೇ ರಾತ್ರಿ ಬಾಗಿಲು ಹಾಕಿಕೊಂಡು ಗುಟ್ಟಾಗಿ ಅವನ್ನು ಓದುತ್ತಿದ್ದರಂತೆ! 'ರಿಜವಿ' ಓದುತ್ತಿದ್ದ ಧಾರ್ಮಿಕ ಶಾಲೆಯಲ್ಲಿ ಇದೇ ಕಥೆಯಂತೆ. ರಿಜವಿಯ ಧಾರ್ಮಿಕ ಶಿಕ್ಷಕರೇ ಕದ್ದು ಓದುತ್ತಿದ್ದರಂತೆ. ಇದರಿಂದ ಕುತೂಹಲ ಕೆರಳಿದ ರಿಜವಿರ 'ಅಂಗಾರೆ' ಓದಿದ. ಆತನ ಇಡೀ ದೃಷ್ಟಿಕೋನವೇ ಬದಲಾಯಿತು. ಧಾರ್ಮಿಕ ಮೂಢತನ, ಗೊಡ್ಡುವಾದಕ್ಕೆ ವಿರೋಧಿಯಾದ ರಿಜವಿ. ಆಗ ನಡೆಯುತ್ತಿದ್ದ ಸಾಮ್ರಾಜ್ಯಶಾಹಿ-ವಿರೋಧಿ ಸ್ವಾತಂತ್ರ್ಯ ಹೋರಾಟದತ್ತ ಆಕರ್ಷಿತನಾದ. 1936 ರಲ್ಲಿ ರಚಿತವಾದ ಪ್ರಗತಿಶೀಲ ಲೇಖಕರ ಸಂಘದ ನಾಯಕತ್ವದಲ್ಲಿ ಪ್ರಗತಿಶೀಲ ಸಾಂಸ್ಕೃತಿಕ ಚಳುವಳಿಯ ಗಾಳಿ. ರಿಜವಿ ಕೈಫಿ ಆಜಮಿಯಾದ. ಕಮ್ಯುನಿಸ್ಟನಾದ. 1942 ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ನುಗ್ಗಿದ. ಹತ್ತೊಂಬತ್ತನೇ ವಯಸ್ಸಿನಲ್ಲೇ ಕಮ್ಯುನಿಸ್ಟ್ ಪಕ್ಷದ ಸದಸ್ಯತ್ವ. ಅಂದಿನಿಂದ ಇಂದಿನವರೆಗೆ ಕಮ್ಯುನಿಸ್ಟ್ ಚಳುವಳಿಯ ಒಡನಾಡಿ. ಈ ನಡುವೆ ಕಾವ್ಯರಚನೆ-ಪ್ರಕಟಣೆ. 9 ವರ್ಷದ ಎಳೆ ವಯಸ್ಸಿನಲ್ಲೇ ಕಾವ್ಯ ರಚನೆ ಆರಂಭಿಸಿದ್ದ ಕೈಫಿಗೆ ಈಗ ಪ್ರಬುದ್ಧಕವಿ.

1943 ರಲ್ಲಿ ಕಮ್ಯುನಿಸ್ಟ್ ಪಕ್ಷ ಮುಂಬಯಿಯಲ್ಲಿ ಕೇಂದ್ರ ಕಛೇರಿ ಆರಂಭಿಸಿದಾಗ ಅಲ್ಲಿ ಕೆಲಸ ಮಾಡಲು ಮುಂಬಯಿಗೆ ಪಯಣ. ಪಕ್ಷದ ಪತ್ರಿಕೆಗಳಾದ 'ಕೌಮಿ ಜಂಗ್'(ರಾಷ್ಟ್ರೀಯ ಹೋರಾಟ) ಮತ್ತು 'ಮಜದೂರ್ ಮಹಲ್ಲಾ' ಗಳಲ್ಲಿ ಕೆಲಸ. ಮುಂಬಯಿಯ ಪಾರ್ಟಿಯ ಕಮ್ಯೂನ್‌ನಲ್ಲಿ ವಾಸ. ಆಗಲೇ ಆರಂಭವಾಗಿದ್ದ ಪ್ರಗತಿಶೀಲ ನಾಟಕ ಚಳುವಳಿ ಇಪ್ಟಾ (IPTA) ದ ಜತೆ ಒಡನಾಟ. ಇಪ್ಟಾದಲ್ಲಿ ಸಕ್ರಿಯರಾಗಿದ್ದ ಶೌಕತ್ ಜತೆ ವಿವಾಹ. ಪಕ್ಷ, ಸಾಂಸ್ಕೃತಿಕ ಚಳುವಳಿಯಲ್ಲಿ ಕೆಲಸದ ಜತೆ ಕೈಫಿ ಉರ್ದುವಿನಲ್ಲಿ ಪ್ರಮುಖ ಕವಿಯಾಗಿ ಬೆಳೆದರು. ಹಿಂದಿ ಫಿಲಂಗಳಿಗೆ ಬರೆದ ಅವರ ಕವನಗಳಿಗೆ ಲೆಕ್ಕವಿಲ್ಲ. ಅದನ್ನೆಲ್ಲಾ 1974 ರಲ್ಲಿ ಉರ್ದುವಿನಲ್ಲಿ, 2001 ರಲ್ಲಿ ಹಿಂದಿಯಲ್ಲಿ ತರಲಾಯಿತು. ('ಮೇರಿ ಆವಾಜ್ ಸುನೋ' ಇತರ ಪ್ರಮುಖ ಸಂಕಲನ ಗಳು, 'ಝಂಕಾರ್', 'ಆಖಿರ್-ಎ- ಶಾಬ್' ಮತ್ತು 'ಅವಾರ ನಾಜ್‌ದೇ' ಕೈಫಿ ಪ್ರಮುಖ ಪ್ರತಿಭಟನಾ ಕವಿಯಾಗಿ ಪ್ರಸಿದ್ಧರಾದರು. 'ಮಕಾನ್', 'ಬಹುರೂಪಾನಿ', 'ತೆಲಂಗಾಣ', ಅರತ್' 'ಇಬ್ಲಿನ್-ರೇ', ಮಜ್ಲೀಸ್-ಎ-ಶೂರಾ', 'ಪೀರ್-ಎ-ತಸ್ಮಾ-ಪಾ' ಮತ್ತು 'ದೂಸರಾ ಬನವಾಸ್' ಅವರ ಪ್ರಮುಖ ಕವಿತೆಗಳು. ಅವರು 'ರಾಜಕೀಯ ವ್ಯಂಗ್ಯ' ಕ್ಕೂ ಪ್ರಸಿದ್ಧರಾಗಿದ್ದು, ಉರ್ದು 'ಬ್ಲಿಡ್ಜ್' ನಲ್ಲಿ ಅವರ 'ನಯೀ ಗುಲಿಸ್ತಾನ್' ಅತ್ಯಂತ ಜನಪ್ರಿಯವಾಗಿತ್ತು. 1965 ರಿಂದ 1975 ರವರೆಗಿದ್ದ ಈ ಕಾಲಂ ಅಗಿನ ಭಾರತದ ರಾಜಕೀಯಕ್ಕೆ ಹಿಡಿದ ಕನ್ನಡಿಯಾಗಿತ್ತು. ಹಿಂದಿ ಫಿಲಂಗಳಿಗೆ ಬರೆದ ಕವನಗಳಲ್ಲಿ 'ಕಾಗಜ್ ಕೆ ಫೂಲ್' ಅವರಿಗೆ ಇಷ್ಟವಾದ ಮತ್ತು ಪ್ರಸಿದ್ಧ ಹಾಡುಗಳು. 'ವಕ್ತ್‌ನೇ ಕಿಯಾ'... 'ಹಮ್ ರಹೇನ ಹಮ್ ತುಂ ರಹೇ ನಾತುಂ' ಇವುಗಳಲ್ಲಿ ಪ್ರಸಿದ್ಧ ಹಾಡು.

ಕೈಫಿ ಆಜಮಿ ಕೊನೆಯ ವರ್ಷಗಳಲ್ಲಿ ತಮ್ಮ ಹುಟ್ಟೂರಿಗೆ ಮರಳಿದ್ದರು ಮುಂಬಯಿಯಿಂದ. ತಾವು ಫಿಲಂಗಳಲ್ಲಿ ಸಂಪಾದಿಸಿದ ದುಡ್ಡನ್ನು ತಮ್ಮ ಊರಿನ ಕಲ್ಯಾಣ ಕ್ರಮಗಳಿಗೆ ವಿನಿಯೋಗಿಸಿದ್ದರು. ಕೈಫಿ ಆಜಮಿಯವರ ಕವನಗಳು ದುಡಿಯುವ ಜನರ ಆಸ್ತಿ. ಅವರ ಹೋರಾಟದಲ್ಲಿ ಖಡ್ಗವಿದ್ದಂತೆ. 'ಕಾವ್ಯ ಖಡ್ಗವಾಗಲಿ' ಕನ್ನಡದ ಬಂಡಾಯ ಸಾಹಿತ್ಯದ ಘೋಷಣೆಯಾಗಿತ್ತು. ಈ ಖಡ್ಗವನ್ನು ಬಳಸಿ ಜನರ ಹೋರಾಟ ಜಯಗಳಿಸಲು ಕೈಫಿಆಜಮಿಯವರ ಕನಸಾಗಿದ್ದ 'ಸೋಶಲಿಸ್ಟ್ ಹಿಂದೂಸ್ತಾನ' ಸೃಷ್ಟಿಸುವಲ್ಲಿ ಇದು ಸಹಾಯಕವಾಗಲಿ. ಇದೇ ಕೈಫಿ ಆಜಮಿಯವರಿಗೆ ನಿಜವಾದ ಶ್ರದ್ಧಾಂಜಲಿ.

## 'ಗುಲಾಮ ಹಿಂದೂಸ್ತಾನದಲ್ಲಿ ಹುಟ್ಟಿ, ಆಜಾದ್ ಹಿಂದೂಸ್ತಾನದಲ್ಲಿ ಜೀವಿಸಿದ, ಸೋಶಲಿಸ್ಟ್ ಹಿಂದೂಸ್ತಾನದಲ್ಲಿ ಸಾಯುತ್ತೇನೆ!"



### 'ಬಜಾರ್ ಸಮಾಜವಾದಕ್ಕೆ ಬದಲಿ ಅಲ್ಲ'

ಕೈಫಿ ಆಜಮಿಯವರು 'ದಿ ಟೆಲಿಗ್ರಾಫ್' (ಕಲ್ಕತ್ತಾ)ಗೆ ಕೊಟ್ಟ ಅಂತಿಮ ಸಂದರ್ಶನದ ಆಯ್ದ ಭಾಗಗಳು

**● ವಯಸ್ಸಿನ ಬಗ್ಗೆ ಕೇಳಿದಾಗ**

ನಾನು ಹುಟ್ಟಿದಾಗ ಆ ಗ್ರಾಮದಲ್ಲಿ 'ಜನನ-ಮರಣ ರಿಜಿಸ್ಟಾರ್' ಇಡುವ ಅಭ್ಯಾಸ ಇರಲಿಲ್ಲ. ಆದ್ದರಿಂದ ನಾನು ಯಾವಾಗ ಹುಟ್ಟಿದ್ದು ಅಂತ ಗೊತ್ತಿಲ್ಲ. ನನ್ನ ಹಿರಿಯರೆಲ್ಲಾ ದೇಶ ವಿಭಜನೆಯ ನಂತರ ಪಾಕಿಸ್ತಾನಕ್ಕೆ ಹೋಗಿಬಿಟ್ಟರು. ಅವರಿಗೆ ನನ್ನ ವಯಸ್ಸು ಗೊತ್ತಿತ್ತೇನೋ! ನಾನು ಈಗ ಇಷ್ಟೇ ಹೇಳಬಲ್ಲೆ! ನಾನು ಹುಟ್ಟಿದ್ದು ಗುಲಾಮ ಹಿಂದೂಸ್ತಾನದಲ್ಲಿ, ಬೆಳೆದದ್ದು ಆಜಾದ್ ಹಿಂದೂಸ್ತಾನದಲ್ಲಿ. ಆದರೆ ನಾನು ಸಾಯುವುದು 'ಸೋಶಲಿಸ್ಟ್' ಹಿಂದೂಸ್ತಾನದಲ್ಲೇ!

**● ಸೋಶಲಿಸಂ ಬಗ್ಗೆ ಪ್ರೇಮ ಹುಚ್ಚಲ್ಲ.**

ಸಮಾಜವಾದಕ್ಕೆ ನಡೆಯುವ ಹೋರಾಟದ ಪ್ರೇಕ್ಷಕ ನಾನಲ್ಲ. ನಾನೊಬ್ಬ ಸಕ್ರಿಯ ಪಾಲುದಾರ. ನನ್ನ ಜೀವನ, ಕಾವ್ಯ ಅದಕ್ಕೆ ಮೀಸಲು... ರಶ್ಯಾ ಮತ್ತು ಇತರೆಡೆ ಸಮಾಜವಾದದ ವ್ಯವಸ್ಥೆಗೆ ಸ್ವಲ್ಪ ಹಿನ್ನಡೆಯಾಗಿರಬಹುದು. ಅದು ಶಾಶ್ವತವಲ್ಲ. ಸಮಾಜವಾದ ಪುನಃ ಪುಡಿದೇಳುತ್ತದೆ. ಮಾನವನ ವಿಮೋಚನೆಗೆ ಬೇರೆ ದಾರಿ ಇಲ್ಲ. ಬಜಾರ್ ಸಮಾಜವಾದಕ್ಕೆ ಬದಲಿ ಅಲ್ಲ.

**● ಪಶ್ಚಿಮ ಬಂಗಾಳ ಎಡರಂಗದ ಬಗ್ಗೆ**

ನೀವು ಚರಿತ್ರೆಯಲ್ಲಿ ಯಾವುದೇ ದೇಶದ ಯಾವುದೇ ಪ್ರಾಂತ್ಯದಲ್ಲಿ 25 ವರ್ಷ ಪ್ರಜಾಸತ್ತಾತ್ಮಕವಾಗಿ ಆಳಿದ ನಾಯಕರು ಸಿಗಲಿಕ್ಕಿಲ್ಲ. ಜ್ಯೋತಿಬಸುರವರದ್ದೇ ರೆಕಾರ್ಡ್. ಅವರನ್ನು ಅಧಿಕಾರದಿಂದ ಕೆಳಗಿಳಿಸುವ ವಿರೋಧ ಪಕ್ಷಗಳ ಪಿತೂರಿಗೇನು ಬರವಿರಲಿಲ್ಲ. ಆದರೆ ಜನಬೆಂಬಲದಿಂದ ಅದನ್ನು ಹಿಮ್ಮೆಟ್ಟಿಸಿದರು. ಈ ಬಗ್ಗೆ ನನಗೆ ಹೆಮ್ಮೆ ಇದೆ.

### ಎರಡನೇ ವನವಾಸ

**(ದೂಸ್ರಾ ಬನವಾಸ್)**

ರಾಮನಿಗೆ ಕಾಡಿನದ್ದೇ ನೆನಪು  
ನಾಡಿಗೆ ಮರಳಿದ ಮೇಲೂ  
ರಾಮ ಅವನ ಮನೆಯಂಗಳದಲ್ಲಿ  
ಡಿಸೆಂಬರ್ 6 ರ ತಾಂಡವನೃತ್ಯ  
ನೋಡುತ್ತಿದ್ದರೆ  
'ನನ್ನ ಮನೆಯಲ್ಲಿ ಇಷ್ಟೊಂದು ಹುಚ್ಚರು  
ಹೇಗಾದರೂ ನುಸುಳಿದರೋ?  
ಸರಯೂ ನದಿಯಲ್ಲಿ ರಾಮ ಕಾಲು  
ತೊಳೆಯಲಿಲ್ಲ  
ನೆತ್ತರ ಕಲೆಗಳ ನೋಡಿ ನೀರಿನಲ್ಲಿ  
ಸರಯೂ ತಟದಿಂದ ಎದ್ದು ಬಂದ  
ಕಾಲು ತೊಳೆಯದೇನೇ  
ನಾಡಿನ ಈ ವಾತಾವರಣ ನನಗೆ  
ಹಿಡಿಸದು  
ಡಿಸೆಂಬರ್ 6 ರಂದು ನನಗೆ ಎರಡನೇ  
ವನವಾಸವೆಂದು ಹೊರಟ  
ರಾಮು ಮತ್ತೆ ಕಾಡಿಗೆ

- ಕೈಫಿ ಆಜಮಿ

### ಕೋಮುವಾದದ ವಿರುದ್ಧ ಪ್ರಬಲ ವಾಣಿ ಮರೆ - ಪಿಬಿ ಕಂಬನಿ

ಕೈಫಿ ಆಜಮಿ ದೇಶದ ಪ್ರಗತಿಪರ ಸಾಂಸ್ಕೃತಿಕ ಚಳುವಳಿಯ ದಿಗ್ಗಜಗಳಲ್ಲಿ ಒಬ್ಬರು. ಪ್ರಮುಖ ಕವಿ. ಉರ್ದು ಸಾಹಿತ್ಯಕ್ಕೆ ಶ್ರೇಷ್ಠ ಕೊಡುಗೆ ಕೊಟ್ಟುವುದರ ಜತೆ 40ರ ದಶಕದಿಂದ ದೇಶದ ಸಾಂಸ್ಕೃತಿಕ ಬದುಕಿನಲ್ಲಿ ಪ್ರಮುಖ ವ್ಯಕ್ತಿಯಾಗಿದ್ದವರು. ಅವರದು ಕೋಮುವಾದದ ವಿರುದ್ಧ ಪ್ರಬಲ ವಾಣಿಯಾಗಿತ್ತು. ಅವರು ತಮ್ಮ ಕೊನೆಯುಸಿರುವವರೆಗೂ ಕಮ್ಯುನಿಸ್ಟ್ ಚಳುವಳಿಯ ಒಡನಾಡಿಯಾಗಿದ್ದರು. - ಎನ್ನುತ್ತಾ ಸಿಪಿಐ(ಎಂ)ನ ಪಾಲಿಟ್‌ಬ್ಯೂರೋ ಕೈಫಿ ಆಜಮಿ ಅವರ ನಿಧನಕ್ಕೆ ಕಂಬನಿ ಮಿಡಿದು ಶ್ರದ್ಧಾಂಜಲಿ ಅರ್ಪಿಸಿದೆ.

2002
ಫಿಫಾ ವಿಶ್ವಕಪ್
ಕೊರಿಯಾ-ಜಪಾನ್

# ಫುಟ್ ಬಾಲ್ ಸಮರ

## ಸೋಲುಂಡ ಛಾಂಪಿಯನ್ ಫ್ರಾನ್ಸ್

17ನೇ ವಿಶ್ವಕಪ್ ಫುಟ್ಬಾಲ್‌ನ ಆರಂಭದ ಸುತ್ತಿನ ಪಂದ್ಯಗಳಲ್ಲಿ ಅಚ್ಚರಿಯ ಫಲಿತಾಂಶಗಳು ಬಂದಿವೆ. ಹಾಲೀ ಛಾಂಪಿಯನ್ ಫ್ರಾನ್ಸ್ ಅನ್ನು ಕಪ್ಪು ಖಂಡ ಆಫ್ರಿಕಾದ ಪುಟ್ಟ ರಾಷ್ಟ್ರ ಸೆನೆಗಲ್ ಉದ್ಘಾಟನಾ ಪಂದ್ಯದಲ್ಲಿ ಸೋಲಿಸಿ ವಿಶ್ವದಲ್ಲಿ ಅಚ್ಚರಿ ಹಾಗೂ ಆಫ್ರಿಕಾ ಖಂಡದಾದ್ಯಂತ ಸಂಭ್ರಮ ಮೂಡಿಸಿದೆ. ಈ ಗೆಲುವಿನ ವಿಶೇಷವೇನೆಂದರೆ ಸೆನೆಗಲ್ ಅನೇಕ ವರ್ಷಗಳ ಕಾಲ ಫ್ರಾನ್ಸ್‌ನ ವಸಾಹತು ಆಗಿತ್ತು. ಇದೀಗ ಫ್ರಾನ್ಸ್ ವಿರುದ್ಧ ಸೆನೆಗಲ್ ವಿಜಯ ಆಫ್ರಿಕಾದಾದ್ಯಂತ ಒಂದು ಸ್ವಾತಂತ್ರ್ಯ ಹೋರಾಟದ ಯುದ್ಧದ ವಿಜಯ ಎಂಬ ಹೆಸರುಗಳಿಸಿದೆ. ಶತಮಾನಗಳ ನೋವುಂಡ ಸೆನೆಗಲ್ ಕಪ್ಪು ಜನರಿಗೆ ಒಂದು ಆಕ್ರೋಶದ ಗೆಲುವು ಸಿಕ್ಕಿದೆ ಹಾಗೂ ಸೆನೆಗಲ್ ಆದ್ಯಂತ ಈ ಗೆಲುವಿನ ಸಂಭ್ರಮ ಕಾಣುತ್ತಿದೆ.

**ವಿಶ್ವಕಪ್ ಫುಟ್ಬಾಲನಲ್ಲಿ ಸಮಾಜವಾದಿ ರಾಷ್ಟ್ರಗಳು**


ಕಳೆದ ಶತಮಾನದ ಆರಂಭದಿಂದಲೂ ಫುಟ್ಬಾಲ್‌ನಲ್ಲಿ ಸಮಾಜವಾದಿ ರಾಷ್ಟ್ರಗಳ ಪ್ರಾಬಲ್ಯವಿದೆ. ಸಮಾಜವಾದಿ ರಾಷ್ಟ್ರಗಳಲ್ಲಿ ಕಾರ್ಮಿಕರ ಕ್ರೀಡೆಯಾದ ಫುಟ್ಬಾಲ್ ಅತ್ಯಂತ ಜನಪ್ರಿಯ. ಈವರೆಗೆ ಸಮಾಜವಾದಿ ರಾಷ್ಟ್ರಗಳು ವಿಶ್ವಕಪ್ ಕಿರೀಟ ಧರಿಸದಿದ್ದರೂ ವಿಶ್ವಕಪ್ ಪಂದ್ಯಾವಳಿಗಳಲ್ಲಿ ಹೆಸರು ಗಳಿಸಿವೆ. ಸೋವಿಯತ್ ರಷ್ಯಾದಲ್ಲಿ ಸಮಾಜವಾದಕ್ಕೆ ಹಿನ್ನಡೆಯಾದ ನಂತರ ಫುಟ್ಬಾಲ್‌ನಲ್ಲೂ ಇದೀಗ ಸ್ವಲ್ಪ ಮಟ್ಟಿಗೆ ಸಮಾಜವಾದಿ ರಾಷ್ಟ್ರಗಳ ಪ್ರಾಬಲ್ಯ ಕಡಿಮೆಯಾಗಿದೆ. ಹಿಂದಿನ ಕಮ್ಯೂನಿಸ್ಟ್ ರಾಷ್ಟ್ರಗಳಾದ ರಷ್ಯಾ, ಹಂಗೇರಿ, ಪೋಲೆಂಡ್, ರುಮೇನಿಯಾ, ಯುಗೋಸ್ಲಾವಿಯಾ, ಆಸ್ಟ್ರೀಯಾ, ಪೂರ್ವ ಜರ್ಮನಿ, ಉ.ಕೊರಿಯಾ, ಇದೀಗಾ ಚೀನಾ ಪ್ರಬಲ ಫುಟ್ಬಾಲ್ ಆಡುವ ರಾಷ್ಟ್ರಗಳಾಗಿದ್ದು ವಿಶ್ವಕಪ್ ಪಂದ್ಯಾವಳಿಗಳಲ್ಲಿ ತನ್ನದೇ ಆದ ಹೆಸರು ಗಳಿಸಿವೆ. ತೀರಾ ಇತ್ತೀಚಿನವರೆಗೆ ವೃತ್ತಿಪರ ಆಟಗಾರಾಗಿ ಆಡಲು ಸಮಾಜವಾದಿ ರಾಷ್ಟ್ರಗಳ ಫುಟ್ಬಾಲ್ ಆಟಗಾರರಿಗೆ ಅನುಮತಿ ಇರದಿದ್ದಾಗಲೂ ಕಠಿಣ ಶಿಸ್ತಿನ ತರಬೇತಿ ಹಾಗೂ ಸರ್ಕಾರದ ಎಲ್ಲಾ ರೀತಿಯ ಬೆಂಬಲದೊಂದಿಗೆ ವೃತ್ತಿಪರ ಆಟಗಾರರಿರುವ ರಾಷ್ಟ್ರಗಳನ್ನು ಎದುರಿಸಿ ಸಮಾಜವಾದಿ ರಾಷ್ಟ್ರಗಳು ಹೆಸರು ಗಳಿಸಿದ್ದವು. ಸಮಾಜವಾದಿ ವ್ಯವಸ್ಥೆಯ ಪತನದೊಂದಿಗೆ ಫುಟ್ಬಾಲ್ ಕೂಡಾ ಈ ರಾಷ್ಟ್ರಗಳಲ್ಲಿ ಹಿನ್ನಡೆ ಕಂಡಿತು.

**ಫುಟ್ಬಾಲ್‌ನಲ್ಲಿ ಭಾರತ**

ಭಾರತದಲ್ಲಿ ಫುಟ್ಬಾಲ್ ಅತ್ಯಂತ ಜನಪ್ರಿಯ ಕ್ರೀಡೆ. ವಿಶೇಷವಾಗಿ ಕಾರ್ಮಿಕ ಚಳುವಳಿ ಪ್ರಬಲವಾಗಿರುವ ಪ.ಬಂಗಾಳ ಹಾಗೂ ಕೇರಳದಲ್ಲಿ ಈ ಕ್ರೀಡೆ ಅತ್ಯಂತ ಜನಪ್ರಿಯ. ಎರಡೂ ರಾಜ್ಯಗಳಲ್ಲಿ ಫುಟ್ಬಾಲ್ ಜನಜೀವನದ ಒಂದು ಭಾಗವಾಗಿದೆ. ಕೇರಳದ ಕಣ್ಣೂರಿನ ಎಡ ಚಳುವಳಿಯ ಅನೇಕ ನೇತಾರರು ಪ್ರಸಿದ್ಧ ಫುಟ್ಬಾಲ್ ಆಟಗಾರರಾಗಿದ್ದರು. ಇದಲ್ಲದೆ ಗೋವಾ, ಬೆಂಗಳೂರು, ತಮಿಳುನಾಡು, ಆಂಧ್ರ, ಪಂಜಾಬ್, ಮುಂಬೈಗಳಲ್ಲಿ ಫುಟ್ಬಾಲ್ ಜನಪ್ರಿಯ. ಭಾರತ ಫುಟ್ಬಾಲ್‌ನಲ್ಲಿ ಒಲಂಪಿಕ್ಸ್‌ನಲ್ಲಿ ಸೆಮಿಫೈನಲ್ ತಲುಪಿದೆ. ಎರಡು ಬಾರಿ ಏಷ್ಯನ್ ಕ್ರೀಡೆಗಳಲ್ಲಿ ಚಿನ್ನದ ಪದಕ ಹಾಗೂ ಒಮ್ಮೆ ಬೆಳ್ಳಿ ಪದಕ ಗಳಿಸಿದೆ. 1950 ರಲ್ಲಿ ಭಾರತ ಒಲಂಪಿಕ್ಸ್‌ನಲ್ಲಿ ತೋರಿದ ಪ್ರತಿಭೆ ಮೇರೆಗೆ ವಿಶ್ವಕಪ್ ಫುಟ್ಬಾಲ್‌ನಲ್ಲಿ ಆಡಲು ಅರ್ಹತೆ ಗಳಿಸಿತ್ತು. ಆದರೆ ಅಂದು ಭಾರತದ ಅತ್ಯಂತ ಪ್ರತಿಭಾನ್ವಿತ ಆಟಗಾರರು ಬರಿಗಾಲಿನಲ್ಲಿ ಆಡುವ ಕೌಶಲ್ಯ ಹೊಂದಿದ್ದು, ವಿಶ್ವಕಪ್‌ನಲ್ಲಿ ಬೂಟ್ ಧರಿಸಿ ಆಡುವುದು ಕಡ್ಡಾಯವಾದುದರಿಂದ 1950 ರ ವಿಶ್ವಕಪ್‌ನಲ್ಲಿ ಭಾರತ ಆಡಲು ಅನರ್ಹವಾಯಿತು. ನಂತರದ ವರ್ಷದಲ್ಲಿ ಸರ್ಕಾರದ ಅಸಡ್ಡೆಯಿಂದ ಹಾಗೂ ಆಡಳಿತ ಅವ್ಯವಸ್ಥೆಯಿಂದ ಫುಟ್ಬಾಲ್‌ನಲ್ಲಿ ಭಾರತ ಮೇಲಿಲ್ಲ. ಆದರೆ ಒಂದು ಸಂತಸದ ವಿಷಯವೆಂದರೆ ಭಾರತದ ತಮಿಳುನಾಡಿನ ಕೆ.ಶಂಕರ್ ಈ ಬಾರಿಯ ವಿಶ್ವಕಪ್ ಪಂದ್ಯಾವಳಿಯಲ್ಲಿ ತೀರ್ಪುಗಾರರಾಗಿ ಆಯ್ಕೆಯಾಗಿ ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದಾರೆ. ಆಡಳಿತ ವ್ಯವಸ್ಥೆಯ ಬದಲಾವಣೆಯೊಂದಿಗೆ ಫುಟ್ಬಾಲ್‌ಗೆ ಭಾರತದಲ್ಲಿ ಉತ್ತಮ ಭವಿಷ್ಯ ಕಾಣಬಹುದು.



ವಿಜಯದ ಸಂಭ್ರಮದಲ್ಲಿ ಸೆನೆಗಲ್ ಆಟಗಾರರು.



# ಫುಟ್ಬಾಲ್ ದಿಗ್ಗಜಗಳು

ಆರ್.ಡಿ.ಮಿಲ್ಕಿಯೋರ್

ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಗಳು ಮೇ 31 ರಂದು ಆರಂಭವಾಗಿವೆ. ವಿಶ್ವದ ಜನಪ್ರಿಯ ಕ್ರೀಡೆ ನಡೆಯುತ್ತಿರುವಾಗ ಈವರೆಗೆ ಈ ಕ್ರೀಡೆಯಲ್ಲಿ ಜಗದ್ವಿಖ್ಯಾತರಾದ ಇಬ್ಬರು ಫುಟ್ಬಾಲ್ ಪಟುಗಳನ್ನು ಈ ಸಂದರ್ಭದಲ್ಲಿ ವಿಶೇಷವಾಗಿ ನೆನಪಿಸಿಕೊಳ್ಳುವುದು ಅಗತ್ಯವಿದೆ. ಕಳೆದ ಶತಮಾನದಲ್ಲಿ ಫುಟ್ಬಾಲ್‌ನಲ್ಲಿ ಅಸಂಖ್ಯ ತಾರೆಯರು ಉದಯಿಸಿ ಅಸ್ತಮಿಸಿದ್ದಾರೆ. ಕೆಲವರು ಇಂದಿಗೂ ಬದುಕಿದ್ದಾರೆ. ಆದರೆ ಬ್ರೆಜಿಲ್‌ನ ಪೀಲೆ ಹಾಗೂ ಅರ್ಜೆಂಟಿನಾದ ಡೈಗೋ ಮರಡೋನಾ ರಷ್ಟು ಖ್ಯಾತಿ ಪಡೆದ ಫುಟ್ಬಾಲ್ ತಾರೆಯರು ಯಾರೂ ಇಲ್ಲ. ವರ್ಣಬೇಧ, ಗುಲಾಮಗಿರಿಯ ನೋವುಗಳನ್ನು ಶತಮಾನಗಳಿಂದ ಅನುಭವಿಸಿದ ನೀಗ್ರೋ ಜನಾಂಗದಲ್ಲಿ ಹುಟ್ಟಿ ಬ್ಲ್ಯಾಕ್ ಪರ್ಲ್ ಹಾಗೂ ಸಾಮ್ರಾಟನೆಂದು ಖ್ಯಾತನಾದ ಬ್ರೆಜಿಲ್‌ನ ಪೀಲೆ ಹಾಗೂ ಅರ್ಜೆಂಟಿನಾದ ಕಾರ್ಮಿಕರ ವಸತಿಯಿಂದ ಕೊಳಚಿ ಪ್ರದೇಶದಲ್ಲಿ ಹುಟ್ಟಿ ಅರ್ಜೆಂಟಿನಾ ಹಾಗೂ ಯುರೋಪ್‌ನಲ್ಲಿ ತನ್ನ ಫುಟ್ಬಾಲ್ ಆಟದ ಕೌಶಲ್ಯದಿಂದ ಖ್ಯಾತನಾಗಿ ಇದೀಗ ಕ್ಯೂಬಾದ ಶಾಂತಿ ರಾಯಭಾರಿಯಾಗಿರುವ ಹಾಗೂ ಸಾಮ್ರಾಜ್ಯಶಾಹಿ ಅಮೆರಿಕಾವನ್ನು ತೀವ್ರವಾಗಿ ವಿರೋಧಿಸುವ ಡೈಗೋ ಮರಡೋನಾರ ಒಂದು ಕಿರು ಪರಿಚಯ ಇಲ್ಲಿದೆ.

ಫುಟ್ಬಾಲಿನಲ್ಲಿ ಕಳೆದ ಶತಮಾನದಲ್ಲಿ ಇಬ್ಬರೂ ಶ್ರೇಷ್ಠ ಆಟಗಾರರಲ್ಲಿ ಒಬ್ಬ ಬ್ರೆಜಿಲ್‌ನ ಪೀಲೆ, ಮತ್ತೊಬ್ಬ ಅರ್ಜೆಂಟೈನಾದ ಡೈಗೊ ಮರಡೋನ. ಪರ್ತಕರ್ತರು ನಡೆಸಿದ ಸಮೀಕ್ಷೆಯಲ್ಲಿ ಇಬ್ಬರೂ ಕಳೆದ ಶತಮಾನದ ಶ್ರೇಷ್ಠ ಫುಟ್ಬಾಲ್ ಆಟಗಾರರೆಂದು ಆರಿಸಲ್ಪಟ್ಟಿದ್ದಾರೆ. ಡೈಗೊ ಮರಡೋನ ಅರ್ಜೆಂಟೈನಾದಲ್ಲಿ ಇಂದಿಗೂ ಜೀವಂತ ದಂತಕತೆ. ಅರ್ಜೆಂಟಾನಾದ ಸ್ಲಂ ಒಂದರ ತೀರಾ ಬಡ ಕುಟುಂಬದಲ್ಲಿ ಜನಿಸಿದ ಮರಡೋನ ಫುಟ್ಬಾಲ್ ವೃತ್ತಿಪರನಾಗಿ ಕೋಟ್ಯಾಧಿಪತಿಯಾದ. 17ನೇ ವಯಸ್ಸಿನಲ್ಲಿ ಅರ್ಜೆಂಟೈನಾ ರಾಷ್ಟ್ರ ತಂಡಕ್ಕೆ ಆಯ್ಕೆಯಾಗಿ 1978ರ ವಿಶ್ವ ಕಪ್ ಆಡುವ ಸಾಮರ್ಥ್ಯವಿದ್ದಾಗಲೂ ಎಳೆವಯಸ್ಸು ಎಂಬ ಕಾರಣದಿಂದ 1978ರಲ್ಲಿ ರಾಷ್ಟ್ರದ ಪರ ಆಡಲು ಅವಕಾಶ ನಿರಾಕರಿಸಲಾಯಿತು. 1982ರ ವಿಶ್ವಕಪ್ ಹಾಗೂ 1986ರ ವಿಶ್ವಕಪ್ ನಲ್ಲಿ ಅರ್ಜೆಂಟೈನಾದ ಪರ ಆಡಿ 1986ರಲ್ಲಿ ಅಜೆಂಟೈನಾ ವಿಶ್ವಕಪ್ ಗೆಲ್ಲುವಲ್ಲಿ ಮುಖ್ಯರೂವಾರಿ. ಮುಂದೆ ಯೂರೋಪ್‌ನ ಕ್ಲಬ್‌ಗಳಿಗೆ ವೃತ್ತಿಪರ ಆಟಗಾರನಾಗಿ ಯುರೋಪ್‌ನಲ್ಲಿ ಪ್ರಖ್ಯಾತನಾದಾತ. ಮುಂದೆ ದುರಂತಮಯವಾಗಿ ಒತ್ತಡ ಜೀವನಕ್ಕೆ ಒಳಗಾಗಿ ಮಾದಕ ವಸ್ತು ವ್ಯಸನಿಯಾಗಿ ಆಟದಿಂದ ಬಹಿಷ್ಕರಿಸಲ್ಪಟ್ಟ ಮಾದಕ ವಸ್ತು ಸೇವನೆ ದುಷ್ಪರಿಣಾಮ ಬಗ್ಗೆ ಚಿಕಿತ್ಸೆ ಅಮೇರಿಕಾಕ್ಕೆ ಭೇಟಿ ನೀಡಲು ಈತನಿಗೆ ವೀಸಾ ನಿರಾಕರಿಸಲಾಯಿತು. ಈ ಸಂದರ್ಭದಲ್ಲಿ ಕ್ಯೂಬಾ ಅಧ್ಯಕ್ಷ ಫಿಡೆಲ್ ಕ್ಯಾಸ್ಟ್ರೋರವರ ವೈಯುಕ್ತಿಕ ಆಹ್ವಾನದ ಮೇಲೆ ಕ್ಯೂಬಾದಲ್ಲಿ ಮಾದಕ ವಸ್ತು ದುಷ್ಪರಿಣಾಮ ಬಗ್ಗೆ ಇಂದಿಗೂ ಚಿಕಿತ್ಸೆ ಪಡೆಯುತ್ತಿದ್ದಾನೆ "ಕ್ಯೂಬಾದ ವೈದ್ಯಕೀಯ ವ್ಯವಸ್ಥೆ ಜಗತ್ತಿನಲ್ಲೇ ಶ್ರೇಷ್ಠ ಎಂದು ಘೋಷಿಸಿರುತ್ತಾನೆ. ಇದೀಗ ಆತ ಕ್ಯೂಬಾದ ವರ ಶಾಂತಿ ರಾಯಭಾರಿ ಹಾಗೂ ಕ್ಯೂಬಾ ಆಯೋಜಿಸಿರುವ ಲ್ಯಾಟಿನ್ ಅಮೇರಿಕಾ ರಾಷ್ಟ್ರಗಳ ಚಳವಳಿಗೆ ಶೃಂಗ ಸಭೆಗಳ ಪ್ರಮುಖ ಕಾರ್ಯಕರ್ತ.

ಫುಟ್ಬಾಲ್ ಆಟದಲ್ಲಿ ಬ್ರೆಜಿಲ್‌ಗೆ ಶ್ರೇಷ್ಠ ಸ್ಥಾನ. ಫುಟ್ಬಾಲ್ ಬ್ರೆಜಿಲ್‌ನ ಜನಜೀವನದ ಒಂದು ಭಾಗ. ನಾಲ್ಕು ಬಾರಿ ವಿಶ್ವಕಪ್ ವಿಜೇತ ರಾಷ್ಟ್ರ. ಈ ದೇಶದ ಆಟಗಾರ ಪೀಲೆ (ನಿಜವಾದ ಹೆಸರು ಎಡ್‌ಸನ್ ಅರಾಂಟೆಸ್ ಡಿ. ನಸಿಮೆಂಟೊ) ಒಂದು ಜೀವಂತ ದಂತಕತೆ. ಇಂದಿಗೂ ವಿಶ್ವದ ಫುಟ್ಬಾಲ್ ಪ್ರೇಮಿಯರ ಕಣ್ಮಣಿ. 1958, 62 ಹಾಗೂ 1970 ರಲ್ಲಿ ಬ್ರೆಜಿಲ್‌ಪರ ಆಡಿ ವಿಶ್ವಕಪ್ ಗೆದ್ದ ರೂವಾರಿ. ಬ್ಲಾಕ್‌ಪರ್ಲ್ ಎಂಬ ಹೆಸರಿನಿಂದ ಜಗತ್ತಿನಾದ್ಯಂತ ಪ್ರಸಿದ್ಧಿಯಾದ ನೀಗ್ರೋ ಸಂಜಾತ. ಸಾಮ್ರಾಜ್ಯಶಾಹಿಗಳ ವಸಾಹತುಗಳಾದ ಆಫ್ರಿಕಾ ಕಪ್ಪು ಖಂಡದಿಂದ ಗುಲಾಮರಾಗಿ, ಯೂರೋಪ್, ಅಮೇರಿಕಾ ಖಂಡ ತಲುಪಿದ ನಿಗ್ರೋಗಳು ಮುಂದೆ ಗುಲಾಮಗಿರಿ ವರ್ಣಬೇಧ ನೀತಿಯ ಕೀಳರಿಮೆ, ನೋವುಗಳಿಂದ ಹೊರಬರಲು ಕ್ರೀಡೆಯನ್ನು ಆರಿಸಿಕೊಂಡರು. ಇಂದಿಗೂ ವಿಶ್ವದಲ್ಲಿ ಎಲ್ಲಾ ಕ್ರೀಡೆಗಳಲ್ಲಿ ನೀಗ್ರೋಗಳೇ ಮುಂದೆ. ಪೀಲೆ ಇದರ ಒಂದು ಭಾಗ. ಬ್ರೆಜಿಲ್ ಅಧ್ಯಕ್ಷ ಸಹಾ ಆಗುವ ಸಂಭವವಿದ್ದಾತ. ಪೀಲೆಯಷ್ಟು ಜನಪ್ರಿಯತೆಯನ್ನು ಯಾವ ಕ್ರೀಡಾಪಟುವೂಗಳಿಸಿಲ್ಲ. ಪೀಲೆಯನ್ನು ಇಂದಿಗೂ ಸಾಮ್ರಾಟ ಪೀಲೆ ಎಂದೆ ಪತ್ರಿಕೆ, ಜನ ಕರೆಯುತ್ತಾರೆ. ಫುಟ್ಬಾಲ್ ಲೋಕದ ಅಭಿಶಕ್ತ ಸಾಮ್ರಾಟ. ಪೀಲೆಯ ಜನಪ್ರೀಯತೆ ಬಗ್ಗೆ ಅನೇಕ ಜೀವಂತ ಕತೆಗಳಿವೆ. 88 ರಾಷ್ಟ್ರಗಳಿಗೆ ಭೇಟಿ ನೀಡಿದ 10 ರಾಜರು, 5 ಚಕ್ರವರ್ತಿಗಳು, ಇಬ್ಬರು ಪೋಪ್, 70 ರಾಷ್ಟ್ರಾಧ್ಯಕ್ಷರು, 40 ರಾಷ್ಟ್ರ ನಾಯಕರನ್ನು ಭೇಟಿ ಮಾಡಿದ ವಿಶ್ವದ ಶ್ರೇಷ್ಠ ಕ್ರೀಡಾಳು. ವಿಶ್ವದ ಅನೇಕ ರಾಷ್ಟ್ರಗಳ ಗೌರವ ಪ್ರಾಪ್ತಿ ವಿಶ್ವಸಂಸ್ಥೆಯ ಅನೇಕ ಅಂಗಸಂಸ್ಥೆಗಳ ರಾಯಭಾರಿ.



ಪೀಲೆ



ಮರಡೋನಾ

ಪೀಲೆ ನೈಜೀರಿಯಾದಲ್ಲಿ ಆಡುವ ಸಂದರ್ಭದಲ್ಲಿ ನೈಜೀರಿಯಾ ಹಾಗೂ ಬೈಯಾಪರ್ ಜೊತೆ ನಡೆಯುತ್ತಿದ್ದ ಯುದ್ಧಕ್ಕೆ ಕದನ ವಿರಾಮ ಘೋಷಿಸಲಾಗಿತ್ತು. ಇರಾನಿನ ಸಾಮ್ರಾಟ ಶಾ. (ಸರ್ವಾಧಿಕಾರಿ ಕೂಡ) ಪೀಲೆಯನ್ನು ಭೇಟಿ ಮಾಡಲು ಅಂತರಾಷ್ಟ್ರೀಯ ವಿಮಾನ ನಿಲ್ದಾಣವೊಂದರಲ್ಲಿ 3 ಗಂಟೆಗಳ ಕಾಲ ಕಾದಿದ್ದ ಚೀನಾದ ಸೈನಿಕರು ಬ್ರಿಟಿಷ್ ವಸಾಹತು ಆಗಿದ್ದ ಹಾಂಕಾಂಗ್ ಗಡಿ ದಾಟಿ ಪೀಲೆ ಆಡುವುದನ್ನು ನೋಡಲು ಬಂದಿದ್ದರು. ಪೀಲೆ ಭಾರತಕ್ಕೆ ಭೇಟಿ ನೀಡಿ ಫುಟ್ಬಾಲ್ ಮೆಕ್ಕಾ ಕಲ್ಕತ್ತಾದಲ್ಲಿ ಮೋಹನ್ ಭಾಗನ್ ತಂಡದೊಡನೆ ಪಂದ್ಯ ಆಡಿದ್ದ. ಇಡೀ ಕಲ್ಕತ್ತಾ ಈ ಸಂದರ್ಭದಲ್ಲಿ ರೋಮಾಂಚನಗೊಂಡಿತ್ತು. ಕಳೆದ ಶತಮಾನದ ಶ್ರೇಷ್ಠ ಫುಟ್ಬಾಲ್ ಪಟು ಎಂಬ ಬಿರುದು ಪಡೆದಾತ.

PRB DECR 319-79/79 AIKYARANGA WEEKLY
Reg. No. 17015/64 CPM(G)/KA/BGS-119/2002
ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹೊಸ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.